ಸಂಪುಟ: 06 ಸಂಚಿಕೆ: 220 ಪುಟಗಳು: 08 ಸೋಮವಾರ 26 ಅಕ್ಟೋಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಮುಂಜಾನೆ ಮಾತು

ನಿರಂತರ ಉರಿಯುವ ಸೂರ್ಯನನ್ನು ನೋಡಿ ಕತ್ತಲು ಹೇಗೆ ಭಯಪಡುತ್ತೋ ಹಾಗೆ ನಿರಂತರ ಕಷ್ಟಪಡುವ ವ್ಯಕ್ತಿಯನ್ನು ನೋಡಿ ಸೋಲು ಕೂಡ ಭಯಪಡುತ್ತೆ.
-ಸ್ವಾಮಿ ವಿವೇಕಾನಂದ

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಪ್ರಜಾಪ್ರಭುತ್ವಕ್ಕೆ ಕಾಂಗ್ರೆಸ್‌ನಿಂದಲೇ ಕನ್ನ: ವೋಟ್ ಚೋರಿ ಆರೋಪಿಸಿ ಕಾಂಗ್ರೆಸ್ ವಿರುದ್ಧ ಆರ್ ಅಶೋಕ್ ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

ದಿನ ಬೆಳಗಾದರೆ ವೋಟ್ ಚೋರಿ ಎಂದು ಬಿಜೆಪಿ ಹಾಗೂ ಇತರ ಪಕ್ಷಗಳ ವಿರುದ್ಧ ಸುಳ್ಳಿನ ಸರಮಾಲೆ ಹೆಣೆಯುವ ಕಾಂಗ್ರೆಸ್‌ಗೆ ಈಗ ಸ್ವಪಕ್ಷದ ನಾಯಕರ ನಕಲಿ ಮತದಾನದ ಆರೋಪವೇ ತಿರುಗೇಟು ನೀಡಿದೆ. ಹಾವೇರಿಯಲ್ಲಿ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯ ವೇಳೆ ಸಚಿವರ ಸಮ್ಮುಖದಲ್ಲೇ ನಕಲಿ ಮತದಾನ ನಡೆದಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಎಕ್ಸ್ ಪೋಸ್ಟ್ ಮಾಡುವ ಮೂಲಕ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಆರ್. ಅಶೋಕ್ ಪೋಸ್ಟ್‌ನಲ್ಲಿ ಹೇಳಿರುವಂತೆ, ಹಾವೇರಿಯಲ್ಲಿ ನಡೆದ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಅವರೊಂದಿಗೆ ಬಂದ ಕಾಂಗ್ರೆಸ್ ಕಾರ್ಯಕರ್ತೆ ಶಿಲ್ಪಾ ಬಡಮ್ಮನವರ ಎಂಬುವವರು, ಸಂಜೀವಕುಮಾರ್ ನೀರಲಗಿ ಅವರ ಪತ್ನಿ ಆಶಾ ಪಾಟೀಲ್ ಅವರ ಹೆಸರಿನಲ್ಲಿ ನಕಲಿ ಮತ ಚಲಾಯಿಸಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ತಮ್ಮದೇ ಸಮ್ಮುಖದಲ್ಲಿ ನಡೆದ ಈ ಅಕ್ರಮದ ಬಗ್ಗೆ ಸಚಿವರು ಹೊಣೆಗಾರಿಕೆಯಿಂದ ಉತ್ತರಿಸುವ ಬದಲು ಜಾರಿಕೊಳ್ಳುತ್ತಿದ್ದಾರೆ ಎಂದು ಅವರು ದೂರಿದ್ದಾರೆ. ''ಬೇರೆಯವರಿಗೆ ಪ್ರಜಾಪ್ರಭುತ್ವ ಹಾಗೂ ಪಾರದರ್ಶಕತೆಯ ಪಾಠ ಹೇಳುವ ಕಾಂಗ್ರೆಸ್ ನಾಯಕರು, ತಮ್ಮ ಪಕ್ಷದವರೇ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಾಗ ಮೌನಕ್ಕೆ ಶರಣಾಗಿದ್ದಾರೆ, ಎಂದು ಅಶೋಕ್ ಕಿಡಿಕಾರಿದ್ದಾರೆ.

ಕೆಆರ್‌ಎಸ್ ಡ್ಯಾಂನಲ್ಲಿ ಹೆಚ್ಚಿದ ಒಳಹರಿವು!

• ಉದಯವಾಹಿನಿ, ಬೆಂಗಳೂರು

ಕಾವೇರಿ ಜಲಾನಯನ ಪ್ರದೇಶ ಹಾಗೂ ಕೊಡಗು ಭಾಗದಲ್ಲಿ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಉತ್ತಮ ಮಳೆಯಿಂದಾಗಿ ರಾಜ್ಯದ ಪ್ರಮುಖ ಜಲಾಶಯಗಳಿಗೆ ನೀರಿನ ಒಳಹರಿವು ಗಣನೀಯವಾಗಿ ಹೆಚ್ಚಾಗಿದೆ. ಹಲವು ದಿನಗಳಿಂದ ಮಳೆಯಿಲ್ಲದೆ ಬತ್ತಿಹೋಗುವಂತಿದ್ದ ಕೆಆರ್‌ಎಸ್ ಸೇರಿದಂತೆ ಪ್ರಮುಖ ಅಣೆಕಟ್ಟುಗಳಲ್ಲಿ ನೀರಿನ ಮಟ್ಟ ಏರಿಕೆಯಾಗುತ್ತಿರುವುದು ರೈತರು ಹಾಗೂ ಸಾರ್ವಜನಿಕರಲ್ಲಿ ನಿರಾಳ ಮೂಡಿಸಿದೆ. ಜಲಾಶಯಗಳ ನೀರಿನ ಮಟ್ಟದಲ್ಲಿ ಆಗುತ್ತಿರುವ ಈ ಸಕಾರಾತ್ಮಕ ಬದಲಾವಣೆಯು ಮುಂಬರುವ ದಿನಗಳಲ್ಲಿ ಕುಡಿಯುವ ನೀರು ಮತ್ತು ಕೃಷಿಗೆ ಅನುಕೂಲವಾಗಲಿದೆ. ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕಾವೇರಿ ಕೊಳ್ಳದ ಜೀವನಾಡಿ ಡ್ಯಾಂಗೆ ಇಂದು 9,457 ಕ್ಯೂಸೆಕ್ ಒಳಹರಿವು ದಾಖಲಾಗಿದೆ. 124.80 ಅಡಿ ಗರಿಷ್ಠ ಮಟ್ಟದ ಈ ಅಣೆಕಟ್ಟಿನಲ್ಲಿ, ನೀರಿನ ಮಟ್ಟ 102.98 ಅಡಿಗೆ ಏರಿಕೆಯಾಗಿದೆ. ಸದ್ಯ 25.235 ಟಿಎಂಸಿ ನೀರು ಸಂಗ್ರಹವಿದ್ದು, ಡ್ಯಾಂನಿಂದ 1,589 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಮೈಸೂರು ಜಿಲ್ಲೆಯ ಕಬಿನಿ ಜಲಾಶಯಕ್ಕೆ ಒಳಹರಿವು ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಪ್ರಸ್ತುತ 10,477 ಕ್ಯೂಸೆಕ್ ನೀರು ಹರಿದುಬರುತ್ತಿದೆ.

ಏನ್ ಚಿನ್ನ.. ಮನೆಯವರಿಗೆ ತಲುಪಿಸಿ ಅಂದಿದ್ನಲ್ಲ ಅಂತ ದರ್ಶನ್ ಹೇಳಿದ್ರೂ ಧನ್ವೀರ್ ಹಣ ಕೊಟ್ಟಿಲ್ಲ

• ಉದಯವಾಹಿನಿ, ಬೆಂಗಳೂರು

ನಟ ಧನ್ವೀರ್ ಮತ್ತು ವಿಜಯಲಕ್ಷ್ಮಿ ಅವರ ಜಗಳದ ಅಸಲಿ ಸತ್ಯವನ್ನು ದರ್ಶನ್ ಆಪ್ತ ವೇಲು ನಾಯ್ಕರ್ ಬಿಚ್ಚಿಟ್ಟಿದ್ದಾರೆ. ಹಣ ಕೊಡುವಂತೆ ದರ್ಶನ್ ಹೇಳಿದರೂ ಧನ್ವೀರ್ ದುಡ್ಡು ಕೊಡ್ತಿಲ್ಲ ಎಂದು ವೇಲು ಆರೋಪಿಸಿದರು. ಧನ್ವೀರ್, ವಿಜಯಲಕ್ಷ್ಮಿ ಅವರ ಕರೆ ಪಿಕ್ ಮಾಡ್ತಿಲ್ಲ. ಹಣ ಕೇಳಿದಾಗ ಧನ್ವೀರ್ ಅಂತರ ಕಾಯ್ದುಕೊಳ್ಳುತ್ತಿದ್ದರು. ಒಂದೆರೆಡು ವರ್ಷದ ಹಿಂದಿನ ಹಣಕಾಸಿನ ವಿಚಾರ. ನೀವು ಪರಿಚಯ ಅಲ್ವಾ, ಅದ್ಕೆ ಒಮ್ಮೆ ಮಾತನಾಡೋಕೆ ವಿಜಯಲಕ್ಷ್ಮಿ ಅವರು ಹೇಳಿದರು.

ಧನ್ವೀರ್ ಅವರ ತಂದೆ ಜೊತೆ ಮಾತನಾಡಿದ್ದೆ. ನಾನು ಮಗನ ಜೊತೆ ಮಾತನಾಡ್ತೇನೆ ಅಂತ ಹೇಳಿದ್ರು. ಧನ್ವೀರ್ ಹಣ ವಾಪಾಸ್ ಕೊಡ್ತಿಲ್ಲ ಅನ್ನೋದು ದರ್ಶನ್‌ಗೆ ಗೊತ್ತಾದಾಗ, ಧನ್ವೀರ್ ತಂದೆ ಜೊತೆ ಮಾತನಾಡೋಕೆ ನನಗೆ ಹೇಳಿದ್ರು. ಜೈಲಲ್ಲಿ ಹಣ ಕೊಡುವಂತೆ ದರ್ಶನ್ ಧನ್ವೀರ್‌ಗೆ ಹೇಳಿದ್ರು. ಏನ್ ಚಿನ್ನ.. ಮನೆಯವ್ರಿಗೆ ತಲುಪಿಸಿ ಅಂದಿದ್ನಲ್ಲ ಅಂದ್ರು. ವೇಲು ಅವರಿಗೆ ತಲುಪಿಸಿ.. ಆಮೇಲೆ ಮಾತಾಡ್ತೀನಿ ನಿನ್ನ ಜೊತೆ ಅಂತ ಧನ್ವೀರ್‌ಗೆ ಹೇಳಿದ್ರು. ಆಮೇಲೆಯಿಂದ ಫೋನ್‌ಗೆ ಧನ್ವೀರ್ ಸಿಗ್ತಿಲ್ಲ ಎಂದರು.

ಸಂಜೆಯೂ ಕಸ ಸಂಗ್ರಹಿಸಲು ನಿಮ್ಮ ಮನೆಗೆ ಬರುತ್ತವೆ ವಾಹನಗಳು!

• ಉದಯವಾಹಿನಿ, ಬೆಂಗಳೂರು

ಕೆಲಸಕ್ಕೆ ಬೇಗ ಮನೆಯಿಂದ ಹೊರಡುವ ಅಥವಾ ಸಂಜೆ ತಡವಾಗಿ ಹಿಂತಿರುಗುವ ನಿವಾಸಿಗಳು ಶೀಘ್ರದಲ್ಲೇ ಮನೆಯ ತ್ಯಾಜ್ಯವನ್ನು ವಿಲೇವಾರಿ ಮಾಡುವುದು ಸುಲಭವಾಗಬಹುದು. ಬೆಂಗಳೂರು ದಕ್ಷಿಣ ನಗರ ನಿಗಮವು ಐದು ವಾರ್ಡ್‌ಗಳಲ್ಲಿ ಹಸಿ ಮತ್ತು ಒಣ ತ್ಯಾಜ್ಯವನ್ನು ಸಂಗ್ರಹಿಸುವ ಪೈಲಟ್ ಯೋಜನೆಯನ್ನು ಪರಿಚಯಿಸಿದೆ. ಇದು ರಸ್ತೆಬದಿಯ ಕಸ ಸಂಗ್ರಹವನ್ನು ಕಡಿಮೆ ಮಾಡುವ ಮತ್ತು ನೆರೆಹೊರೆಯ ಸ್ವಚ್ಛತೆಯನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ಮತ್ತು ಹೊಂಗಸಂದ್ರದ ನಾಲ್ಕು ವಾರ್ಡ್‌ಗಳನ್ನು ಈ ಯೋಜನೆ ಒಳಗೊಂಡಿದೆ. ನಿಯಮಿತ ಬೆಳಗಿನ ಸಂಗ್ರಹಣೆಯ ಸಮಯದಲ್ಲಿ ತ್ಯಾಜ್ಯವನ್ನು ಹಸ್ತಾಂತರಿಸಲು ಸಾಧ್ಯವಾಗದ ಮನೆಗಳಿಗೆ ಇದು ಹೆಚ್ಚುವರಿ ಅವಕಾಶವನ್ನು ಒದಗಿಸುತ್ತದೆ.

ಕೃಷಿ ಕ್ಷೇತ್ರಕ್ಕೆ ಭಾರತ ಕೊಡುಗೆ ಅನನ್ಯ ನಮೋ ಹೊಸ ಚೈತನ್ಯ

- ಚಿನ್ಮಯ ಅಮೃತ ಮಹೋತ್ಸವ ಜಾಗತಿಕ ಸಮ್ಮೇಳನ ಉದ್ಘಾಟಿಸಿದ ಪ್ರಧಾನಿ ಮೋದಿ.
- ಸ್ವಾಮಿ ಚಿನ್ಮಯಾನಂದ ಅವರ ಹೋಲೋಗ್ರಾಫಿಕ್ ಅವತಾರದ ಜೊತೆ ಪ್ರಧಾನಿ ಮೋದಿ ಸಂವಾದ.
- ಪ್ರಧಾನಿ ಮೋದಿ ಅವರ ಆಡಳಿತ ವೈಖರಿಗೆ ಸ್ವಾಮಿ ಚಿನ್ಮಯಾನಂದ ಎಐ ಅವತಾರ ಮೆಚ್ಚುಗೆ.

ಕರ್ನಾಟಕದ ತೊಗರಿ ಬೇಳೆ ಮಾರುಕಟ್ಟೆ ವಿಸ್ತರಣೆಯ ಪ್ರಸ್ತಾಪ



ಸ್ವದೇಶಿ ಉತ್ಪನ್ನಗಳಿಗೆ ಉತ್ತೇಜನ

1993ರ ಭೇಟಿ ನೆನಪು

1993ರಲ್ಲಿ ಸ್ವಾಮಿ ಚಿನ್ಮಯಾನಂದ ಅವರೊಂದಿಗಿನ ತಮ್ಮ ಭೇಟಿಯನ್ನು ನೆನಪಿಸಿಕೊಂಡ ಪ್ರಧಾನಿ, ಆ ಆಧ್ಯಾತ್ಮಿಕ ನಾಯಕರ ವಾತ್ಸಲ್ಯ ಮತ್ತು ಆಶೀರ್ವಾದಗಳು ಮತ್ತೆ ಜೀವಂತಗೊಂಡಂತೆ ಭಾಸವಾಯಿತು. ಒಂದು ಕ್ಷಣ ನಾನು ಆ ಕಾಲಕ್ಕೆ ಮರಳಿದಂತೆ ಅನಿಸಿತು. ನನಗೆ ಇದೊಂದು ಭಾವನಾತ್ಮಕ ಕ್ಷಣ ಎಂದು ಹೇಳಿದರಲ್ಲದೇ, ಈ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ 'ಚಿನ್ಮಯ ಮಿಷನ್'ಗೆ ಧನ್ಯವಾದ ಅರ್ಪಿಸಿದರು. ಆ ಆಧ್ಯಾತ್ಮಿಕ ನಾಯಕರೊಂದಿಗಿನ ತಮ್ಮ ಮೊದಲ ಭೇಟಿಯನ್ನು ಸ್ಮರಿಸಿದ ಪ್ರಧಾನಿ ಮೋದಿ, 1993ರ ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಅವರನ್ನು ಭೇಟಿಯಾಗಿ, ಅಮೆರಿಕದ ಶಿಕಾಗೊದಲ್ಲಿ ನಡೆಯಲಿದ್ದ 'ವಿಶ್ವ ಧರ್ಮ ಸಂಸತ್ತು' ಶತಮಾನೋತ್ಸವ ಸಮಾರಂಭಕ್ಕೆ ಆಹ್ವಾನಿಸಿದ್ದಾಗಿ ತಿಳಿಸಿದರು. ಅವರು ನನ್ನ ಕೋರಿಕೆಯನ್ನು ಸ್ವೀಕರಿಸಿ, ವಿಶ್ವ ಧರ್ಮ ಸಂಸತ್ತು ಕುರಿತು ಜನರಿಗೆ ಅರಿವು ಮೂಡಿಸಲು ಅಲ್ಲಿಗೆ ತೆರಳಿದರು. ಆದರೆ ವಿಧಿಯಾಟ ಬೇರೆಯೇ ಇತ್ತು. ಕಾರ್ಯಕ್ರಮಕ್ಕೆ ಕೆಲವೇ ವಾರಗಳ ಮೊದಲು, ಆಗಸ್ಟ್ 3ರಂದು ಅವರು ನಮ್ಮನ್ನು ಅಗಲಿದರು ಎಂದು ಪ್ರಧಾನಿ ಮೋದಿ ಇತಿಹಾಸವನ್ನು ನೆನಪಿಸಿಕೊಂಡರು.

• ಉದಯವಾಹಿನಿ, ನವದೆಹಲಿ

ದೇಶವು ದೀಪಾವಳಿ ಹಬ್ಬವನ್ನು ಆಚರಿಸಲು ಸಜ್ಜಾಗುತ್ತಿರುವ ಹೊತ್ತಿನಲ್ಲಿ, ಸ್ಥಳೀಯ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳನ್ನು ಖರೀದಿಸುವ ಮೂಲಕ 'ವೋಕಲ್ ಫಾರ್ ಲೋಕಲ್' (ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ) ಅಭಿಯಾನವನ್ನು ಬಲಪಡಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಾಗರಿಕರಿಗೆ ಕರೆ ನೀಡಿದರು.ತಮ್ಮ ಮಾಸಿಕ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್‌ನಲ್ಲಿ ಭಾನುವಾರ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭಾರತೀಯ ಉತ್ಪನ್ನಗಳು ಸಾಧಿಸುತ್ತಿರುವ ಯಶಸ್ಸನ್ನು ವಿವರಿಸಿದರು.

ಬಿಹಾರದ ಮಖಾನಾ ಮತ್ತು ಕರ್ನಾಟಕದ ತೊಗರಿ ಬೇಳೆ ಜಗತ್ತಿನಾದ್ಯಂತ ಹೊಸ ಮಾರುಕಟ್ಟೆಗಳನ್ನು ಕಂಡುಕೊಳ್ಳುತ್ತಿವೆ. ಅದೇ ರೀತಿ, ಮಹಾರಾಷ್ಟ್ರದ ಬುಡಕಟ್ಟು ಸಮುದಾಯದ ಉತ್ಪನ್ನಗಳು, ತಮ್ಮ ಕಲಾ ವೈಭವವನ್ನು ಪ್ರತಿಬಿಂಬಿಸುವ ವಿಶಿಷ್ಟ ಪ್ಯಾಕೇಜಿಂಗ್ ನೊಂದಿಗೆ ಮನ್ನಣೆ ಪಡೆಯುತ್ತಿವೆ ಎಂದು ಮೋದಿ ಹೇಳಿದರು.

ಖಾದಿಯ ಜನಪ್ರಿಯತೆ ಹೆಚ್ಚುತ್ತಿದೆ. ಇದು ನಮ್ಮ ಸಂಪ್ರದಾಯಗಳನ್ನು ಜೀವಂತವಾಗಿರಿಸಿರುವ ಕುಶಲಕರ್ಮಿಗಳಿಗೆ ಬೆಂಬಲ ನೀಡುತ್ತದೆ. ನಮ್ಮ ಸ್ಥಳೀಯ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳನ್ನು ಆಯ್ಕೆ ಮಾಡುವ ಮೂಲಕ 'ವೋಕಲ್ ಫಾರ್ ಲೋಕಲ್' ಅಭಿಯಾನವನ್ನು ಬಲಪಡಿಸೋಣ ಎಂದು ಅವರು ಹೇಳಿದರು. ಪಂಜಾಬ್‌ನಲ್ಲಿ ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನು ಪುನರುಜ್ಜೀವನಗೊಳಿಸುತ್ತಿರುವ ಬಗ್ಗೆಯೂ ಮೋದಿ ಪ್ರಸ್ತಾಪಿಸಿದರು. ಖೇತಿ ವಿರಾಸತ್ ಮಿಷನ್' ಎಂಬ ಸಂಸ್ಥೆಯು ಸಾವಯವ ಕೃಷಿಗೆ ಹೊಸ ಚೈತನ್ಯ ತುಂಬುವ ಕೆಲಸ ಮಾಡುತ್ತಿದೆ ಎಂದು ಪ್ರಧಾನಿ ತಿಳಿಸಿದರು.

ಈ ತಂಡದ ಸದಸ್ಯರು ಪಂಜಾಬ್‌ನ ಮಾಲ್ವಾ ಪ್ರದೇಶದಲ್ಲಿ ನೈಸರ್ಗಿಕ ಹತ್ತಿ ಕೃಷಿಯನ್ನು ಉತ್ತೇಜಿಸಲು ಬಯಸಿದ್ದು, ಈ ಉಪಕ್ರಮಕ್ಕೆ 'ನವ್-ತ್ರಿಂಜನ್' ಎಂದು ಹೆಸರಿಟ್ಟಿದ್ದಾರೆ ಎಂದರು.

ಈ ಉಪಕ್ರಮದ ಅಡಿಯಲ್ಲಿ, ಯಾವುದೇ ರಾಸಾಯನಿಕಗಳನ್ನು ಬಳಸದೆ ಸಾವಯವ ಹತ್ತಿಯನ್ನು ಬೆಳೆಯಲಾಗುತ್ತದೆ. ಇಲ್ಲಿ ನೈಸರ್ಗಿಕ ಬಣ್ಣಗಳನ್ನು ಹೊಂದಿರುವ ಹತ್ತಿಯನ್ನು ಸಹ ಬೆಳೆಯಲಾಗುತ್ತದೆ. ಹೀಗಾಗಿ, ಅದರಿಂದ ತಯಾರಿಸಿದ ನೂಲು ಅಥವಾ ಬಟ್ಟೆಗಳಿಗೆ ಬಣ್ಣ ಹಾಕಲು ಪ್ರತ್ಯೇಕ ರಾಸಾಯನಿಕಗಳ ಅಗತ್ಯವಿರುವುದಿಲ್ಲ ಎಂದು ಪ್ರಧಾನಿ ಮೋದಿ ವಿವರಿಸಿದರು.

ಉತ್ತರಾಖಂಡದ ತೆಹ್ರಿ ಗರ್ವಾಲ್ ಜಿಲ್ಲೆಯ ಜನರು ಒಗ್ಗೂಡಿ ಹೆವಾಲ್' ನದಿಗೆ ಮರುಜೀವ ನೀಡುತ್ತಿರುವ ಬಗ್ಗೆಯೂ ಮೋದಿ ಮಾತನಾಡಿದರು. ಕೆಲವು ವರ್ಷಗಳ ಹಿಂದೆ ಹೆವಾಲ್ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗತೊಡಗಿತ್ತು.

ನದಿಯ ಸುತ್ತಮುತ್ತಲಿದ್ದ ನೈಸರ್ಗಿಕ ನೀರಿನ ಮೂಲಗಳು ಕೂಡ ಬತ್ತಿಹೋಗುತ್ತಿದ್ದವು. ಇಂತಹ ಪರಿಸ್ಥಿತಿಯಲ್ಲಿ, ಸ್ಥಳೀಯ ಆಡಳಿತ ಮತ್ತು ಗ್ರಾಮಸ್ಥರು ಕೈಜೋಡಿಸಿ, ಹೆವಾಲ್ ನದಿಯನ್ನು ಉಳಿಸಲು ಒಂದು ಅಭಿಯಾನವನ್ನು ಪ್ರಾರಂಭಿಸಿದರು ಎಂದು ಮೋದಿ ತಿಳಿಸಿದರು.ಈ ಪ್ರಯತ್ನದ ಭಾಗವಾಗಿ, ಮಳೆನೀರನ್ನು ಹಿಡಿದಿಟ್ಟುಕೊಳ್ಳಲು ಕ್ರಮಗಳನ್ನು ಕೈಗೊಳ್ಳಲಾಯಿತು.

ನೀರು ಮಣ್ಣಿನೊಳಗೆ ಇಂಗುವಂತೆ ವ್ಯವಸ್ಥೆ ಮಾಡಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳನ್ನು ನೆಡಲಾಯಿತು. ಇಂದು, ಈ ಉಪಕ್ರಮದ ಫಲವಾಗಿ ಹೆವಾಲ್ ನದಿಗೆ ಮರುಜೀವ ಬಂದಿದೆ. ಅಷ್ಟೇ ಅಲ್ಲದೆ, ಇದು ನೈಸರ್ಗಿಕ ನೀರಿನ ಹತ್ತಾರು ಮೂಲಗಳನ್ನು ಪುನರುಜ್ಜೀವನಗೊಳಿಸಲು ಸಹಾಯಕವಾಗಿದೆ ಎಂದು ಅವರು ಹೇಳಿದರು.

ತಮ್ಮ ರೇಡಿಯೋ ಭಾಷಣ 'ಮನ್ ಕಿ ಬಾತ್' ಕಾರ್ಯಕ್ರಮವು ದೇಶದ ಜನರ ಪ್ರಯತ್ನಗಳನ್ನು ಹತ್ತಿರದಿಂದ ಅರಿಯಲು ಮತ್ತು ಅವರ ಕೊಡುಗೆಗಳಿಗೆ ಗೌರವ ಸಲ್ಲಿಸಲು ತಮಗೊಂದು ತೀರ್ಥಯಾತ್ರೆಯಿದ್ದಂತೆ ಎಂದು ಪ್ರಧಾನ ಮಂತ್ರಿ ಇದೇ ವೇಳೆ ತಿಳಿಸಿದರು.

ಕಲಬುರಗಿ ತೊಗರಿ ಬೇಳೆಗೆ ವಿಶ್ವ ಮಾರುಕಟ್ಟೆ

ಕರ್ನಾಟಕದ ಕಲಬುರಗಿ ಜಿಲ್ಲೆಯ ತೊಗರಿ ಬೇಳೆ ವಿಶ್ವದಾದ್ಯಂತ ಹೊಸ ಮಾರುಕಟ್ಟೆಗಳನ್ನು ಕಂಡುಕೊಳ್ಳುತ್ತಿವೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದರು. ಮನ್ -ಕಿ -ಬಾತ್‌ನಲ್ಲಿ ಪ್ರಧಾನಿಯವರು ಈ ವಿಷಯ ಪ್ರಸ್ತಾಪಿಸಿರುವುದು ಗಮನಸೆಳೆದಿದೆ.ಬಿಹಾರದ ಮಖಾನಾ ಬುಡಕಟ್ಟು ಕಲೆಯ ಶ್ರೀಮಂತಿಕೆಯನ್ನು ಬಿಂಬಿಸುವ ಪ್ಯಾಕೇಜಿಂಗ್ ಮೂಲಕ ಮಹಾರಾಷ್ಟ್ರದ ಬುಡಕಟ್ಟು ಉತ್ಪನ್ನಗಳು ಮನ್ನಣೆ ಪಡೆಯುತ್ತಿವೆ ಎಂದರು.

ಖಾದಿಯ ಜನಪ್ರಿಯತೆ ಹೆಚ್ಚುತ್ತಿದ್ದು, ನಮ್ಮ ಸಂಪ್ರದಾಯಗಳನ್ನು ಜೀವಂತವಾಗಿರಿಸುವ ಕುಶಲಕರ್ಮಿಗಳಿಗೆ ಇದರಿಂದ ಬೆಂಬಲ ಸಿಗಲಿದೆ ಎಂದು ತಿಳಿಸಿದರು.

ಪೊಲೀಸರಿಂದ ತನಿಖೆ ಚುರುಕು

ಸಾಮಾಜಿಕ ಜಾಲತಾಣದ ಮೂಲಕ ವಿಡಿಯೋ ವೈರಲ್ ಆಗಿರುವ ಬಗ್ಗೆ ಗಮನಕ್ಕೆ ಬರುತ್ತಿದ್ದಂತೆ ಅಲರ್ಟ್ ಆಗಿರುವ ಪೊಲೀಸರು, ಸೋಷಿಯಲ್ ಮೀಡಿಯಾದಲ್ಲಿ ಹರಿಬಿಟ್ಟವರು ಯಾರು? ವಿಡಿಯೋ ಎಲ್ಲಿಂದ ಬಂದಿದೆ ಎಂಬ ಬಗ್ಗೆ ಸೈಬರ್ ಕ್ರೈಂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಘಟನೆ ಸ್ಥಳದಿಂದಲೂ ಸಾಕ್ಷ್ಯ ಸಂಗ್ರಹಿಸುತ್ತಿದ್ದಾರೆ. ಮೋದಿ ಭಾವಚಿತ್ರಕ್ಕೆ ದುಷ್ಕರ್ಮಿಗಳು ವಾಮಾಚಾರ ನಡೆಸಿರುವ ಘಟನೆಯನ್ನ ಗಂಭೀರವಾಗಿ ಪರಿಗಣಿಸಿರುವ ಉತ್ತರ ಪ್ರದೇಶ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಘಟನೆ ನಡೆದ ಸುತ್ತಮುತ್ತಲಿನ ಸ್ಥಳದಲ್ಲಿ ಅಳವಡಿಸಲಾಗಿರುವ ಸಿಸಿಟಿವಿಗಳನ್ನ ಪರಿಶೀಲನೆ ನಡೆಸುತ್ತಿದ್ದಾರೆ.

ಈ ಬಗ್ಗೆ ಘೋಸಿ ಸರ್ಕಲ್ ನ ಪೊಲೀಸ್ ಅಧಿಕಾರಿ ಸತ್ಯೇಂದ್ರ ಭೂಷಣ್ ತಿವಾರಿ ಅವರು ಮಾಹಿತಿ ನೀಡಿದ್ದಾರೆ.

ಕೃತ್ಯ ನಡೆಸಿರುವ ಅಪರಿಚಿತ ಆರೋಪಿಗಳ ವಿರುದ್ಧ ಬಿಎನ್‌ಎಸ್ ಆಕ್ಟ್ ಅಡಿ ಕೇಸ್ ದಾಖಲಿಸಿಕೊಳ್ಳಲಾಗಿದೆ.

ದೀಪಾವಳಿಗೆ 'ವೋಕಲ್ ಫಾರ್ ಲೋಕಲ್' ಚಳವಳಿ ಬಲಪಡಿಸಿ

ಮುಂಬರುವ ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಜನರು ಸ್ಥಳೀಯವಾಗಿ ತಯಾರಿಸುವ ಉತ್ಪನ್ನಗಳನ್ನೇ ಹೆಚ್ಚಾಗಿ ಖರೀದಿಸುವ ಮೂಲಕ 'ವೋಕಲ್ ಫಾರ್ ಲೋಕಲ್' (ಸ್ಥಳೀಯ ಉತ್ಪನ್ನಗಳು) ಅಭಿಯಾನವನ್ನು ಮತ್ತಷ್ಟು ಬಲಪಡಿಸಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಭಾನುವಾರ ಕರೆ ನೀಡಿದ್ದಾರೆ. ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ಉತ್ಪನ್ನಗಳು ವಿಶೇಷ ಮನ್ನಣೆ ಪಡೆಯುತ್ತಿರುವುದನ್ನು ಪ್ರಸ್ತಾಪಿಸಿ ಅವರು ಮಾತನಾಡಿದರು. ಬಿಹಾರದ 'ಮಖಾನಾ' (ತಾವರೆ ಬೀಜ) ಹಾಗೂ ಕರ್ನಾಟಕದ 'ತೊಗರಿ ಬೇಳೆ' ಇಂದು ವಿದೇಶಿ ಮಾರುಕಟ್ಟೆಗಳಲ್ಲಿ ಪ್ರಮುಖ ಆದ್ಯತೆ ಪಡೆಯುತ್ತಿವೆ. ಅದೇ ರೀತಿ ಮಹಾರಾಷ್ಟ್ರದ ಬುಡಕಟ್ಟು ಜನರ ಉತ್ಪನ್ನಗಳು ಅವರ ಕಲಾತ್ಮಕ ಪ್ಯಾಕಿಂಗ್ ಮೂಲಕ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿವೆ ಎಂದು ಮೋದಿ ತಿಳಿಸಿದರು. 'ಖಾದಿ ಉತ್ಪನ್ನಗಳ ಜನಪ್ರಿಯತೆ ದಿನೇದಿನೇ ಹೆಚ್ಚುತ್ತಿದ್ದು, ನಮ್ಮ ಪರಂಪರೆಯನ್ನು ಉಳಿಸುತ್ತಿರುವ ಕುಶಲಕರ್ಮಿಗಳಿಗೆ ಇದರಿಂದ ದೊಡ್ಡ ನೆರವು ಸಿಗುತ್ತಿದೆ. ಸ್ಥಳೀಯರು ತಯಾರಿಸಿದ ವಸ್ತುಗಳನ್ನೇ ಆದ್ಯತೆಯ ಮೇರೆಗೆ ಖರೀದಿಸುವ ಮೂಲಕ 'ವೋಕಲ್ ಫಾರ್ ಲೋಕಲ್' ಚಳವಳಿಯನ್ನು ನಾವೆಲ್ಲರೂ ಸೇರಿ ಇನ್ನಷ್ಟು ಶಕ್ತಿಶಾಲಿಯಾಗಿಸೋಣ' ಎಂದು ಅವರು ಹೇಳಿದರು.

ಆಪ್ತ ದೇಶಗಳೊಟ್ಟಿಗೆ ಸೇರಿಕೊಂಡು ಪಾಕಿಸ್ತಾನ ರಕ್ಷಣಾ ಒಪ್ಪಂದ

ನ್ಯಾಟೋ ಮಾದರಿಯಲ್ಲಿ ಏಷ್ಯಾದಲ್ಲಿ ತನ್ನದೇ ಆಪ್ತ ದೇಶಗಳೊಟ್ಟಿಗೆ ಸೇರಿಕೊಂಡು ಪಾಕಿಸ್ತಾನ ರಕ್ಷಣಾ ಒಪ್ಪಂದ ಮಾಡಿಕೊಂಡಿದೆ. ಆಗಸ್ಟ್ ತಿಂಗಳಲ್ಲಿ ಪಾಕಿಸ್ತಾನ, ಸೌದಿ ಅರೇಬಿಯಾ ಮತ್ತು ಟರ್ಕಿಗಳು ಮೆಕ್ಕಾ ಜಂಟಿ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಒಂದು ಹೊಸ ರಕ್ಷಣಾ ಮೈತ್ರಿಕೂಟ ರೂಪುಗೊಂಡಿತು. 2 ತಿಂಗಳು ಕಳೆಯುವಷ್ಟರಲ್ಲೇ ಟರ್ಕಿ, ಪಾಕಿಸ್ತಾನ, ಕತಾರ್ ಮತ್ತು ಇಂಡೋನೇಷ್ಯಾ ದೇಶಗಳು ಮಿಲಿಟರಿ ಸಹಕಾರವನ್ನು ಆಳಗೊಳಿಸಲು ,ತಮ್ಮ ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸಲು ಹೊಸ ಒಪ್ಪಂದವೊಂದಕ್ಕೆ ಸಹಿ ಹಾಕಿವೆ. ಇಸ್ಲಾಮಿಕ್ ರಕ್ಷಣಾ ಮೈತ್ರಿಕೂಟ ರಚನೆಯಾಗುವ ಸಾಧ್ಯತೆ ಕಂಡುಬರುತ್ತಿದೆ. ಇಸ್ಲಾಮಿಕ್ ಸಿದ್ಧಾಂತದ ನಾಲ್ಕು ರಾಷ್ಟ್ರಗಳು ಮಾಡಿಕೊಂಡಿರುವ ರಕ್ಷಣಾ ಒಪ್ಪಂದ ಇದಾಗಿದೆ. ಒಪ್ಪಂದದ ದೇಶಗಳು ಪರಸ್ಪರ ಮಿಲಿಟರಿ ಸಾಮರ್ಥ್ಯ ಬಲಪಡಿಸುವುದು, ರಕ್ಷಣಾ ಉತ್ಪಾದನೆ, ತರಬೇತಿ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸಿಕೊಳ್ಳುವ ಒಪ್ಪಂದ ಇದಾಗಿದೆ.

ಕ್ರಿ.ಶ.624ರಲ್ಲಿ 'ಬದ್ರ್ ಕದನ' ನಡೆದಿತ್ತು. ಅರೇಬಿಯನ್ ಪರ್ಯಾಯ ದ್ವೀಪದಲ್ಲಿ ಇಸ್ಲಾಂನ ಅತ್ಯಂತ ಆರಂಭಿಕ ಕದನಗಳಲ್ಲಿ ಇದು ಒಂದು. ಈ ಕದನದಲ್ಲಿ ಪ್ರವಾದಿ ಮುಹಮ್ಮದ್ ಮತ್ತು ಅವರ ಅನುಯಾಯಿಗಳು ತಮ್ಮ ವಿರೋಧಿಗಳನ್ನು ಸೋಲಿಸಿದ್ದರು. 'ಬದ್ರ್ ತಿಳುವಳಿಕೆ ಒಪ್ಪಂದ'ವು ರಕ್ಷಣಾ ಉತ್ಪಾದನಾ ಕ್ಷೇತ್ರದಲ್ಲಿ ಸಹಕಾರವನ್ನು ಬೆಳೆಸುವ, ನಾಲ್ಕು ದೇಶಗಳ ನಡುವೆ ರಕ್ಷಣಾ ಸಾಮರ್ಥ್ಯಗಳನ್ನು ಹೆಚ್ಚಿಸುವ ,ತಾಂತ್ರಿಕ ರಕ್ಷಣಾ ತರಬೇತಿ ಮತ್ತು ಸಂಶೋಧನೆ, ಅಭಿವೃದ್ಧಿ ಕ್ಷೇತ್ರಗಳಲ್ಲಿ ಸಹಯೋಗವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಆಧುನಿಕ ರಕ್ಷಣಾ ವ್ಯವಸ್ಥೆಗಳ ವಿಕಾಸಕ್ಕೆ ಪೂರಕವಾದ ಪರಿಹಾರಗಳು ಮತ್ತು ಕೈಗಾರಿಕೆಗಳನ್ನು ರೂಪಿಸಲು ಇದು ಕೊಡುಗೆ ನೀಡುತ್ತದೆ. ಇರಾನ್‌ಗೆ ಆಹ್ವಾನ, ಬಾಂಗ್ಲಾದೇಶವೂ ಸೇರ್ಪಡೆ ನ್ಯಾಟೋ (ಒಕ್ಕೂಟದಲ್ಲಿ ಎರಡನೇ ಅತಿದೊಡ್ಡ ಸೇನಾ ಬಲವನ್ನು ಹೊಂದಿರುವ ಟರ್ಕಿ, ಬಲವಾದ ರಕ್ಷಣಾ ಉದ್ಯಮವನ್ನೂ ಹೊಂದಿದೆ. ಇಂತಹ ಒಪ್ಪಂದಕ್ಕೆ ಹಣಕಾಸಿನ ನೆರವು ನೀಡುವ ಸಾಮರ್ಥ್ಯ ಕತಾರ್‌ಗೆ ಇದ್ದರೆ, ಇಂಡೋನೇಷ್ಯಾವು ಜಂಟಿ ಅಭಿವೃದ್ಧಿ ಮತ್ತು ದೇಶೀಯ ಉತ್ಪಾದನೆಯಲ್ಲಿ ಅನುಭವವನ್ನು ಹೊಂದಿದೆ

ಕೆಪಿಎಸ್‌ಸಿಗೆ ಹೊಸ ರೂಪ ನೀಡಲಾಗುವುದು: ಸಿಎಂ ಡಿ.ಕೆ. ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಸರ್ಕಾರ ಕರ್ನಾಟಕ ಲೋಕಸೇವಾ ಆಯೋಗ ಹೊಸ ರೂಪ ನೀಡಲು ಮುಂದಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಬೆಂಗಳೂರಿನ ಅರಮನೆ ಮೈದಾನದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಕೆಪಿಎಸ್‌ಸಿ ಅಕ್ರಮ ಸಂಬಂಧ ಆರೋಪಿ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಗಂಗ್ವಾರ್ ವಿರುದ್ಧ ಪ್ರಾಸಿಕ್ಯೂಷನ್‌ಗೆ

ಅನುಮತಿ ನೀಡಿರುವ ಬಗ್ಗೆ, ಕೆಲವು ವಿಚಾರಗಳು ಗಮನಕ್ಕೆ ಬಂದಿವೆ. ಇಡಿ ಹಾಗೂ ನಮ್ಮ ಅಧಿಕಾರಿಗಳು ತನಿಖೆ ಮಾಡಿದ್ದು, ಸತ್ಯಾಂಶ ಹೊರತರಲು ಕೂಡಲೇ ವಿಚಾರಣೆಗೆ ಅನುಮತಿ ನೀಡಲಾಗಿದೆ. ನಮ್ಮ ಮಕ್ಕಳು ಕಷ್ಟಪಟ್ಟು ಓದಿರುತ್ತಾರೆ.

ಈ ರೀತಿ ದುಡ್ಡು, ಶಿಫಾರಸಿಗೆ ಅವಕಾಶ ನೀಡುವುದು ಸರಿಯಲ್ಲ. ಈ ಹಿಂದೆಯೂ ಕೆಪಿಎಸ್‌ಸಿಯಲ್ಲಿ ಅನೇಕ ಅವಾಂತರಗಳನ್ನು ನೋಡಿದ್ದೇವೆ ಎಂದು ವಿವರಿಸಿದರು. ಇದರ ನಿವಾರಣೆಗೆ ಸಮಿತಿ ರಚಿಸಿದ್ದು, ಅದರ ಅಭಿಪ್ರಾಯ ಪಡೆಯಲಾಗುವುದು. ಕೆಪಿಎಸ್ ಸಿಗೆ ಹೊಸ ರೂಪ ನೀಡಬೇಕಿದೆ.

ನಮ್ಮ ರಾಷ್ಟ್ರೀಯ ನಾಯಕರು ಶಿಕ್ಷಣ ವ್ಯವಸ್ಥೆ ಸುಧಾರಣೆ ಬಗ್ಗೆ ನಮಗೆ ಎಚ್ಚರಿಕೆ ನೀಡಿದ್ದಾರೆ. ಸಚಿವ ಯು.ಟಿ. ಖಾದರ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಮುಗಿಸಲು ಹಾಲಿ ಸಿಎಂ 600 ಕೋಟಿಗೆ ಡೀಲ್ ಕೊಟ್ಟಿದ್ದಾರೆ: ಹೆಚ್‌ಡಿಕೆ

ಈಗಿನ ಮಹಾನ್ ಮುಖ್ಯಮಂತ್ರಿಗಳೇ ಒಂದು ಕುಟುಂಬವನ್ನು ಮುಗಿಸಲು ಹೇಳಿರುವುದು. ಅದು ದೇವೇಗೌಡರ ಕುಟುಂಬವೇ ಆಗಿದೆ ಎಂದು ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

• ಉದಯವಾಹಿನಿ, ಬೆಂಗಳೂರು

ನಮ್ಮ ಯುವಕರು ಭಯಪಡುವುದು ಬೇಡ

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕುಟುಂಬವನ್ನು ಮುಗಿಸಲು ಹಾಲಿ ಮುಖ್ಯಮಂತ್ರಿ 600 ಕೋಟಿ ರೂ.ಗಳಷ್ಟು ಬೃಹತ್ ಮೊತ್ತದ ಡೀಲ್ ಕೊಟ್ಟಿರುವ ವಿಷಯದಲ್ಲಿ ಯಾವುದೇ ಸಂಶಯವಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು. ನಗರದ ಮಲ್ಲೇಶ್ವರದಲ್ಲಿ ಭಾನುವಾರ ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಒಂದು ಕುಟುಂಬವನ್ನು ಮುಗಿಸಲು 600 ಕೋಟಿ ಮೊತ್ತದ ಡೀಲ್ ಕೊಟ್ಟಿರುವ ವಿಚಾರದ ಬಗ್ಗೆ ಪ್ರತಿಕ್ರಿಯಿಸುತ್ತಾ, ಅದು ಬೇರೆ ಯಾರೂ ಅಲ್ಲ. ಈಗಿನ ಮಹಾನ್ ಮುಖ್ಯಮಂತ್ರಿಗಳೇ ಒಂದು ಕುಟುಂಬವನ್ನು ಮುಗಿಸಲು ಹೇಳಿರುವುದು. ಅದು ದೇವೇಗೌಡರ ಕುಟುಂಬವೇ ಆಗಿದೆ. ನಮ್ಮ ಕುಟುಂಬವನ್ನು ಮುಗಿಸಲು ಈ ಮುಖ್ಯಮಂತ್ರಿ ನಡೆಸಿರುವ ಕುತಂತ್ರ ಒಂದೆರಡಲ್ಲ. ಅನೇಕ ಕುತಂತ್ರಗಳನ್ನು ಅವರು ಮಾಡಿದ್ದು, ಅದರಲ್ಲಿ 600 ಕೋಟಿ ರೂಪಾಯಿ ಸುಪಾರಿ ಡೀಲ್ ಕೂಡ ಒಂದು. ಅವರು ಈ ಕೃತ್ಯ ಎಸಗಿದ್ದಾರೆ ಎಂಬುದರಲ್ಲಿ ಎರಡು ಮಾತೇ ಇಲ್ಲ, ಸಂಶಯವೇ ಇಲ್ಲ ಎಂದಿದ್ದಾರೆ.

ಆದ್ದರಿಂದಲೇ ಇದೆಲ್ಲವನ್ನು ತನಿಖೆ ಮಾಡಬೇಕು ಎಂದು ನಾನು ಹೇಳಿದ್ದು. ಸ್ಟಿಂಗ್ ಮಾಡಿದ ಪಾತಕಿಗಳನ್ನು ಬಂಧಿಸಿ ಎಂದರೆ ಅವರಿಗೆ ಸುರಕ್ಷಿತವಾಗಿ ನಿರೀಕ್ಷಣಾ ಜಾಮೀನು ಸಿಗುವಂತೆ ಮಾಡಿ, ಅದಕ್ಕೆ ಸಂಬಂಧ ಇಲ್ಲದವರನ್ನು ಕಾಡುತ್ತಿದ್ದಾರೆ. ಇವರ ಪಾಪದ ಕೊಡ ತುಂಬಿದೆ. ಆ ಭಗವಂತನೇ ಇದೆಲ್ಲವನ್ನು ಹೊರಗೆ ತರುತ್ತಿದ್ದಾನೆ ಎಂದು ಹೆಚ್‌ಡಿಕೆ ಹೇಳಿದರು. ಕರ್ನಾಟಕದಲ್ಲಿ ಹಲವಾರು ಸಮಸ್ಯೆಗಳಿವೆ. ಅವುಗಳ ನಡುವೆ ಒಂದು ಸೂಕ್ಷ್ಮ ವಿಚಾರದ ತನಿಖೆ ನಡೆಯುತ್ತಿದೆ. ಇನ್ನೂ ಐದು ದಿನ ಸಮಯ ಕೊಡುತ್ತೇನೆ. ಏನು ಮಾಡುತ್ತಾರೋ ನೋಡೋಣ. ನಮ್ಮ ಯುವಕರು ಭಯಪಡುವುದು ಬೇಡ. ಅವರಿಗೆ ನಾನು



ವಿಕ್ಕಿ ಸಾವು ಮುಚ್ಚಿ ಹಾಕಲು ಸರ್ಕಾರ, ಪೊಲೀಸರು ಶಾಮೀಲು

ವಿಕಾಸ್ (ವಿಕ್ಕಿ) ಅನುಮಾನಾಸ್ಪದ ಸಾವಿನ ಬಗ್ಗೆ ರಾಜ್ಯದಲ್ಲಿ ದೊಡ್ಡಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ. ಸ್ಟಿಂಗ್ ಮಾಡಿದ ಆ ವ್ಯಕ್ತಿಯ ಸಂಸ್ಥೆಯಲ್ಲಿ ಆಗಿರುವ ಘಟನೆ ಬಗ್ಗೆ ಗೃಹ ಸಚಿವರು ದಾಖಲೆ ಕೇಳುತ್ತಾರೆ. ಲಿಫ್ಟ್ ಬಿದ್ದು ಈ ಸಾವು ಆಗಿದೆ ಎಂದು ಹೇಳುತ್ತಾರೆ. ಇದರ ಬಗ್ಗೆ ಸರಿಯಾದ ತನಿಖೆ ನಡೆಸದೆ ಇಡೀ ಪ್ರಕರಣವನ್ನೇ ಮುಚ್ಚಿ ಹಾಕಿದ್ದಾರೆ. ಈ ಪ್ರಕರಣ ಮುಚ್ಚಿ ಹಾಕುವುದರಲ್ಲಿ ಸರ್ಕಾರ ಸೇರಿ ಪೊಲೀಸರು ಕೂಡ ಶಾಮೀಲಾಗಿದ್ದಾರೆ ಎಂದು ಆರೋಪ ಮಾಡಿದರು.ಸ್ಟಿಂಗ್ ಆಪರೇಷನ್ ನಡೆಸುತ್ತಿರುವ ಮಾಧ್ಯಮ ಸಂಸ್ಥೆಯಲ್ಲಿ ಅನೇಕ ಅಕ್ರಮಗಳು, ಅಪರಾಧಗಳು ನಡೆದಿವೆ. ಎಷ್ಟೋ ಕೊಲೆಗಳು ಕೂಡ ಆಗಿವೆ. ಕೋಲಾರ ಬಳಿ ಒಬ್ಬ ಡ್ರೈವರ್ ಕೊಲೆ ಆಗಿದೆ. ಆ ಪ್ರಕರಣದ ಮಾಹಿತಿ ನನಗೆ ಬರುತ್ತಿವೆ. ಅಂತಹ ಕೊಲೆಗಡುಕರನ್ನು ರಾಜಾರೋಷವಾಗಿ ತಿರುಗಾಡಲು ಬಿಟ್ಟು ನಮ್ಮ ಹುಡುಗರ ಬೆನ್ನು ಬಿದ್ದಿದ್ದಾರೆ. ಅವರನ್ನು ತನಿಖೆ ಮಾಡಿ, ನಮ್ಮ ಹುಡುಗರನ್ನು ಕೂಡ ತನಿಖೆ ಮಾಡಿ. ಏನಿದೆಯೋ ಎಲ್ಲಾ ಹೊರಗೆ ಬರಲಿ. ನಾನೇ ಸ್ಟಿಂಗ್ ಮಾಡಿದ್ದು, ಏನೀಗ? ನಾನು ಕಿಂಗ್ ಆಫ್ ಸ್ಟಿಂಗ್! ಎಂದು ಕೊಚ್ಚಿಕೊಂಡ ಕಿಡಿಗೇಡಿಯನ್ನು ಹಾಗೆಯೇ ಬಿಟ್ಟಿದ್ದೀರಿ, ಯಾಕೆ? ಎಂದು ಹೆಚ್‌ಡಿಕೆ ಪ್ರಶ್ನಿಸಿದರು.

ಹೇಳುವುದು ಇಷ್ಟೇ, ಪೊಲೀಸರ ತನಿಖೆಗೆ ಸಹಕರಿಸಿ. ಅವರು ಕರೆದಾಗ ಹೋಗಿ. ಕೇಳಿದ ಉಪಕರಣಗಳನ್ನು ಕೊಡಿ. ಆಗ ಇವರ ತನಿಖೆ ಯಾವ ದಿಕ್ಕಿನತ್ತ ಹೋಗುತ್ತಿದೆ ಎಂದು ತಿಳಿಯುತ್ತದೆ. ನನಗೂ ಒಳಗೆ ಏನು ನಡೆಯುತ್ತಿದೆ ಎಂಬ ಮಾಹಿತಿ ಇದೆ. ಸಿದ್ದರಾಮಯ್ಯ ಹಾಗೂ ಅವರ ಪುತ್ರ ಯತೀಂದ್ರ ಅವರ ಹೇಳಿಕೆ ಕೂಡ ಗಮನಿಸಿದ್ದೇನೆ ಎಂದರು. ಈ ತನಿಖೆಯ ಬಗ್ಗೆ ಸಿದ್ದರಾಮಯ್ಯ ಅವರಿಗೂ ಅನುಮಾನ ಇದೆ. ಒಬ್ಬ ವ್ಯಕ್ತಿ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತ ಈ ಸ್ಟಿಂಗ್ ಆಪರೇಷನ್ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿಗಳಿಗೆ ಆಗಿರುವ ಅನ್ಯಾಯದ ಬಗ್ಗೆ ಅಸಲಿ ಅಪರಾಧಿಗಳನ್ನು ಹಿಡಿಯಬೇಕಲ್ಲವೇ? ಮೂಲವನ್ನು ಹುಡುಕುವುದು ಬಿಟ್ಟು ಇವರು ಬಾಲವನ್ನು ಬಡಿಯುತ್ತಾ ಕೂತಿದ್ದಾರೆ ಎಂದು ಕೇಂದ್ರ ಸಚಿವರು ಟೀಕಿಸಿದರು. ಈಗ ಒಬ್ಬರು ನಿರೀಕ್ಷಣಾ ಜಾಮೀನು ತೆಗೆದುಕೊಂಡಿದ್ದಾರೆ. ಅವರಿಗೆ ನಿರೀಕ್ಷಣಾ ಜಾಮೀನು ಸಿಗದ ರೀತಿಯಲ್ಲಿ ಪೊಲೀಸ್ ಇಲಾಖೆ ಏನಾದರೂ ಪ್ರಯತ್ನ ಪಟ್ಟಿದ್ದಾರಾ? ನಾನು ಯಾರನ್ನೂ ಹೆದರಿಸಲು ಈ ಮಾತನ್ನು ಹೇಳುತ್ತಿಲ್ಲ. ಪ್ರಾಮಾಣಿಕವಾಗಿ ತನಿಖೆ ಮಾಡಿ ಎಂದಷ್ಟೇ ಹೇಳುತ್ತಿದ್ದೇನೆ. ನಾನು ಮುಂದಿನ ಐದು ದಿನಗಳ ಕಾಲ ನವದೆಹಲಿಗೆ ತೆರಳುತ್ತಿದ್ದೇನೆ. ಈ ಸರ್ಕಾರಕ್ಕೆ ಐದು ದಿನ ಸಮಯ ಕೊಡುತ್ತೇನೆ. ನೋಡೋಣ ಯಾವ ರೀತಿ ತನಿಖೆ ಮಾಡುತ್ತಾರೆ ಎಂದು ಹೇಳಿದರು. ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಬೇಕು ಅಂತ ನಾನು ಹೇಳಿದ್ದಲ್ಲ. ಅವರು ಹಿರಿಯರಿದ್ದಾರೆ. ಅಗತ್ಯಬಿದ್ದರೆ ಭೇಟಿ ಮಾಡುತ್ತೇನೆ ಎಂದರು.

ಈ ದಿನದ ದರ ಪೆಟ್ರೋಲ್: 111.68 ₹/L | ಡೀಸೆಲ್ : 99.56 ₹/L | ಬಂಗಾರ: ₹14,258/Gram24ct ₹13,070/Gram22ct | ಬೆಳ್ಳಿ: ₹245.00/Gram

ಶ್ರೀಮದ್ಭಾಗವತ ಧಾರ್ಮಿಕ ಪ್ರವಚನ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಅಕ್ಟೋಬರ್ 28 ರಿಂದ ನವೆಂಬರ್ 2ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಶ್ರೀ ವಾದಿರಾಜಾಚಾರ್ ಮಣೂರು ಇವರಿಂದ ಶ್ರೀಮದ್ಭಾಗವತ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ ಸುಧೀಂದ್ರನಗರ, ಮಲ್ಲೇಶ್ವರಂ, ಬೆಂಗಳೂರು-560003

SC ವರ್ಗದ ಮಹಿಳೆ: ಸೇವೆ ಖಾಯಂಗೆ ಹೈಕೋರ್ಟ್ ಆದೇಶ

• ಉದಯವಾಹಿನಿ, ಬೆಂಗಳೂರು

ಪೌರಾಡಳಿತ ನಿರ್ದೇಶನಾಲಯದಲ್ಲಿ 34 ವರ್ಷಗಳ ಕಾಲ ದಿನಗೂಲಿ ಆಧಾರದಲ್ಲಿ ಬೆರಳಚ್ಚುಗಾರ್ತಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಮಹಿಳೆಗೆ ಹೈಕೋರ್ಟ್ ಮಧ್ಯಪ್ರವೇಶದಿಂದ 64ನೇ ವಯಸ್ಸಿನಲ್ಲಿ ಸೇವೆ ಕಾಯಂಗೊಳಿಸಿಕೊಳ್ಳುವ ಅದರೊಂದಿಗೆ ಅದರ ಫಲವಾಗಿ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಪಡೆಯುವ ಅವಕಾಶ ನೀಡಿ ಆದೇಶ ಹೊರಡಿಸಿದೆ. ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ಮೂಲದ ಪರಿಶಿಷ್ಟ ಜಾತಿಗೆ ಸೇರಿದ ಗೀತಾ ರಾಮಪ್ಪ ತೇರದಾಳ ಅವರು 1988ರಲ್ಲಿ ಸೇವೆಗೆ ಸೇರಿದ್ದು, 2022ರಲ್ಲಿ ನಿವೃತ್ತರಾಗಿದ್ದರು. ಆದರೆ, ಅವರಿಗಿಂತ ನಂತರ ಸೇವೆಗೆ ಸೇರಿದ್ದ 12 ಮಂದಿ ನೌಕರರ ಸೇವೆಯನ್ನು ರಾಜ್ಯ ಸರ್ಕಾರ ಕಾಯಂಗೊಳಿಸಿತ್ತು. ತಾವು 2022ರಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಕಳೆದ ವರ್ಷ ಆಗಸ್ಟ್ 29ರಂದು ಏಕಸದಸ್ಯ ಪೀಠ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಗೀತಾ ಅವರು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಗೀತಾ ಅವರು ಈಗಾಗಲೇ ನಿವೃತ್ತಿ ವಯಸ್ಸನ್ನು ತಲುಪಿರುವುದರಿಂದ ತಮ್ಮ ಸೇವೆಯನ್ನು ಕಾಯಂಗೊಳಿಸುವಂತೆ ಕೋರುವಂತಿಲ್ಲ ಎಂಬ ಕಾರಣ ನೀಡಿ ಏಕಸದಸ್ಯ ಪೀಠವು ಅವರ ಅರ್ಜಿಯನ್ನು ವಜಾಗೊಳಿಸಿತ್ತು. ಆದರೆ, ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಮತ್ತು ನ್ಯಾಯಮೂರ್ತಿ ಹೇಮಾ ಕುಲಕರ್ಣಿ ಅವರನ್ನೊಳಗೊಂಡ ವಿಭಾಗೀಯ ಪೀಠವು ಗೀತಾ ಸಲ್ಲಿಸಿದ್ದ ಮೇಲ್ಮನವಿಯನ್ನು ಪುರಸ್ಕರಿಸಿದೆ. ಮೇಲ್ಮನವಿದಾರರು ನಿವೃತ್ತಿ ವಯಸ್ಸನ್ನು ತಲುಪುವ ಸಂದರ್ಭದಲ್ಲಿ ಯಾವ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೋ, ಅದೇ ವೃಂದದಲ್ಲಿ ಅವರ ಸೇವೆಯನ್ನು ಕಾಯಂಗೊಳಿಸಲು ಅರ್ಹರಾಗಿದ್ದಾರೆ. ಅವರು 10 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ 1998ರ ಫೆಬ್ರವರಿ 11ರಿಂದ ಪೂರ್ವಾನ್ವಯವಾಗುವಂತೆ ಅವರ ಸೇವೆಯನ್ನು ಕಾಯಂಗೊಳಿಸಬೇಕು. ಜೊತೆಗೆ, ಅದರಿಂದ ದೊರೆಯುವ ಎಲ್ಲಾ ಅನುಸಂಗಿಕ ಸೌಲಭ್ಯಗಳನ್ನು ಒದಗಿಸಬೇಕು ಎಂದು ನ್ಯಾಯಾಲಯ ಆದೇಶಿಸಿದೆ

ಉದಯವಾಹಿನಿ ಚಿತ್ರ

ಧನ್ವೀರ್ ಗೌಡ ವಿರುದ್ಧ ಹಲವು ಪೊಲೀಸ್ ಠಾಣೆಗಳಲ್ಲಿ ದೂರುಗಳು!

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ನಟ ಧನ್ವೀರ್ ಗೌಡ ಮತ್ತು ದರ್ಶನ್ ಪತ್ನಿ ವಿಜಯಲಕ್ಷ್ಮಿ ನಡುವಿನ ವಿವಾದ ಮತ್ತೊಂದು ತಿರುವು ಪಡೆದುಕೊಂಡಿದೆ. ನಟ ಧನ್ವೀರ್ ಗೌಡ ವಿರುದ್ಧ ಹಲವು ಪೊಲೀಸ್ ಠಾಣೆಗಳಲ್ಲಿ ಸಾಲು ಸಾಲು ದೂರುಗಳು ದಾಖಲಾಗಿವೆ.

ಬ್ಯಾಟರಾಯನಪುರ ಠಾಣೆಯಲ್ಲಿ ಎನ್ ಸಿಆರ್: ಈಗ ಧನ್ವೀರ್ ವಿರುದ್ಧ ಗೌರವ್ ಎಂಬಾತ ನೀಡಿದ ದೂರಿನ ಮೇಲೆ ಬ್ಯಾಟರಾಯನಪುರ ಪೊಲೀಸರು ಎನ್‌ಸಿಆರ್ ದಾಖಲು ಮಾಡಿಕೊಂಡಿದ್ದಾರೆ.

5 ಲಕ್ಷ ಹಣ, ಕಾರು ವಾಪಸ್ ಕೊಡದೇ ಬೆದರಿಕೆ ಆರೋಪ: ಗೌರವ್ ಅವರು ನಟ ಧನ್ವೀರ್ ಮತ್ತು ಶಶಿ ಎಂಬಾತನ ಮೇಲೆ ದೂರು ನೀಡಿದ್ದಾರೆ. ನಮ್ಮಿಂದ ಧನ್ವೀರ್ 5 ಲಕ್ಷ ರೂಪಾಯಿಗೆ ವಿಮಾನ ಟಿಕೆಟ್ ಬುಕ್ ಮಾಡಿಸಿಕೊಂಡಿದ್ದರು. ವಿಮಾನ ಟಿಕೆಟ್ ಬುಕ್ ಆದ ಬಳಿಕ ನಾವು ಹಣವನ್ನು ಕೇಳಿದೇವು. ಆದರೆ ಅವರು ನಮಗೆ ಹಣವನ್ನು ವಾಪಸ್ ಕೊಡಲಿಲ್ಲ. ಬದಲಾಗಿ ಅವಾಚ್ಯವಾಗಿ ನಮ್ಮನ್ನು ನಿಂದಿಸ್ತಿದ್ದಾರೆ. ಅಲ್ಲದೆ ನನ್ನ ವೋಕ್ಸ್‌ವ್ಯಾಗನ್ ಕಾರನ್ನ ಧನ್ವೀರ್, ಶಶಿ ಎಂಬುವನಿಗೆ ನೀಡಿದ್ದಾರೆ. ಅದನ್ನೂ ನಮಗೆ ಧನ್ವೀರ್ ಹಿಂತಿರುಗಿಸಿಲ್ಲ. ನಮ್ಮ ಹಣ ಮತ್ತು ಕಾರನ್ನು ವಾಪ್ ನೀಡಿ ಅಂದ್ರೆ, ಅವಾಚ್ಯವಾಗಿ ನಿಂದಿಸಿ ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ಗೌರವ್ ಆರೋಪಿಸಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಬೆಂಗಳೂರು ಪೊಲೀಸರು ತನಿಖೆ ನಡೆಸ್ತಿದ್ದಾರೆ.

ಐಟಿ ಕಂಪೆನಿಗಳು ಕನ್ನಡಿಗರನ್ನು ಕಡೆಗಣಿಸಿದರೆ ಕಠಿಣ ಕ್ರಮ: ಸಿಎಂ

ಹೊರ ರಾಜ್ಯಗಳ ಅಭ್ಯರ್ಥಿಗಳಿಗೆ ಉದ್ಯೋಗ ನೀಡುತ್ತಿರುವ ಕೆಲವು ಕಂಪನಿಗಳು, ಕನ್ನಡಿಗ ಅಭ್ಯರ್ಥಿಗಳನ್ನು ಮಾತ್ರ ತಿರಸ್ಕರಿಸುತ್ತಿವೆ

• ಉದಯವಾಹಿನಿ, ಬೆಂಗಳೂರು

1 ಕರ್ನಾಟಕ ಕನ್ನಡಿಗರಿಗೇ ಅಗ್ರಸ್ಥಾನ
2 ಐಟಿ ಕಂಪನಿಗಳಿಗೆ ಸಿಎಂ ಎಚ್ಚರಿಕೆ
3 ಕನ್ನಡಿಗರಿಗೆ ಉದ್ಯೋಗ ನಿರಾಕರಣೆ

ದೇಶದ ಐಟಿ ರಾಜಧಾನಿ ಎಂದೇ ಖ್ಯಾತಿ ಪಡೆದಿರುವ ಬೆಂಗಳೂರಿನ ಕೆಲವು ಮಾಹಿತಿ ತಂತ್ರಜ್ಞಾನ (ಐಟಿ) ಕಂಪನಿಗಳಲ್ಲಿ ಕನ್ನಡಿಗ ಉದ್ಯೋಗಾಕಾಂಕ್ಷಿಗಳ ವಿರುದ್ಧ ತಾರತಮ್ಯ ಎಸಗಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಕನ್ನಡವನ್ನು ಮಾತೃಭಾಷೆಯಾಗಿ ಹೊಂದಿರುವ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ನಿರಾಕರಿಸಲಾಗುತ್ತಿದೆ ಎಂಬ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಯುವತಿಯೊಬ್ಬರು ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಂಚಿಕೊಂಡಿದ್ದು, ಬೆಂಗಳೂರಿನ ಕೆಲವು ಖಾಸಗಿ ಐಟಿ ಕಂಪನಿಗಳು ಕನ್ನಡ ಮಾತನಾಡುವ ಉದ್ಯೋಗಿಗಳು ಹಾಗೂ ಉದ್ಯೋಗಾಕಾಂಕ್ಷಿಗಳ ವಿರುದ್ಧ ತಾರತಮ್ಯ ಎಸಗುತ್ತಿವೆ ಎಂದು ಆರೋಪಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬೆಂಗಳೂರಿನ ಐಟಿ ಕಂಪನಿಗಳಲ್ಲಿ ಕನ್ನಡಿಗರು ಉದ್ಯೋಗಾವಕಾಶಗಳ ವಿಚಾರದಲ್ಲಿ ಅನ್ಯಾಯ ಎದುರಿಸುತ್ತಿದ್ದಾರೆ ಎಂಬ ವಿಷಯ ತಿಳಿದು ನೋವಾಗಿದೆ. ಸ್ಥಳೀಯ ಕನ್ನಡಿಗರನ್ನು ಉದ್ಯೋಗಾವಕಾಶಗಳಿಂದ ವಂಚಿಸಲಾಗುತ್ತಿದೆ ಎಂಬ ಆರೋಪವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಕನ್ನಡಿಗರಿಗೇ ಅಗ್ರಸ್ಥಾನ. ಯಾವುದೇ ಕಾರಣಕ್ಕೂ ಕನ್ನಡಿಗರ ಹಕ್ಕುಗಳು, ಗೌರವ ಹಾಗೂ ಅವಕಾಶಗಳನ್ನು ಕಡೆಗಣಿಸಲು ನಮ್ಮ ಸರ್ಕಾರ ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ.

ವಿಶ್ವವೇ ಬೆಂಗಳೂರನ್ನು ಭಾರತದ ತಂತ್ರಜ್ಞಾನ ರಾಜಧಾನಿಯಾಗಿ ನೋಡುತ್ತಿದೆ. ನಮ್ಮ ಕನ್ನಡಿಗರ ಪ್ರತಿಭೆ, ಕೌಶಲ್ಯ ಹಾಗೂ ಸಾಮರ್ಥ್ಯದ ಬಗ್ಗೆ ನಮಗೆ ಅಪಾರ

ಉದಯವಾಹಿನಿ ಚಿತ್ರ

ಹೆಮ್ಮೆಯಿದೆ ಎಂದು ಅವರು ಹೇಳಿದ್ದಾರೆ.

ಯಾವುದೇ ಖಾಸಗಿ ಸಂಸ್ಥೆಯು ಉದ್ದೇಶಪೂರ್ವಕವಾಗಿ ಕನ್ನಡಿಗರನ್ನು ಕಡೆಗಣಿಸುತ್ತಿರುವುದು ಕಂಡುಬಂದರೆ, ಅಂತಹ ಸಂಸ್ಥೆಗಳ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಸಿದ್ದಾರೆ.

ಕನ್ನಡಿಗರ ಹಿತಾಸಕ್ತಿಗಳ ಪರವಾಗಿ ಧ್ವನಿ ಎತ್ತುವ ಸರ್ಕಾರವು ಅವರ ಸಮಸ್ಯೆಗಳನ್ನು ಪರಿಹರಿಸಲು ಸದಾ ಬದ್ಧವಾಗಿದೆ ಎಂದು ಭರವಸೆ ನೀಡಿದ್ದಾರೆ. ಇತ್ತೀಚೆಗೆ ಯುವತಿಯೊಬ್ಬರು ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಂಚಿಕೊಂಡಿದ್ದು, ಉದ್ಯೋಗಾಕಾಂಕ್ಷಿಗಳು ತಮ್ಮ ಬಯೋಡೇಟಾದಲ್ಲಿ ಮಾತೃಭಾಷೆ ಕನ್ನಡ ಎಂದು ನಮೂದಿಸಿದರೆ ಅವರಿಗೆ ಉದ್ಯೋಗ ನೀಡುತ್ತಿಲ್ಲ ಎಂದು ಆರೋಪಿಸಿದ್ದಾರೆ. ಇದರಿಂದ ಸ್ಥಳೀಯ ಕನ್ನಡಿಗರಿಗೆ ಉದ್ಯೋಗಾವಕಾಶಗಳು ಸಿಗುತ್ತಿಲ್ಲ ಎಂದು ಯುವತಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಯುವತಿಯು ತಮ್ಮ ವಿಡಿಯೊದಲ್ಲಿ ಅಸ್ಥೆನೋಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೆಸರನ್ನು ಉಲ್ಲೇಖಿಸಿದ್ದಾರೆ.

ಈ ಕಂಪನಿಯಲ್ಲಿ ತಮಿಳು ಮತ್ತು ತೆಲುಗು ಭಾಷೆಗಳಿಗೆ ಮಾನ್ಯತೆ ನೀಡುತ್ತಿದೆ. ಆದರೆ, ಕನ್ನಡ ಮಾತನಾಡುವ ಅಭ್ಯರ್ಥಿಗಳಿಗೆ ಅದೇ ರೀತಿಯ ಆದ್ಯತೆ ನೀಡುತ್ತಿಲ್ಲ ಎಂದು ಅವರು ಆರೋಪಿಸಿದ್ದಾರೆ.

ಅಭ್ಯರ್ಥಿಗಳು ತಮ್ಮ ಬಯೋಡೇಟಾದಲ್ಲಿ ಮಾತೃಭಾಷೆ ಕನ್ನಡ ಎಂದು ನಮೂದಿಸಿದರೆ, ಸಂದರ್ಶನದ ಹಂತದಲ್ಲಿಯೇ ಅವರನ್ನು ತಿರಸ್ಕರಿಸುವ ಸಾಧ್ಯತೆಯಿದೆ ಎಂದು ಯುವತಿ ದೂರಿದ್ದಾರೆ. ಇದಲ್ಲದೆ, ಬೆಂಗಳೂರಿನ ಕಾಲೇಜುಗಳಲ್ಲಿ ಕ್ಯಾಂಪಸ್ ನೇಮಕಾತಿ ಅಭಿಯಾನಗಳನ್ನು ನಡೆಸುತ್ತಿಲ್ಲ. ಇದರಿಂದ ಸ್ಥಳೀಯ ಪದವೀಧರರಿಗೆ ಉದ್ಯೋಗಾವಕಾಶಗಳು ಸೀಮಿತವಾಗಿವೆ ಎಂದು ಅವರು ಆರೋಪಿಸಿದ್ದಾರೆ. ಈ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಧ್ಯಪ್ರವೇಶಿಸಿ ಕನ್ನಡಿಗ ಉದ್ಯೋಗಾಕಾಂಕ್ಷಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು ಎಂದು ಯುವತಿ ವಿಡಿಯೊ ಮೂಲಕ ಮನವಿ ಮಾಡಿದ್ದಾರೆ.

> ಹೊರ ರಾಜ್ಯಗಳ ಅಭ್ಯರ್ಥಿಗಳಿಗೆ ಉದ್ಯೋಗ ನೀಡುತ್ತಿರುವ ಕೆಲವು ಕಂಪನಿಗಳು, ಕನ್ನಡಿಗ ಅಭ್ಯರ್ಥಿಗಳನ್ನು ಮಾತ್ರ ತಿರಸ್ಕರಿಸುತ್ತಿವೆ ಎಂದು ಅವರು ದೂರಿದ್ದಾರೆ. ಈ ಆರೋಪಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ತಾರತಮ್ಯ ಎಸಗುವ ಕಂಪನಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ.- ಡಿ.ಕೆ. ಶಿವಕುಮಾರ್

ಕಡಿಮೆ ವೇತನಕ್ಕೆ ಅಭ್ಯರ್ಥಿಗಳನ್ನು ನೇಮಕ

ಬೆಂಗಳೂರಿನ ಕೆಲವು ಕಂಪನಿಗಳು ಬೆರಳೆಣಿಕೆಯಷ್ಟು ಕನ್ನಡಿಗರಿಗೆ ಮಾತ್ರ ಉದ್ಯೋಗ ನೀಡುತ್ತಿವೆ. ಬದಲಾಗಿ ಹೊರರಾಜ್ಯಗಳಲ್ಲಿ ಕ್ಯಾಂಪಸ್ ಸಂದರ್ಶನಗಳನ್ನು ನಡೆಸಿ ಕಡಿಮೆ ವೇತನಕ್ಕೆ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುತ್ತಿವೆ ಎಂದು ಅವರು ದೂರಿದ್ದಾರೆ.

ಸಿದ್ದರಾಮಯ್ಯರನ್ನ ಭೇಟಿ ಮಾಡುವ ಯಾವ ನೈತಿಕತೆ ಇದೆ?

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಸ್ಟಿಂಗ್ ಆಪರೇಷನ್ ವಿಚಾರ ರಾಜ್ಯ ರಾಜಕಾರಣದಲ್ಲಿ ತೀವ್ರ ಸಂಚಲನ ಉಂಟು ಮಾಡಿರುವಂತೆಯೇ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಭೇಟಿ ಕುರಿತು ವದಂತಿಗಳು ಹಬ್ಬಿವೆ. ಇದಕ್ಕೆ ಕುಮಾರಸ್ವಾಮಿ ಕೂಡಾ ಸ್ಪಷ್ಟನೆ ನೀಡಿದ್ದು, ಭವಿಷ್ಯದಲ್ಲಿ ಅನಿವಾರ್ಯತೆ ಸೃಷ್ಟಿಯಾದರೆ ಖಂಡಿತಾ ಭೇಟಿ ಮಾಡುವುದಾಗಿ ಹೇಳಿದ್ದಾರೆ. ಈ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜಲಸಂಪನ್ಮೂಲ ಸಚಿವ ಚಲುವರಾಯಸ್ವಾಮಿ, ಕುಮಾರಸ್ವಾಮಿ ಅವರೇ ಕ್ಯಾಸೆಟ್ ಮಾಡಿ, ಈಗ ಸಿದ್ದರಾಮಯ್ಯರನ್ನ ಭೇಟಿ ಮಾಡುವ ಯಾವ ನೈತಿಕತೆ ಇದೆ, ಅವರಿಗೆ ನಾಚಿಕೆ ಆಗಬೇಕು, ಮಾರ್ಯಾದೆ ಇದ್ರೆ ಇಂತ ಮಾತಾಡುತ್ತ ಇರ್ಲಿಲ್ಲ ಎಂದು ಕಿಡಿಕಾರಿದ್ದಾರೆ. ಸಿದ್ದರಾಮಯ್ಯ ರಾಜ್ಯದಲ್ಲಿ ದೀರ್ಘಕಾಲದ ಸಿಎಂ ಆಗಿದ್ದವರು. ಹೆಚ್ಚು ಕಾಲ ವಿಪಕ್ಷ ನಾಯಕರಾಗಿ ಜನರ ಮನ ಗೆದ್ದವರು. ಸ್ಟಿಂಗ್ ಬಗ್ಗೆ ಸರ್ಕಾರ ಈಗಾಗಲೇ ತನಿಖೆ ನಡೆಸುತ್ತಿದೆ. ಯಾರು ಸ್ಟಿಂಗ್ ಮಾಡಿದ್ರು, ಕ್ಯಾಸೆಟ್ ಅನ್ನ ಯಾರು ಯಾರಿಗೆ ಕೊಟ್ರು ಅನ್ನೋದೆಲ್ಲಾ ಹೊರಗಡೆ ಬರುತ್ತೆ. ಸಿದ್ದರಾಮಯ್ಯರನ್ನ ಭೇಟಿ ಮಾಡುತ್ತೇನೆ ಅಂತಾ ಹೇಳುತ್ತಾರೆ, ಇವರಿಗೆ ನಾಚಿಕೆ ಆಗಬೇಕು ಎಂದು ವಾಗ್ದಾಳಿ ನಡೆಸಿದರು. ಇವರದ್ದೇನು ನಾಯಕರನ್ನ ಬೆಳೆಸಿದ ಫ್ಯಾಕ್ಟ್ರಿನಾ? ಎಲ್ಲರನ್ನೂ ನಾವೇ ಬೆಳೆಸಿರೋದು ಅಂತ ಹೇಳುತ್ತಾರೆ. ಬೊಮ್ಮಾಯಿ, ಪಟೇಲ್ ಯಾರೂ ಪಕ್ಷ ಕಟ್ಟಿರಲಿಲ್ಲವಾ ಏನು ಕುಮಾರಸ್ವಾಮಿ ಬಂದು ಪಕ್ಷವನ್ನ ಕಟ್ಟಿರೋ ಹಾಗೆ ಹೇಳುತ್ತಾರೆ ಎಂದು ಕಿಡಿಕಾರಿದರು. ಹುಬ್ಬಳ್ಳಿಯ ನೆಹರು ಮೈದಾನದಲ್ಲಿ ಅಕ್ಟೋಬರ್ 25ರಂದು ನಡೆಯಲಿರುವ ಪಥಸಂಚಲನ ಮತ್ತು ಸಾರ್ವಜನಿಕ ಸಭೆಗೂ ಅನುಮತಿ ದೊರೆತಿದೆ.

ಸ್ಟಿಂಗ್ ವರಿಷ್ಠರ ಜೊತೆ ಸಿದ್ದು ಚರ್ಚೆ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ದೊಡ್ಡ ಮಟ್ಟದಲ್ಲಿ ಸದ್ದು ಮಾಡುತ್ತಿರುವಾಗಲೇ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬರುವ ನ.1ರಂದು ದೆಹಲಿಗೆ ತೆರಳಲಿದ್ದು, ದೆಹಲಿಯಲ್ಲಿ ಹೈಕಮಾಂಡ್ ಜೊತೆ ಸ್ಟಿಂಗ್ ವಿಚಾರವಾಗಿ ಚರ್ಚೆ ನಡೆಸುವ ಸಾಧ್ಯತೆಗಳಿವೆ. ಸಿದ್ದರಾಮಯ್ಯ ಜೊತೆ ಹಲವು ಶಾಸಕರು ಸಹ ದೆಹಲಿಗೆ ತೆರಳುತ್ತಿದ್ದು, ಇವರುಗಳ ದೆಹಲಿ ಭೇಟಿ ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ. ದೆಹಲಿಯಲ್ಲಿ ನ.1ರಂದು ಇಂಡಿಯಾ ಒಕ್ಕೂಟ ಎಸ್ಐಆರ್ ಹಾಗೂ ಸಿಇಸಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಬೃಹತ್ ಆಂದೋಲನವನ್ನು ಆಯೋಜಿಸಿದ್ದು, ಈ ಆಂದೋಲನದಲ್ಲಿ ಭಾಗಿಯಾಗಲು ಸಿದ್ದರಾಮಯ್ಯ ದೆಹಲಿಗೆ ತೆರಳಲಿದ್ದಾರೆ. ದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಿದ್ದರಾಮಯ್ಯ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲಿದ್ದು, ನವೆಂಬರ್ 2 ರಂದು ರಾಹುಲ್ ಗಾಂಧಿ ಭೇಟಿಗೆ ಸಮಯ ಕೇಳಿದ್ದಾರೆ ಎನ್ನಲಾಗಿದೆ. ರಾಹುಲ್ ಅವರ ಭೇಟಿ ಸಂದರ್ಭದಲ್ಲಿ ಸಿದ್ದರಾಮಯ್ಯ ತಮ್ಮ ವಿರುದ್ಧದ ಸ್ಟಿಂಗ್ ಕಾರ್ಯಾಚರಣೆಯ ಬಗ್ಗೆ ಮಾಹಿತಿ ನೀಡುವ ಜೊತೆಗೆ ಇದರಿಂದ ಪಕ್ಷಕ್ಕೆ ಆಗಿರುವ ಮುಜುಗರ ಸೇರಿದಂತೆ ವಿಚಾರವನ್ನು ಪ್ರಸ್ತಾಪಿಸಲಿದ್ದಾರೆ.

ಆರ್‌ಎಸ್‌ಎಸ್‌ಗೆ ನೋಂದಣಿ ಭಯ

• ಉದಯವಾಹಿನಿ, ಬೆಂಗಳೂರು

ರಾಷ್ಟ್ರೀಯ ಸ್ವಯಂ ಸೇವಕ ಸಂಘ ನೋಂದಣಿ ಆಗದಿರುವ ವಿಚಾರವನ್ನು ಮತ್ತೆ ಪ್ರಸ್ತಾಪಿಸಿರುವ ಗೃಹ ಸಚಿವ ಪ್ರಿಯಾಂಕ ಖರ್ಗೆ ಆರ್‌ಎಸ್‌ಎಸ್ ಎಲ್ಲಕ್ಕಿಂತ ಹೆಚ್ಚಾಗಿ ನೋದಾಯಿತ ಎಂಬ ಚಿಹ್ನೆಗೆ ಭಯ ಪಡುತ್ತದೆ ಎಂದು ಕುಟುಕಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಿಯಾಂಕ್ ಖರ್ಗೆ ಅವರು ನೋಂದಣಿಗೆ ಆರ್‌ಎಸ್‌ಎಸ್ ಭಯಪಡುತ್ತದೆ ಏಕೆಂದರೆ, ಅಧಿಕೃತ ನೋಂದಣಿಯಾದರೆ ಕಾನೂನು ಪರಿಶೀಲನೆ, ಹಣಕಾಸಿನ ವಿವರಗಳ ಬಹಿರಂಗಪಡಿಸುವಿಕೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ ಅನಿವಾರ್ಯವಾಗುತ್ತವೆ ಎಂದವರು ವ್ಯಂಗ್ಯವಾಡಿದ್ದಾರೆ.

ಆರ್ ಎಸ್ ಎಸ್ ಗೆ ಹಣ ಎಲ್ಲಿಂದ ಬರುತ್ತದೆ ಯಾವುದಕ್ಕೆ ಖರ್ಚು ಮಾಡುತ್ತದೆ ಯಾರು ಆಡಿಟ್ ಮಾಡುತ್ತಾರೆ ಎಲ್ಲವೂ ಗೊತ್ತಾಗಬೇಕಿದೆ ಹಾಗಾಗಿ ಆರ್ ಎಸ್ ಎಸ್ ತನ್ನ ಹಣದ ಮೂಲ ಖರ್ಚು ಎಲ್ಲವನ್ನು ಸಾರ್ವಜನಿಕ ಮುಂದಿಡಬೇಕು ಎಂದು ಒತ್ತಾಯಿಸಿದ್ದಾರೆ.

ಸದಾ ಒಂದಿಲ್ಲ ಒಂದು ವಿಚಾರವನ್ನು ಮುಂದಿಟ್ಟುಕೊಂಡು ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಗೃಹ ಸಚಿವರು ಎರಡು ದಿನಗಳ ಹಿಂದೆ ಇಷ್ಟೇ ಎರಡು ಮೂರು ದಿನಗಳ ಹಿಂದೆ ಎಷ್ಟೇ ಆರ್ ಎಸ್ ಎಸ್ ಪಥ ಸಂಚಲನಕ್ಕೆ ಅನುಮತಿ ಪಡೆಯಲೇಬೇಕು ಬರೀ ಮಾಹಿತಿ ನೀಡಿದರೆ ಸಾಲದು ಎಂದು ಹೇಳಿದ್ದರು ಇದು ಸಾಕಷ್ಟು ವಿವಾದಕ್ಕೆ ಕಾರಣವಾಗಿ ಬಿಜೆಪಿ ನಾಯಕರು ಪ್ರಿಯಾಂಕ ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದರು

ಸ್ಟಿಂಗ್ ಪ್ರಕರಣ: ಡಿಕೆಶಿ, ಬಿಕೆಎಚ್ ಬಗೆಹರಿಸಲಿ: ಡಿಸಿಎಂ

• ಉದಯವಾಹಿನಿ, ಬೆಂಗಳೂರು

ಸರ್ಕಾರದ ಕೆಲಸಗಳಿಗಿಂತ ಸ್ಟಿಂಗ್ ಪ್ರಕರಣವೇ ಹೆಚ್ಚು ಚರ್ಚೆಯಾಗುತ್ತಿರುವುದು ದುರದೃಷ್ಟಕರ ಮುಖ್ಯಮಂತ್ರಿ ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಇಬ್ಬರು ಕುಳಿತು ಚರ್ಚಿಸಿ ಪಕ್ಷದ ವರ್ಚಸ್ಸಿಗೆ ಹಾನಿಯಾಗದಂತೆ ಸಮಸ್ಯೆ ಬಗೆಹರಿಸುವ ಅಗತ್ಯವಿದೆ ಎಂದು ಉಪ ಮುಖ್ಯಮಂತ್ರಿ ಡಾ. ಜಿ ಪರಮೇಶ್ವರ್ ಹೇಳಿದರು ಪ್ರಕರಣದ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಆದರೆ, ಪ್ರತಿದಿನ ಪತ್ರಿಕೆಗಳು ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಇದೇ ವಿಚಾರವನ್ನು ಜನರು ನೋಡುತ್ತಿದ್ದರೆ ಅವರಿಗೆ ಬೇಸರವಾಗುವುದಿಲ್ಲವೇ ಜನರ ನಿರೀಕ್ಷೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಸರ್ಕಾರದ ಕೆಲಸಗಳು, ಜನರ ಸಮಸ್ಯೆಗಳು ಹಾಗೂ ಅಭಿವೃದ್ಧಿ ಕಾರ್ಯಗಳ ಬಗ್ಗೆಯೂ ಚರ್ಚೆಯಾಗಬೇಕು ಎಂದರು.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಂದರ್ಭದಲ್ಲಿ ಸ್ಟಿಂಗ್ ಪ್ರಕರಣದಿಂದ ಸರ್ಕಾರ ಮತ್ತು ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೈಕಮಾಂಡ್ ಮಧ್ಯಪ್ರವೇಶಿಸಬೇಕೆಂಬ ಒತ್ತಾಯದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಈ ವಿಚಾರದಲ್ಲಿ ತಕ್ಷಣವೇ ಹೈಕಮಾಂಡ್ ಮಧ್ಯಪ್ರವೇಶಿಸಬೇಕೆಂದು ಹೇಳುವ ಅಗತ್ಯವಿಲ್ಲ. ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷರು ಕುಳಿತು ಚರ್ಚಿಸಿ, ಸರ್ಕಾರ ಅಥವಾ ಪಕ್ಷಕ್ಕೆ ಮುಜುಗರವಾಗದ ರೀತಿಯಲ್ಲಿ ಸ್ಥಳೀಯವಾಗಿಯೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಎಂದರು

ಉದಯವಾಹಿನಿ ಚಿತ್ರ

ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿಗಳೂ ಇದ್ದಾರೆ. ಪ್ರತಿಯೊಂದು ವಿಚಾರಕ್ಕೂ ಹೈಕಮಾಂಡ್ ಮಧ್ಯಪ್ರವೇಶವನ್ನು ನಿರೀಕ್ಷಿಸುತ್ತಾ ಕುಳಿತರೆ ಸಮಸ್ಯೆ ಬಗೆಹರಿಯುವುದಿಲ್ಲ. ಹಿರಿಯ ನಾಯಕರ ತಂಡವನ್ನು ಕಳುಹಿಸಲಾಗುತ್ತದೆ ಎಂಬ ಚರ್ಚೆಗಳ ಕುರಿತು ಕೇಳಿದ ಪ್ರಶ್ನೆಗೆ, ಆ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದು ಹೇಳಿದರು.

ಅ.31ರಿಂದ ಇ-ಖಾತಾ ಮೇಳ ಪುನರಾರಂಭ..!

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು:

ಬೆಂಗಳೂರಿನ ಆಸ್ತಿ ಮಾಲೀಕರಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಬಿಗ್ ರಿಲೀಫ್ ನೀಡಿದೆ. ನಗರದಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ಇ-ಖಾತಾ ವಿಶೇಷ ಮೇಳಗಳು (ಒಜಟಚಿ) ಅಕ್ಟೋಬರ್ 31 ರಿಂದ ಪುನರಾರಂಭಗೊಳ್ಳಲಿವೆ ಎಂದು ಜಿಬಿಎ ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್ ಅವರು ಶನಿವಾರ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಐದು ಪಾಲಿಕೆಗಳ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿಗಳು ಹಾಗೂ ಗುರುತಿಸಲಾದ ಇತರ ಸ್ಥಳಗಳಲ್ಲಿ ಇ-ಖಾತಾ ಮೇಳಗಳು ನಡೆಯಲಿವೆ. ಇ-ಖಾತಾ ಸೇವೆಗಳನ್ನು ಹೇಗೆ ಪಡೆಯಬೇಕು ಎಂಬುದನ್ನು ವಿವರಿಸುವ ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ವಿಡಿಯೊಗಳನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಸಾರ್ವಜನಿಕರು ಜಿಬಿಎ ಇ-ಆಸ್ತಿ ಪೋರ್ಟಲ್ ಮೂಲಕವೂ ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು. ಜಿಬಿಎ ವ್ಯಾಪ್ತಿಯಲ್ಲಿ ಇ-ಖಾತಾ ಪಡೆಯಲು, ಹೊಸ ಖಾತೆ ಮಾಡಿಸಲು ಅಥವಾ ಬಿ ಖಾತಾವನ್ನು ಎ ಖಾತೆಯಾಗಿ ಪರಿವರ್ತಿಸಲು ತೊಂದರೆ ಎದುರಿಸುತ್ತಿರುವವರು ಜನಸೇವಕ ಸೇವೆಯ ಪ್ರಯೋಜನ ಪಡೆಯಬಹುದು. ಜನಸೇವಕ ಪ್ರತಿನಿಧಿಗಳು ಮನೆಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ನೆರವಾಗಲಿದ್ದಾರೆ.

ಈ ಸೇವೆ ಪಡೆಯಲು ಸಾರ್ವಜನಿಕರು ಜನಸೇವಕ ವೆಬ್‌ಸೈಟ್ ಮೂಲಕ ಸಮಯ ನಿಗದಿಪಡಿಸಿಕೊಳ್ಳಬಹುದು ಅಥವಾ ನೀಡಿರುವ ಸಹಾಯವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು. ಜಿಬಿಎ ವ್ಯಾಪ್ತಿಯ 140 ಬೆಂಗಳೂರು ಒನ್ ಕೇಂದ್ರಗಳಲ್ಲಿಯೂ ಇ-ಖಾತಾಗೆ ಅರ್ಜಿ ಸಲ್ಲಿಸುವ ಸೌಲಭ್ಯ ಲಭ್ಯವಿದೆ. ಇ-ಖಾತಾ ಸೇವೆಗಳ ಕುರಿತು ಹೆಚ್ಚಿನ ಮಾಹಿತಿ ಪಡೆಯಲು ಸಾರ್ವಜನಿಕರು ಕಂದಾಯ ಇಲಾಖೆಯ ಯೂಟ್ಯೂಬ್ ಚಾನೆಲ್ ವೀಕ್ಷಿಸಬಹುದು. ಸ್ವತಃ ಅರ್ಜಿ ಸಲ್ಲಿಸಲು ಜಿಬಿಎ ಇ-ಆಸ್ತಿ ಪೋರ್ಟಲ್ ಬಳಸಬಹುದು ಎಂದು ತಿಳಿಸಿದರು.

ಮುಖ್ಯ ಕಾರ್ಯದರ್ಶಿಗಳ ವಿರುದ್ಧ ಹಕ್ಕುಚ್ಯುತಿ ಮಂಡನೆಗೆ ಮುಂದು!

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಯೋಜನೆಗಳಲ್ಲಿನ ಅಕ್ರಮಗಳನ್ನು ಪರಿಶೀಲಿಸುವ ಸಮಿತಿ ಮುಂದೆ ಹಾಜರಾಗದ ಹಿನ್ನೆಲೆಯಲ್ಲಿ ಕರ್ನಾಟಕ ಸೇರಿದಂತೆ ಆರು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ವಿರುದ್ಧ ಹಿರಿಯ ಕಾಂಗ್ರೆಸ್ ನಾಯಕ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಅಧ್ಯಕ್ಷ ಕೆ.ಸಿ. ವೇಣುಗೋಪಾಲ್ ಹಕ್ಕುಚ್ಯುತಿ ಮಂಡನೆಗೆ ಮುಂದಾಗಿದ್ದಾರೆ.

ಈ ಸಂಬಂಧ ಅಕ್ಟೋಬರ್ 22 ರಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ವೇಣುಗೋಪಾಲ್ ಪತ್ರ ಬರೆದಿದ್ದು, ಉತ್ತರ ಪ್ರದೇಶ, ಕರ್ನಾಟಕ, ಪಂಜಾಬ್, ಒಡಿಶಾ, ಬಿಹಾರ ಮತ್ತು ಮಧ್ಯಪ್ರದೇಶದ ಮುಖ್ಯ ಕಾರ್ಯದರ್ಶಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

ಸಮಿತಿಯು ಅವರ ಗೈರುಹಾಜರಿಯನ್ನು ಸಂಸದೀಯ ಹಕ್ಕು ಉಲ್ಲಂಘನೆ ಎಂದು ಸರ್ವಾನುಮತದಿಂದ ಪರಿಗಣಿಸಿದೆ ಎಂದು ಅವರು ಹೇಳಿದ್ದಾರೆ.

ಸಂಸತ್ತಿಗೆ ತಮಗಿರುವ ಹೊಣೆಗಾರಿಕೆಯನ್ನು ಕಡೆಗಣಿಸಿದ್ದು, ಯಾವುದೇ ವಿನಾಯಿತಿಗಳನ್ನು ನೀಡದಿದ್ದರೂ ಯಾವುದೇ ಮುಖ್ಯ ಕಾರ್ಯದರ್ಶಿಗಳು ಸಮಿತಿಯ ಮುಂದೆ ಹಾಜರಾಗಿಲ್ಲ. ಸಮಿತಿಯ ಮುಂದೆ ಹಾಜರಾಗಲು ವಿಫಲರಾದ ಉತ್ತರ ಪ್ರದೇಶ, ಬಿಹಾರ ಮತ್ತು ಒಡಿಶಾದ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಗಳ ವಿರುದ್ಧವೂ ಕ್ರಮ ಕೈಗೊಳ್ಳಬೇಕೆಂದು ವೇಣುಗೋಪಾಲ್ ಕೋರಿದ್ದಾರೆ.

ಉದಯವಾಹಿನಿ ಚಿತ್ರ

2025 ರ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿಎಜಿ) ವರದಿಯಲ್ಲಿನ ಸಂಶೋಧನೆಗಳ ಆಧಾರದ ಮೇಲೆ, ಎಸ್‌ಸಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಯೋಜನೆಗಳ ಅನುಷ್ಠಾನವನ್ನು ಸಮಿತಿ ಪರಿಶೀಲಿಸುತ್ತಿದೆ.

ವಾಯುಭಾರ ಕುಸಿತ: ರಾಜ್ಯದಲ್ಲಿ ಮಳೆ ಅಬ್ಬರ

• ಉದಯವಾಹಿನಿ, ಬೆಂಗಳೂರು

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಅಕ್ಟೋಬರ್ 28ರವರೆಗೆ ರಾಜ್ಯದಾದ್ಯಂತ ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಇಂದು 23 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ದಕ್ಷಿಣ ಒಳನಾಡು

ಉದಯವಾಹಿನಿ ಚಿತ್ರ

ಹಾಗೂ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮಳೆಯ ತೀವ್ರತೆ ಹೆಚ್ಚಾಗುವ ಸಾಧ್ಯತೆ ಇದೆ. ಕೆಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದ್ದು, ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. ನಿರಂತರ ಮಳೆಯಿಂದಾಗಿ ತಗ್ಗು ಪ್ರದೇಶಗಳಲ್ಲಿ ನೀರು ನಿಲ್ಲುವ ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುವ ಸಾಧ್ಯತೆಯೂ ಇದೆ.

ರಾಜಧಾನಿ ಬೆಂಗಳೂರಿನಲ್ಲಿ ತಡರಾತ್ರಿ ಮಳೆ ಸುರಿದಿದ್ದು, ಮುಂಜಾನೆವರೆಗೂ ತುಂತುರು ಮಳೆ ಮುಂದುವರಿದಿದೆ. ಪರಿಣಾಮ ಬೆಳಗಿನ ವೇಳೆಯಲ್ಲಿ ತಂಪಾದ ವಾತಾವರಣ ಕಂಡುಬಂದಿದೆ. ಇಂದು ಇಡೀ ದಿನ ನಗರದಲ್ಲಿ ಮೋಡ ಮುಸುಕಿದ ವಾತಾವರಣ ಮುಂದುವರಿಯುವ ಸಾಧ್ಯತೆ ಇದೆ. ಸಂಜೆ ಹಾಗೂ ರಾತ್ರಿ ವೇಳೆಯಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈಗಾಗಲೇ ನಗರದಲ್ಲಿ ಸುರಿದ ಮಳೆಯಿಂದಾಗಿ ವಾಹನ ಸವಾರರು ಎಚ್ಚರಿಕೆಯಿಂದ ಸಂಚರಿಸಬೇಕಿದೆ.

ಸಂಜೆ ಹಾಗೂ ರಾತ್ರಿ ವೇಳೆ ಮಳೆಯಾದರೆ ಸಂಚಾರ ದಟ್ಟಣೆ ಹೆಚ್ಚಾಗುವ ಸಾಧ್ಯತೆಯೂ ಇದೆ.

ಸ್ಟಿಂಗ್ ಆಪರೇಷನ್: ದೆಹಲಿ ಮೂಲದ ಆರೋಪಿಗೆ ಷರತ್ತುಬದ್ಧ ಜಾಮೀನು..!

ತನಿಖೆಯ ವೇಳೆ ಆರೋಪಿಯ ಡಿಜಿಟಲ್ ಚಲನವಲನಗಳ ಬಗ್ಗೆ ಸಿಸಿಬಿ ಪೊಲೀಸರಿಗೆ ಮಹತ್ವದ ಸುಳಿವು ಸಿಕ್ಕಿದೆ.

• ಉದಯವಾಹಿನಿ, ಬೆಂಗಳೂರು

1 ಕಠಿಣ ಷರತ್ತುಗಳೊಂದಿಗೆ ಜಾಮೀನು
2 ಕರ್ನಾಟಕ ಹನಿಟ್ರ್ಯಾಪ್ ಚಾನೆಲ್
3 ಆಂಡ್ರಾಯ್ಡ್ ಮೊಬೈಲ್ ಖರೀದಿಸಿದ್ದ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು 'ಸ್ಟಿಂಗ್ ಆಪರೇಷನ್' ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟದ್ದ ಆರೋಪದ ಮೇಲೆ ಬಂಧಿತನಾಗಿದ್ದ ದೆಹಲಿ ಮೂಲದ ರಿತೇಶ್ ಪಾಂಡೆಗೆ ಬೆಂಗಳೂರಿನ ಸ್ಥಳೀಯ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಬೆಂಗಳೂರು ನಗರದ ಸಿಸಿಬಿ (ಕೇಂದ್ರ ಅಪರಾಧ ವಿಭಾಗ) ಪೊಲೀಸರು ತೀವ್ರ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದರು.

ಸದ್ಯ ನ್ಯಾಯಾಲಯವು ತನಿಖೆಗೆ ಸಂಪೂರ್ಣ ಸಹಕಾರ ನೀಡಬೇಕು ಮತ್ತು ಬೆಂಗಳೂರು ತೊರೆಯುವ ಮುನ್ನ ಪೊಲೀಸರಿಗೆ ಮಾಹಿತಿ ನೀಡಬೇಕು ಎಂಬ ಕಠಿಣ ಷರತ್ತುಗಳೊಂದಿಗೆ ಜಾಮೀನು ನೀಡಿದೆ. ತನಿಖೆಯ ವೇಳೆ ಆರೋಪಿಯ ಡಿಜಿಟಲ್ ಚಲನವಲನಗಳ ಬಗ್ಗೆ ಸಿಸಿಬಿ ಪೊಲೀಸರಿಗೆ ಮಹತ್ವದ ಸುಳಿವು ಸಿಕ್ಕಿದೆ. ಆರೋಪಿ ರಿತೇಶ್ ಪಾಂಡೆ ಪೊಲೀಸರ ಕಣ್ಣಿಗೆ ಮಣ್ಣೆರಚಲು ದೆಹಲಿಯ ಕರೋಲ್ ಬಾಗ್ ಮಾರುಕಟ್ಟೆಯಿಂದ ರೂ.15,000 ಕೊಟ್ಟು ಹಳೆಯ (ಸೆಕೆಂಡ್ ಹ್ಯಾಂಡ್) ಆಂಡ್ರಾಯ್ಡ್ ಮೊಬೈಲ್ ಖರೀದಿಸಿದ್ದ.

ಬಳಿಕ ಯುಎಸ್‌ಬಿ ಡ್ರೈವ್ ಬಳಸಿ ವಿಡಿಯೋವನ್ನು ಇಂಟರ್ನೆಟ್‌ಗೆ ಅಪ್‌ಲೋಡ್ ಮಾಡಿದ್ದ. ಸದ್ಯ ಪೊಲೀಸರು ಆತ ಫೋನ್ ಖರೀದಿಸಿದ ಅಂಗಡಿಯ ಬಿಲ್ ಹಾಗೂ ಸಿಸಿಟಿವಿ ದೃಶ್ಯಾವಳಿಗಳನ್ನು ವಶಪಡಿಸಿಕೊಂಡು ಭದ್ರ ಪುರಾವೆ ಕಲೆಹಾಕಿದ್ದಾರೆ. ಕಳೆದ ತಿಂಗಳು ಸಿದ್ದರಾಮಯ್ಯ ಅವರ ವಿರುದ್ಧ ಗಂಭೀರ ಆರೋಪಗಳನ್ನು ಒಳಗೊಂಡ ಎರಡು ವಿಡಿಯೋಗಳನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ನಾಯಕ ನ್ಯಾಯಾಲಯದ ಮೊರೆ ಹೋಗಿ, ಆ ವಿಡಿಯೋಗಳ ಕುರಿತು ಮಾಧ್ಯಮಗಳು ವರದಿ ಮಾಡದಂತೆ ತಡೆಯಾಜ್ಞೆ ಪಡೆದಿದ್ದರು. ಅಲ್ಲದೆ, ಪ್ರಕರಣದ ತನಿಖೆ ನಡೆಸುವಂತೆ ಪೊಲೀಸರಿಗೆ ದೂರು ನೀಡಿದ್ದರು.

ಉದಯವಾಹಿನಿ ಚಿತ್ರ

ತಮ್ಮನ್ನು ಗುರಿಯಾಗಿಸಿಕೊಂಡು ನಡೆಸಲಾಗಿದೆ ಎನ್ನಲಾದ ಕುಟುಕು ಕಾರ್ಯಾಚರಣೆಯನ್ನು ಸಂಪೂರ್ಣ ಕಟ್ಟುಕಥೆ ಎಂದು ಸಿದ್ದರಾಮಯ್ಯ ಶುಕ್ರವಾರ ಕರೆದಿದ್ದರು. ತಮ್ಮನ್ನು ಬ್ಲ್ಯಾಕ್‌ಮೇಲ್ ಮಾಡುವ ಉದ್ದೇಶದಿಂದ ಈ ಕೃತ್ಯ ಎಸಗಲಾಗಿದೆ ಎಂದು ಆರೋಪಿಸಿದ್ದ ಅವರು, ಸತ್ಯ ಹೊರಬರಲು ಹಾಗೂ ಇದರ ಹಿಂದಿರುವವರನ್ನು ಪತ್ತೆಹಚ್ಚಲು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಒತ್ತಾಯಿಸಿದ್ದರು. ಇದೇ ವೇಳೆ, ತಮ್ಮ ತಂದೆಯ ವರ್ಚಸ್ಸಿಗೆ ಧಕ್ಕೆ ತರುವ ಉದ್ದೇಶದಿಂದ ನಡೆದಿದೆಯೆನ್ನಲಾದ ಕುಟುಕು ಕಾರ್ಯಾಚರಣೆಯ ಹಿಂದೆ ಕಾಂಗ್ರೆಸ್‌ನವರೇ ಇದ್ದಾರೆ ಎಂದು ಸಿದ್ದರಾಮಯ್ಯ ಅವರ ಪುತ್ರ ಹಾಗೂ ಸಚಿವ ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದ್ದರು. ಪುತ್ತೂರು ವಿಧಾನಸಭಾ ಕ್ಷೇತ್ರದಿಂದ ಪಕ್ಷದ ಟಿಕೆಟ್ ಬಯಸಿದ್ದ ಕಾಂಗ್ರೆಸ್‌ನ ಮಹಿಳೆಯೊಬ್ಬರು ಹಾಗೂ ಮಾಧ್ಯಮ ಸಂಸ್ಥೆಯೊಂದರ ಮುಖ್ಯಸ್ಥರು ಈ ಪ್ರಕರಣದಲ್ಲಿ ಭಾಗಿಯಾಗಿರುವುದನ್ನು ವಿಡಿಯೋ ಸೂಚಿಸುತ್ತದೆ ಎಂದು ಯತೀಂದ್ರ ಹೇಳಿದ್ದರು.

> ಬಂಧಿತ ಆರೋಪಿಯನ್ನು ಉತ್ತರ ಪ್ರದೇಶದ ಗಾಜಿಯಾಬಾದ್ ನಿವಾಸಿ ರಿತೇಶ್ ಪಾಂಡೆ ಎಂದು ಗುರುತಿಸಲಾಗಿದೆ. ಈತ 'ಕರ್ನಾಟಕ ಹನಿಟ್ರ್ಯಾಪ್' ಎಂಬ ಯೂಟ್ಯೂಬ್ ಚಾನೆಲ್ ಸೇರಿದಂತೆ ವಿವಿಧ ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೋ ಅಪ್‌ಲೋಡ್ ಮಾಡಿದ್ದ ಎಂದು ತಿಳಿಸಿದ್ದಾರೆ.-ಪೊಲೀಸರು

ಕೆಲವೇ ದಿನಗಳು ಬಾಕಿ

ಇನ್ನೊಂದೆಡೆ, ತಮ್ಮ ವಿರುದ್ಧದ ಸಂಚಿನ ಕುರಿತು ನೀಡಿರುವ ದೂರಿನ ತನಿಖೆಯ ಬಗ್ಗೆ ಸಿದ್ದರಾಮಯ್ಯ ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದ ರಾಜ್ಯ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಕುಟುಕು ಕಾರ್ಯಾಚರಣೆಯ ಹಿಂದಿರುವವರು ಬಯಲಾಗಲು ಕೆಲವೇ ದಿನಗಳು ಬಾಕಿ ಇವೆ ಎಂದರು.

ಉದಯ ವಾಹಿನಿ
ಪ್ರಾದೇಶಿಕ
ಸೋಮವಾರ 26 ಅಕ್ಟೋಬರ್ | 03

ಕರ್ತವ್ಯವೇ ಮೊದಲೇ ಆದ್ಯತೆ ಎಸ್ಪಿ ಚಂದ್ರಕಾಂತ

• **ಉದಯವಾಹಿನಿ,** ವಿಜಯಪುರ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಲ್. ಚಂದ್ರಕಾಂತ ಅವರು ವಿಜಯಪುರ ಪೊಲೀಸ್ ಠಾಣೆಯಲ್ಲಿ ಹಮ್ಮಿಕೊಂಡಿದ್ದ ದಸರಾ ಹಾಗೂ ಆಯುಧ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಮಾಜದ ರಕ್ಷಣೆಯೇ ಪೊಲೀಸರ ಮೊದಲ ಕರ್ತವ್ಯವಾಗಿದ್ದು, ಎಲ್ಲರೂ ಹಬ್ಬವನ್ನು ಆಚರಿಸಿ ಸಂತೋಷಪಟ್ಟ ನಂತರವೇ ಪೊಲೀಸರು ಸಂಭ್ರಮಾಚರಣೆ ಮಾಡುತ್ತಾರೆ ಎಂದು ತಿಳಿಸಿದರು.

ಗ್ರಾಮೀಣ ಭಾಗದಲ್ಲಿಯೂ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು, ಶೇಕಡಾ 35ರಷ್ಟು ಸಿಬ್ಬಂದಿಯ ಕೊರತೆಯಿದ್ದರೂ ಲಭ್ಯವಿರುವ ಸಿಬ್ಬಂದಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಜಯಪುರ ಪಟ್ಟಣದಲ್ಲಿ ಸಾರಿಗೆ ಸಮಸ್ಯೆ ಹೆಚ್ಚಾಗಿದ್ದು, ಹೆಚ್ಚುವರಿ ಸಿಬ್ಬಂದಿ ನಿಯೋಜನೆಗಾಗಿ ಮನವಿ ಸಲ್ಲಿಸಲಾಗಿದೆ ಹಾಗೂ ಬಸವನ್ನ ತೋಟದ ಬಳಿ ಹೊಸ ಪೊಲೀಸ್ ಠಾಣೆ ನಿರ್ಮಾಣಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ವೃತ್ತ ನಿರೀಕ್ಷಕ ಲಕ್ಷ್ಮೀನಾರಾಯಣ್, ಸಬ್ ಇನ್ಸ್‌ಪೆಕ್ಟರ್ ಸುನಿಲ್ ಹಾಗೂ ಸಿಬ್ಬಂದಿ ವರ್ಗ ತಮ್ಮ ಸಮವಸ್ತ್ರದ ಬದಲಾಗಿ ಸಾಂಪ್ರದಾಯಿಕ ಉಡುಗೆಯನ್ನು ಧರಿಸಿ ಆಯುಧ ಪೂಜಾ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ದಸರಾದಲ್ಲಿ ಸಚಿವರಿಗೆ ತಡೆ : ದಲಿತ ಸಂಘರ್ಷ ಸಮಿತಿ ಖಂಡನೆ

ಮುಜರಾಯಿ ಸಚಿವ ಬಸವಂತಪ್ಪಗೆ ಪ್ರವೇಶವನ್ನು ನೀಡದೆ ನಂದಿಧ್ವಜ ಪೂಜೆ ಮಾಡಿರುವುದು ಅಮಾನಿಯ

• **ಉದಯವಾಹಿನಿ, ಕೋಲಾರ**

ಮೈಸೂರು ದಸರಾ ಆಚರಣೆಯ ನಂದಿಧ್ವಜ ಪೂಜೆ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿ ಶಿವರಾಜ ತಂಗಡಗಿ, ಕೃಷಿ ಸಚಿವ ನರೇಂದ್ರಸ್ವಾಮಿ ಹಾಗೂ ಮುಜರಾಯಿ ಸಚಿವ ಬಸವಂತಪ್ಪಗೆ ಪ್ರವೇಶವನ್ನು ನೀಡದೆ ನಂದಿಧ್ವಜ ಪೂಜೆ ಮಾಡಿರುವುದು ಅಮಾನಿಯ, ಕನ್ನಡನಾಡಿಗೆ ತಲೆ ತಗ್ಗಿಸುವಂತಹ ಅಸ್ಪೃಶ್ಯತಾ ಆಚರಣೆಯಾಗಿದೆ.

ಇಂತಹ ಮಾನವ ವಿರೋಧಿ ಕೃತ್ಯವನ್ನು ಗಂಭೀರವಾಗಿ ಪರಿಗಣಿಸದೆ ಸಂಬಂಧಪಟ್ಟ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಕೃತ್ಯವನ್ನು ಮುಚ್ಚಿಹಾಕುವ ಪ್ರಯತ್ನವಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಯೋಜಕ ರಾಜ್ಯ ಅಧ್ಯಕ್ಷ ಡಾ. ಆರ್. ಅಶ್ವತ್ಥ ಅಂತ್ಯಜ, ರಾಜ್ಯ ಸಂಯೋಜಕಿ ಎಸ್.ಸಿ. ಶೈಲಜ ಮತ್ತು ಕೇಂದ್ರ ಸಮಿತಿ ಸದಸ್ಯ ಮಾಸ್ತಿ ಜಗನ್ನಾಥ್ ಕಿಡಿಕಾರಿದ್ದಾರೆ. ಈ ಕುರಿತು ಜಂಟಿ ಹೇಳಿಕೆ ನೀಡಿರುವ ಅವರು, ರಾಜ್ಯದ ಮುಖ್ಯಮಂತ್ರಿ ಡಿ.ಕೆ.ಶಿ ಇದರ ಹೊಣೆಯನ್ನು ಹೊರಬೇಕಾಗಿದೆ. ಜೊತೆಗೆ ವಿರೋಧ ಪಕ್ಷವಾದ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮುಖಂಡರು ಇಂತಹ ಘಟನೆಯನ್ನು ಖಂಡಿಸುವಲ್ಲಿ ವಿಫಲವಾಗಿದ್ದಾರೆ ಎಂದು ಆರೋಪಿಸಿದ್ದಾರೆ.


ಉದಯವಾಹಿನಿ ಚಿತ್ರ

ತಂಬಾಕು ಹರಾಜು ಮಾರುಕಟ್ಟೆಗೆ ತಂತ್ರಜ್ಞಾನ ಸ್ಪರ್ಶ

ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಕಿಯೋಸ್ಕ್ ಸ್ವಯಂ ಚಾಲಿತ (ಎಟಿಎಂ) ಮಾದರಿ ಯಂತ್ರವಾಗಿದ್ದು ಇದರಲ್ಲಿ ಸಮಗ್ರ ಮಾಹಿತಿ ಅಡಕವಾಗಿದೆ

• **ಉದಯವಾಹಿನಿ, ಹುಣಸೂರು**

1 ತಾಲ್ಲೂಕುಗಳಲ್ಲಿ 40 ರಿಂದ 42 ಸಾವಿರ ರೈತರು
2 2500 ಕೋಟಿ ವ್ಯವಹಾರ ನಡೆಸುವ ರೈತರು
3 ರೈತಸ್ನೇಹಿ ಮಾರುಕಟ್ಟೆಯನ್ನಾಗಿಸುವ ದೃಷ್ಟಿ

ರೈತ ಸ್ನೇಹಿ ತಂಬಾಕು ಹರಾಜು ಮಾರುಕಟ್ಟೆ ಕಲ್ಪಿಸುವ ದಿಕ್ಕಿನಲ್ಲಿ ತಂಬಾಕು ಹರಾಜು ಮಂಡಳಿ ಮಾಹಿತಿ ತಂತ್ರಜ್ಞಾನಕ್ಕೆ ಮೊರೆಹೋಗಿದ್ದು ಹೈಟೆಕ್ ಆಗುತ್ತಿದೆ. ಮಾರುಕಟ್ಟೆಗೆ ಒತ್ತು ನೀಡಿ ಅಂಗೈನಲ್ಲಿ ಸಕಲ ಮಾಹಿತಿ ಲಭ್ಯತೆಯತ್ತ ದಾಪುಗಾಲು ಇಟ್ಟಿದೆ.

ರಾಜ್ಯದ ಹಳೆ ಮೈಸೂರು ಭಾಗದ 6 ತಾಲ್ಲೂಕುಗಳಲ್ಲಿ 40 ರಿಂದ 42 ಸಾವಿರ ರೈತರು ವಾಣಿಜ್ಯ ಬೆಳೆ ತಂಬಾಕು ಬೇಸಾಯದಲ್ಲಿ ತೊಡಗಿದ್ದಾರೆ.

ವಾರ್ಷಿಕ 920 ಲಕ್ಷ ಕೆ.ಜಿ ಬೆಳೆದು ಅಂದಾಜು 2500 ಕೋಟಿ ವ್ಯವಹಾರ ನಡೆಸುವ ರೈತರಿಗೆ ಸೂಕ್ತ ರೀತಿಯ ಮಾಹಿತಿ ಸಿಗಬೇಕೆಂಬ ಅಗತ್ಯತೆ ಮಂಡಳಿ ಹೊಣೆಯಾಗಿದೆ.

ಹಲವು ಬದಲಾವಣೆ ಜಾರಿಗೊಳಿಸಿ ರೈತಸ್ನೇಹಿ ಮಾರುಕಟ್ಟೆಯನ್ನಾಗಿಸುವ ದೃಷ್ಟಿಯಲ್ಲಿ ಈ ಬದಲಾವಣೆ ತರಲಾಗಿದೆ ಕರ್ನಾಟಕ ರಾಜ್ಯ ತಂಬಾಕು ಹರಾಜು ಮಂಡಳಿ ನಿರ್ದೇಶಕ ಎನ್ನುತ್ತಾರೆ.

ಶ್ರೀನಿವಾಸ್ ಬಿ.ಬಿ. ಮಾಹಿತಿ ಕಣಜ ಕಿಯೋಸ್ಕ್: ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಕಿಯೋಸ್ಕ್ ಸ್ವಯಂ ಚಾಲಿತ (ಎಟಿಎಂ) ಮಾದರಿ ಯಂತ್ರವಾಗಿದ್ದು ಇದರಲ್ಲಿ ಸಮಗ್ರ ಮಾಹಿತಿ ಅಡಕವಾಗಿದೆ. ರೈತ ತನ್ನ ನೋಂದಣಿ ಸಂಖ್ಯೆ ಒತ್ತಿ ತನ್ನ ಖಾತೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಸ್ಥಳೀಯ ಭಾಷೆಯಲ್ಲಿ ಪಡೆಯಬಹುದು. ಇದರಿಂದ ರೈತ ತಾನು ಮಾರುಕಟ್ಟೆಗೆ ತರುವ ತಂಬಾಕು ಬೇಲ್ ಯಾವ ದರಕ್ಕೆ ಮಾರಾಟವಾಗಿದೆ ಅಥವಾ ತಿರಸ್ಕೃತವಾಯಿತೇ ಎಂಬ ಮಾಹಿತಿ ಹೊಂದಲು ಪೂರಕವಾಗಿದೆ. ಇದಲ್ಲದೆ ರೈತನಿಗೆ ಬ್ಯಾಂಕ್ ಖಾತೆ ಒಳಗೊಂಡಂತೆ ಬೆಳೆಗಾರನ ಸಮಗ್ರ ಮಾಹಿತಿ ತಿಳಿಯಲು ಕಚೇರಿ ಅವಲಂಬಿಸದೆ ಸ್ವಯಂ ಮಾಹಿತಿ ಹೊಂದಲು ಸಹಕಾರಿಯಾಗಿದೆ ಎನ್ನುವರು.

ಉದಯವಾಹಿನಿ ಚಿತ್ರ

ಪೈಲೆಟ್ ಪ್ರಾಜೆಕ್ಟ್: ಕಿಯೋಸ್ಕ್ ಸ್ವಯಂ ಚಾಲಿತ ಯಂತ್ರವನ್ನು ರಾಜ್ಯದಲ್ಲಿ ಕಟ್ಟೆಮಲಳವಾಡಿ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಅಳವಡಿಸಲಾಗಿದೆ. ಇದರ ಬಳಕೆ ಕುರಿತು ಅಧ್ಯಯನ ನಡೆಸಿ ಆಗುಹೋಗುಗಳ ವರದಿ ಅವಲಂಬಿಸಿ ರಾಜ್ಯದ ಎಲ್ಲಾ ಹರಾಜು ಮಾರುಕಟ್ಟೆಗೆ ವಿಸ್ತರಿಸುವ ಆಲೋಚನೆ ಹೊಂದಿದ್ದೇವೆ ಎನ್ನುತ್ತಾರೆ ನಿರ್ದೇಶಕರು.

ಗುರುತಿನ ಚೀಟಿ: ತಂಬಾಕು ಬೆಳೆಗಾರರಿಗೆ ಪ್ರಥಮಬಾರಿಗೆ ಗುರುತಿನ ಚೀಟಿ ವಿತರಿಸಲಾಗುತ್ತಿದೆ. ಇದರಿಂದ ಹರಾಜು ಮಾರುಕಟ್ಟೆಯಲ್ಲಿ ರೈತ ಸಮಸ್ಯೆ ರಹಿತ ಪಾರದರ್ಶಕ ವಹಿವಾಟು ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಹಕಾರವಾಗಲಿದೆ. ಈಗಿನ ಪರಿಸ್ಥಿತಿಯಲ್ಲಿ ಬೆಳೆಗಾರ ಮತ್ತು ಸಾರ್ವಜನಿಕರು ಯಾರು ಎಂಬುದು ತಿಳಿಯದೆ ಹರಾಜು ಪ್ರಕ್ರಿಯೆಯಲ್ಲಿ ಅನಗತ್ಯ ಜನರ ಹಾವಳಿ ಹೆಚ್ಚಿದೆ. ಗುರುತಿನ ಚೀಟಿ ಇದ್ದವರು ಭಾಗವಹಿಸುವುದರಿಂದ ಮಾರುಕಟ್ಟೆಯಲ್ಲಿ ಸಾರ್ವಜನಿಕರ ಒತ್ತಡ ಮುಕ್ತದಿಂದ ನಡೆಸಲು ಸಹಕಾರಿಯಾಗಲಿದೆ.

ಬೇಲ್ ಯಂತ್ರ: ತಂಬಾಕು ಸಂಶೋಧನ ಕೇಂದ್ರ, ಅಭಿವೃದ್ಧಿಪಡಿಸಿರುವ ತಂಬಾಕು ಬೇಲ್ ಸಿದ್ಧಪಡಿಸುವ ಯಂತ್ರ ರೈತರಿಗೆ ಸಿ.ಎಸ್.ಆರ್ ಅನುದಾನದಲ್ಲಿ ರಿಯಾಯಿತಿ ದರದಲ್ಲಿ ವಿತರಿಸಿ ಯಾಂತ್ರೀಕೃತ ಪದ್ಧತಿಯಿಂದ ಮಾನವ ಶಕ್ತಿ ಕಡಿತಗೊಳಿಸಿ ಉತ್ಪಾದನ ವೆಚ್ಚತಗ್ಗಿಸುವ ಚಿಂತನೆ ನಡೆದಿದೆ. ಆರಂಭದಲ್ಲಿ ಒಂದು ಸಾವಿರ ರೈತರಿಗೆ ವಿತರಿಸುವ ಪ್ರಸ್ತಾವ ಇದೆ ಎನ್ನುವರು.

> **ತಂಬಾಕು ಮಾರುಕಟ್ಟೆಯಲ್ಲಿ ಹೈಟೆಕ್ ಮಾಹಿತಿ ಯಂತ್ರ ಅಳವಡಿಸಿ ರೈತ ಮಾರುಕಟ್ಟೆಗೆ ಸಂಬಂಧಿಸಿದ ಮಾಹಿತಿ ಕ್ಷಣಾರ್ಧದಲ್ಲಿ ಪಡೆಯಲು ಸಹಕಾರಿಯಾಗಿದೆ. ಕಚೇರಿ ಸಿಬ್ಬಂದಿಗೆ ದುಂಬಾಲು ಬೀಳುವ ಅಗತ್ಯವಿಲ್ಲ. ಗುರುತಿನ ಚೀಟಿ ನೀಡುವುದರಿಂದ ರೈತ ಮುಕ್ತವಾಗಿ ಹರಾಜಿನಲ್ಲಿ ಭಾಗವಹಿಸಲು ಸಹಕಾರಿಯಾಗಿದೆ. - ಉಂಡವಾಡಿ ಚಂದ್ರೇಗೌಡ**

> **ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಆಧುನಿಕತೆ ಅಳವಡಿಸಿ ರೈತರು ಬೆಳೆದ ತಂಬಾಕು ಮುಕ್ತ ವಾತಾವರಣದಲ್ಲಿ ಮಾರಾಟ ಮಾಡಲು ಹಲವು ಬದಲಾವಣೆ ತರುತ್ತಿದ್ದು ಇದಕ್ಕೆ ರೈತರ ಸಹಕಾರ ಅಗತ್ಯ. - ಶ್ರೀನಿವಾಸ್ ಬಿ.ಬಿ., ನಿರ್ದೇಶಕ**

ಕ್ಯಾನ್ಸರ್ ಭಯ ಬೇಡ, ಜಾಗೃತಿ ಇರಲಿ ಎನ್ನುತ್ತಾರೆ ಡಾ. ನವೀನ್

• **ಉದಯವಾಹಿನಿ, ಕಿಕ್ಕೇರಿ**

ಮೈಮೇಲಿನ ಎಲ್ಲಾ ಗಂಟುಗಳು ಕ್ಯಾನ್ಸರ್‌ಕಾರಕ ಗಡ್ಡೆಗಳು ಎಂದು ಭಾವಿಸಿ ಭಯ ಬೇಡ ಎಂದು ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞ ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಡಾ. ನವೀನ್ ತಿಳಿಸಿದರು. ಪಟ್ಟಣದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಏರ್ಪಡಿಸಿದ್ದ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದ ತಾಲ್ಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿಯಲ್ಲಿ ಮಾತನಾಡಿದರು. ಆರಂಭಿಕ ಹಂತದಲ್ಲಿ ತಪಾಸಣೆ, ಚಿಕಿತ್ಸೆ ಮಾಡಿಸಿಕೊಂಡರೆ ಕ್ಯಾನ್ಸರ್ ತಡೆಗಟ್ಟಬಹುದಾಗಿದೆ. ದೇಹದಲ್ಲಿ ಕಾಣುವ ಅಸಹಜ ಬದಲಾವಣೆ, ಸ್ತನದಲ್ಲಿನ ಗಂಟು, ಅಸಾಮಾನ್ಯ ರಕ್ತಸ್ರಾವದಂತಹ ಅನುಮಾನಾಸ್ಪದ ಲಕ್ಷಣ ಕಂಡು ಬಂದಲ್ಲಿ ತಡಮಾಡದೆ ವೈದ್ಯರನ್ನು ಸಂಪರ್ಕಿಸಿ. ಭಯ, ತಪ್ಪ ಗ್ರಹಿಕೆ ಬಿಡಿ. ತಾಯಂದಿರು ಮರೆಯದೆ ಮಗುವಿಗೆ ಹಾಲು ಉಣಿಸಿ. ಇದರಿಂದ ಬಹುತೇಕ ಸ್ತನ್ ಕ್ಯಾನ್ಸರ್ ದೂರವಾಗಲಿದೆ ಎಂದು ಮಾಹಿತಿ ನೀಡಿದರು.

ದೇಹ ಸುಂದರ ಯಂತ್ರವಾಗಿದೆ. ಹಾರ್ಮೋನ್ ಗಳ ವ್ಯತ್ಯಾಸದಿಂದ ಹಲವು ಬದಲಾವಣೆ ಸಹಜ. ತಡವಾಗಿ ವಿವಾಹವಾಗುವುದರಿಂದ ಹಲವು ಸಮಸ್ಯೆ ಕಾಡಾಲಿದೆ. ಗುಪ್ತಾಂಗ ಶುಚಿತ್ವದಲ್ಲಿ ಎಚ್ಚರಿಕೆ ಇರಲಿ. ಮಡಿವಂತಿಕೆ, ನಾಚಿಕೆ ಬಿಡಿ. ವೈದ್ಯರು ಇರುವುದು ತಮ್ಮ ಸಮಸ್ಯೆ ಪರಿಹಾರ ಹಾಗೂ ಆರೋಗ್ಯ ರಕ್ಷಕವಚರಾಗಿ ಸೇವೆ ಸಲ್ಲಿಸಲು ಎಂಬ ಭಾವನೆ ಮೂಡಿಸಿಕೊಳ್ಳಿ ಎಂದರು. ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಆರ್‌ಟಿಒ ಮಲ್ಲಿಕಾರ್ಜುನ್ ಮಾತನಾಡಿ, ಮಹಿಳೆಯರು ಕುಟುಂಬದ ಆಧಾರಸ್ತಂಭವಾಗಿದ್ದು, ಕೌಟುಂಬಿಕ ನಿರ್ವಹಣೆ ಆರ್ಥಿಕ ಸ್ವಾವಲಂಬನೆ, ಆತ್ಮವಿಶ್ವಾಸ ಮತ್ತು ಸ್ವಾಭಿಮಾನವನ್ನು ಬೆಳೆಸುವಲ್ಲಿ ಇವರ ಪಾತ್ರ ಬಲುಮುಖ್ಯವಾಗಿದೆ ಎಂದು ನುಡಿದರು.

ಉದಯವಾಹಿನಿ ಚಿತ್ರ

ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಒತ್ತು :1.30 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ : 15 ಕೋಟಿ ವಿಶೇಷ ಅನುದಾನ ಲಭ್ಯ : ಶಾಸಕ ಗಣೇಶ್ ಪ್ರಸಾದ್

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಹಾಗೂ ಚರಂಡಿ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದ್ದು, ಕೂತನೂರು, ಕೊಡಹಳ್ಳಿ ಮತ್ತು ಬೆಟ್ಟಹಳ್ಳಿ ಗ್ರಾಮಗಳಲ್ಲಿ ಒಟ್ಟು 1.30 ಕೋಟಿ ವೆಚ್ಚದ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಚ್.ಎಂ. ಗಣೇಶಪ್ರಸಾದ್ ಗುದ್ದಲಿಪೂಜೆ ನೆರವೇರಿಸಿ ಚಾಲನೆ ನೀಡಿದರು.

ಉದಯವಾಹಿನಿ ಚಿತ್ರ

ತಾಲ್ಲೂಕಿನ ಕೂತನೂರು ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಗ್ರಾಮಗಳಿಗೆ ಸುಸಜ್ಜಿತ ರಸ್ತೆ ಹಾಗೂ ಚರಂಡಿ ನಿರ್ಮಾಣ ಮಾಡಲಾಗುತ್ತಿದೆ.

ಗ್ರಾಮೀಣ ಭಾಗದ ಚಿತ್ರಣ ಬದಲಾಯಿಸಿ, ಜನರಿಗೆ ಅಗತ್ಯವಾದ ಮೂಲಸೌಕರ್ಯ ಒದಗಿಸುವುದೇ ನಮ್ಮ ಪ್ರಮುಖ ಗುರಿಯಾಗಿದೆ ಎಂದು ತಿಳಿಸಿದರು. ಪ್ರಸ್ತುತ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಇನ್ನೂ 15 ಕೋಟಿ ಲಭ್ಯವಿದ್ದು, ಈ ಅನುದಾನವನ್ನು ಬಳಸಿಕೊಂಡು ತಾಲ್ಲೂಕಿನಾದ್ಯಂತ ಹಂತ ಹಂತವಾಗಿ ಪ್ರಮುಖ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು, ತಾಲ್ಲೂಕಿನ ಪ್ರತಿಯೊಂದು ಗ್ರಾಮದಲ್ಲೂ ನಿರಂತರವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು. ನಿರ್ಮಾಣವಾಗುವ ರಸ್ತೆ ಕಾಮಗಾರಿಗಳು ಉತ್ತಮ ಗುಣಮಟ್ಟದಿಂದ ಕೂಡಿರಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ತಾಲ್ಲೂಕಿನ ಅಭಿವೃದ್ಧಿಗಾಗಿ ಹೆಚ್ಚುವರಿ ವಿಶೇಷ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಹಾಗೂ ಸಂಬಂಧಪಟ್ಟ ಇಲಾಖೆಗಳ ಸಚಿವರಿಗೆ ಮನವಿ ಸಲ್ಲಿಸಲಾಗಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ದೊರೆಯುವ ವಿಶ್ವಾಸವಿದೆ ಎಂದು ಹೇಳಿದರು.

ಮೂರು ಗ್ರಾಮಗಳಲ್ಲಿ ಕಾಮಗಾರಿಗೆ ಚಾಲನೆ

ಕೂತನೂರು ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ, ಕೊಡಹಳ್ಳಿ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಮತ್ತು ಬೆಟ್ಟಹಳ್ಳಿ ಗ್ರಾಮದಲ್ಲಿ 30 ಲಕ್ಷ ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಕಾಡಾ ಮಾಜಿ ಅಧ್ಯಕ್ಷ ನಂಜಪ್ಪ, ಎಪಿಎಂಸಿ ಅಧ್ಯಕ್ಷ ವಿರೂಪಾಕ್ಷ, ಮಾಜಿ ಪುರಸಭಾ ಅಧ್ಯಕ್ಷ ಕಿರಣ್, ಕೆಆರ್ ಐಡಿಎಲ್ ಎಇಇ ಅರ್ಚನಾ ಬಾಮಿಕಟ್ಟೆ, ಇಂಜಿನಿಯರ್ ಪ್ರಶಾಂತ್, ತಾಲ್ಲೂಕು ಭೂ ನ್ಯಾಯಮಂಡಳಿ ಸದಸ್ಯ ಲೋಕೇಶ್ ಗೋಪಾಲಪುರ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ಚಿತ್ತಾರದಲ್ಲಿ ಅರಳಿದ ಸರ್ಕಾರಿ ಶಾಲೆ ಕನಸು

• **ಉದಯವಾಹಿನಿ, ಶಿಡ್ಲಘಟ್ಟ**

ಸರ್ಕಾರಿ ಶಾಲೆಗಳಲ್ಲೂ ಉತ್ತಮ ಕಲಿಕಾ ವಾತಾವರಣ ನಿರ್ಮಾಣವಾಗಬೇಕು. ಮಕ್ಕಳು ಆಸಕ್ತಿಯಿಂದ ಶಾಲೆಗೆ ಬರುವಂತಾಗಬೇಕು ಎಂಬ ಆಶಯದೊಂದಿಗೆ ಬೆಂಗಳೂರಿನ ಮೂನ್ ಫ್ರಾಗ್ ಲ್ಯಾಬ್ ಕಂಪನಿ ಉದ್ಯೋಗಿಗಳ ತಂಡ ನಗರದ ಕೋಟೆ ಬಾಲಕಿಯರ ಸರ್ಕಾರಿ ಶಾಲೆಯಲ್ಲಿ ವಿವಿಧ ಚಟುವಟಿಕೆ ನಡೆಸಿತು. ಈಗಾಗಲೇ ಶಾಲೆಗೆ ಸುಣ್ಣಬಣ್ಣ ಬಳಿಯುವುದು ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳಿಗೆ ನೆರವು ನೀಡಿರುವ ತಂಡ, ಈ ಬಾರಿ ಶಾಲೆಯ ಕಾಂಪೌಂಡ್ ಗೋಡೆ ಮೇಲೆ ಹಲವು ರೀತಿಯ ಚಿತ್ತಾರ ಬಿಡಿಸಿತು. ಮಕ್ಕಳೊಂದಿಗೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಅವರ ಸೃಜನಶೀಲತೆಗೆ ಪ್ರೋತ್ಸಾಹ ನೀಡಿತು.

ಗುಣಮಟ್ಟದ ಶಿಕ್ಷಣಕ್ಕೆ ಮೂಲಸೌಕರ್ಯ ಅಗತ್ಯ: ಕ್ಷೇತ್ರ ಶಿಕ್ಷಣಾಧಿಕಾರಿ ಸ್ವಾಮಿ, ಮೂನ್‌ಫ್ರಾಗ್ ತಂಡವು ಗ್ರಾಮಾಂತರ ಟ್ರಸ್ಟ್ ಸಹಕಾರದೊಂದಿಗೆ ಶಾಲೆ ಅಭಿವೃದ್ಧಿಗೆ ಕೈಜೋಡಿಸಿದೆ. ಸರ್ಕಾರಿ ಶಾಲೆಗಳ ಬಗ್ಗೆ ಇವರು ಹೊಂದಿರುವ ಕಾಳಜಿ ಸಂತಸ ತಂದಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಉತ್ತಮ ಮೂಲಸೌಕರ್ಯವೂ ಅಗತ್ಯ. ಬಣ್ಣ ಬಳಿಯುವುದರ ಜತೆಗೆ ಜಲಸಂಪನ್ಮೂಲ ಮಹತ್ವ ಹಾಗೂ ಕಲಿಕೆ ಉತ್ತಮಪಡಿಸುವ ಕುರಿತು ಜಾಗೃತಿ ಮೂಡಿಸುವ ಪ್ರಯತ್ನವೂ ನಡೆಯುತ್ತಿದೆ' ಎಂದರು. 'ಶಾಲೆಯ ಆಸ್ತಿಯನ್ನು ಸಂರಕ್ಷಿಸುವ ಜವಾಬ್ದಾರಿ ಸಾರ್ವಜನಿಕರಿಗೂ ಇದೆ ಎಂದು ತಿಳಿಸಿದ ಅವರು, 'ಕಾಂಪೌಂಡ್ ಹಾರಿ ಶಾಲೆಯೊಳಗೆ ಬರುವುದು, ಶೌಚಾಲಯ ಹಾಳುಗೆಡವುವುದು ಸೇರಿದಂತೆ ಕೆಲವು ಸಮಸ್ಯೆಗಳಿವೆ. ಸರ್ಕಾರಿ ಶಾಲೆ ನಮ್ಮದು ಎಂಬ ಅಭಿಮಾನದಿಂದ ಸಾರ್ವಜನಿಕರು ಶಾಲೆ ಕಟ್ಟಡ ಹಾಗೂ ಇತರ ಸೌಲಭ್ಯ ಕಾಪಾಡಬೇಕು' ಎಂದು ಮನವಿ ಮಾಡಿದರು

ಉದಯವಾಹಿನಿ ಚಿತ್ರ

ಮಿನಿ ನ್ಯೂಸ್

ಭೂಮಿ ಕೊಟ್ಟವರಿಗೆ, ಸ್ಥಳೀಯರಿಗೆ ಶೇ 60ರಷ್ಟು ಉದ್ಯೋಗ

ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೋಲಾರ**

ಭೂಮಿ ಕೊಟ್ಟವರಿಗೆ ಹಾಗೂ ಸ್ಥಳೀಯರಿಗೆ ಅವರ ವಿದ್ಯಾರ್ಹತೆ, ಕೌಶಲಕ್ಕೆ ತಕ್ಕಂತೆ ಕಂಪನಿಗಳು ಹಾಗೂ ಕಾರ್ಖಾನೆಗಳು ಶೇ 60ರಷ್ಟು ಉದ್ಯೋಗ ನೀಡಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಸೂಚನೆ ನೀಡಿದರು. ತಾಲ್ಲೂಕಿನ ವೇಮಗಲ್ ಕೈಗಾರಿಕಾ ಪ್ರದೇಶದ ಎರಡನೇ ಹಂತದಲ್ಲಿ ಪೊದ್ದಾರ್ ಸಮೂಹ ಸ್ಥಾಪಿಸಿರುವ ಪೊದ್ದಾರ್ ಪ್ಲಂಬಿಂಗ್ ಪೈಪ್ಸ್ ತಯಾರಿಕಾ ಘಟಕಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು

ಪೊದ್ದಾರ್ ಸಂಸ್ಥೆಯವರು ತಮ್ಮ ಜಾಗದ ಆವರಣದಲ್ಲಿಯೇ ಕೌಶಲ ತರಬೇತಿ ಕೇಂದ್ರ ಕೂಡ ಸ್ಥಾಪಿಸುತ್ತಿದ್ದಾರೆ. ಜಮೀನು ಕೊಟ್ಟವರಿಗೆ ಕೌಶಲ ಇಲ್ಲದಿದ್ದರೆ ಅವರಿಗೆ ಈ ಕೇಂದ್ರದಲ್ಲಿ ತರಬೇತಿ ನೀಡಬೇಕು. ಉದ್ಯೋಗಿಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದರು. ಉದ್ಯೋಗಿಗಳಿಗೆ ಕಂಪನಿಯು 150 ಮನೆಗಳನ್ನು ನಿರ್ಮಿಸಲಿದೆ. ಜೊತೆಗೆ ಡಾರ್ಮಟರಿ ನಿರ್ಮಿಸಬೇಕು ಎಂದರು. ಐಟಿಐ ಕಲಿಕೆಯ ಪಠ್ಯ ವಸ್ತು ಬದಲಾಗಬೇಕು. ಕೃತಕ ಬುದ್ಧಿಮತ್ತೆ (ಎಐ) ಕಾಲವಿದು, ಆಧುನಿಕ ವ್ಯವಸ್ಥೆಗೆ ತಕ್ಕಂತೆ ಶಿಕ್ಷಣ ವ್ಯವಸ್ಥೆ ಇರಬೇಕು ಎಂದು ಸಲಹೆ ನೀಡಿದರು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಸಂಬಂಧ ಕೆಲವು ಮಾರ್ಗಸೂಚಿ ಹಾಗೂ ಅರ್ಹತೆಗಳಿವೆ. ಅದರ ಪ್ರಕಾರ ಸಿಎಸ್‌ಆರ್ ನಿಧಿ ಪಡೆಯಲಾಗುವುದು. ಎಲ್ಲಾ ಕಂಪನಿಗಳಿಂದ ಕೇಳಲು ಸಾಧ್ಯವಿಲ್ಲ ಎಂದು ಹೇಳಿದರು. ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಮಾತನಾಡಿ, 'ಭೂಮಿ ಕೊಟ್ಟ ರೈತರಿಗೆ ಮೊದಲು ಧನ್ಯವಾದ ಹೇಳಬೇಕು. ಜಿಲ್ಲೆಯವರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಬೇಕು. ಸಿಎಸ್‌ಆರ್ ನಿಧಿ ಸಾಕಾಗುತ್ತಿಲ್ಲ, ಸಮರ್ಪಕವಾಗಿ ಬಳಕೆ ಆಗಬೇಕು.

ವೈಟ್ ಟ್ಯಾಪಿಂಗ್ ಕಾಮಗಾರಿ ಅಪೂರ್ಣ ವಾಹನ ಸವಾರರು ಸಂಕಷ್ಟ!

ಉದಯವಾಹಿನಿ ಚಿತ್ರ

• **ಉದಯವಾಹಿನಿ,** ಗುಬ್ಬಿ

ರಾಷ್ಟ್ರೀಯ ಹೆದ್ದಾರಿ 73ರ ವರ್ತುಲ ರಸ್ತೆ ಪ್ರಾರಂಭದ ಎಂ.ಎಚ್. ಪಟ್ಟಣ ಗೇಟ್‌ನಿಂದ ಹೇರೂರಿನ ಸಿಐಟಿ ಕಾಲೇಜಿನವರೆಗೆ ನಡೆಯುತ್ತಿದ್ದ ವೈಟ್ ಟ್ಯಾಪಿಂಗ್ ಕಾಮಗಾರಿ ಅಪೂರ್ಣವಾಗಿದ್ದು, ಸಾರ್ವಜನಿಕರು, ವಾಹನ ಸವಾರರು ಸಂಕಷ್ಟ ಎದುರಿಸುವಂತಾಗಿದೆ. ವೈಟ್ ಟ್ಯಾಪಿಂಗ್ ಕಾಮಗಾರಿ ಪಟ್ಟಣ ವ್ಯಾಪ್ತಿಯಲ್ಲಿ ಚನ್ನಬಸವೇಶ್ವರ ದೇವಾಲಯ ಮಹಾದ್ವಾರದ ಬಳಿ ರಾಜ್ಯ ಹೆದ್ದಾರಿಯನ್ನು ಸಂಪರ್ಕಿಸುವ ಜಾಗದಿಂದ ಬಿದ್ದಾಂಜನೇಯ ದೇವಾಲಯದವರೆಗೆ ಒಂದು ಭಾಗದ ರಸ್ತೆ ಕಾಮಗಾರಿ ಪೂರ್ಣಗೊಳಿಸದೆ ಗುತ್ತಿಗೆದಾರರು ಸ್ಥಳವನ್ನು ಖಾಲಿ ಮಾಡಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

ಒಂದು ಭಾಗದ ರಸ್ತೆ ಕಾಮಗಾರಿ ಮುಗಿಯದಿರುವುದರಿಂದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ವಾಹನಗಳು ಚಲಿಸಲು ಸಾಧ್ಯವಾಗದಂತಾಗಿದೆ. ದ್ವಿಚಕ್ರ ವಾಹನ ಸವಾರರ ಪಾಡಂತೂ ಹೇಳತೀರದಾಗಿದೆ. ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಂಡ ನಿದರ್ಶನಗಳಿವೆ. ಪಟ್ಟಣದ ಭಾಗದಲ್ಲಿ ರಸ್ತೆಯ ಎರಡು ಬದಿಗಳಲ್ಲಿ ಚರಂಡಿ ನಿರ್ಮಿಸದಿರುವ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪ ಬಂದಿದ್ದರಿಂದ ಚರಂಡಿ ನಿರ್ಮಿಸಲು ಹೆದ್ದಾರಿ ಪ್ರಾಧಿಕಾರಕ್ಕೆ ಅನುಮತಿ ಕೋರಲಾಗಿದೆ ಎಂದು ಅಧಿಕಾರಿಗಳು ಹೇಳುತ್ತಲೇ ಇದ್ದಾರೆ. ಕಾಮಗಾರಿ ಮುಗಿದಿರುವ ಕಡೆಯಾದರೂ ಚರಂಡಿ ನಿರ್ಮಿಸುವ ಬಗ್ಗೆ ಯಾವುದೇ ಸೂಚನೆ ಬರದಿರುವ ಬಗ್ಗೆ ಪಟ್ಟಣದ ನಿವಾಸಿಗಳು ಬೇಸರ ವ್ಯಕ್ತಪಡಿಸಿದ್ದಾರೆ.ಪಟ್ಟಣದಲ್ಲಿ ರಸ್ತೆಯ ಎರಡು ಬದಿಗಳಲ್ಲಿ ಚರಂಡಿ ನಿರ್ಮಿಸದಿರುವುದರಿಂದ ಮಳೆ ಬಂದಾಗ ಹೆದ್ದಾರಿ ಸುತ್ತಮುತ್ತ ಮನೆ ಹಾಗೂ ಅಂಗಡಿಗಳಿಗೆ ನೀರು ನುಗ್ಗಿ ತೊಂದರೆ ಅನುಭವಿಸುವಂತಾಗಿದೆ.

ನುಗ್ಗೆಕಾಯಿ ದುಬಾರಿಯಾಗಿದ್ದು: ಕೋಳಿ ಮಾಂಸ ಏರಿಕೆ

• **ಉದಯವಾಹಿನಿ,** ತುಮಕೂರು

ನುಗ್ಗೆಕಾಯಿ ದುಬಾರಿಯಾಗಿದ್ದು, ಗಗನಮುಖಿಯಾಗಿದ್ದ ಸೊಪ್ಪು ಕುಸಿತ ಕಂಡಿದೆ. ಕಳೆದ ಎರಡು ವಾರಗಳಿಂದ ಏರಿಕೆಯತ್ತ ಸಾಗಿದ್ದ ಬಟಾಣಿ ದರ ಇಳಿಕೆಯಾಗಿಲ್ಲ, ಕೋಳಿ ಮಾಂಸ ಮತ್ತೆ ತುಟ್ಟಿಯಾಗಿದೆ. ವಾರದ ಅಂತರದಲ್ಲಿ 40ರಿಂದ 60 ಜಾಸ್ತಿಯಾಗಿದೆ. ಬೀನ್ಸ್, ಈರುಳ್ಳಿ, ಬೆಳ್ಳುಳ್ಳಿ, ಟೊಮೆಟೊ ಸೇರಿ ಬಹುತೇಕ ತರಕಾರಿ ಬೆಲೆ ಯಥಾಸ್ಥಿತಿ ಕಾಯ್ದುಕೊಂಡಿವೆ. ತೇಜಿಯಾಗಿದ್ದ ನಿಂಬೆ ಹಣ್ಣು ಅಗ್ಗವಾಗಿದೆ. ಕಳೆದ ವಾರಕ್ಕೆ ಹೋಲಿಸಿದರೆ 2ರಿಂದ 3 ಕಡಿಮೆಯಾಗಿದೆ.

ಸೊಪ್ಪು ಅಗ್ಗ: ಅಕ್ಟೋಬರ್ ಆರಂಭದಲ್ಲಿ ಶತಕದ ಗಡಿ ದಾಟಿದ್ದ ಸೊಪ್ಪಿನ ಧಾರಣೆ ಮತ್ತೆ ಹಳೆಯ ಸ್ಥಿತಿಗೆ ಬಂದಿದೆ. ಹಿಂದಿನ ವಾರದಿಂದ ಇಳಿಕೆಯತ್ತ ಮುಖ ಮಾಡಿದೆ. ಕಳೆದ ವಾರ ಕೊತ್ತಂಬರಿ ಸೊಪ್ಪು ಕೆ.ಜಿ 80–100 ಇತ್ತು, ಈಗ 50–60ಕ್ಕೆ ತಲುಪಿದೆ. ಮೆಂತ್ಯ ಕೆ.ಜಿ 40–50, ಸಬ್ಬಕ್ಕಿ ಕೆ.ಜಿ 60–70, ಪಾಲಕ್ ಸೊಪ್ಪು (ಕಟ್ಟು) 50ಕ್ಕೆ ಮಾರಾಟ ಮಾಡಲಾಗುತ್ತಿದೆ.

ಸೀಬೆ ಹಣ್ಣು ಮತ್ತಷ್ಟು ಕಡಿಮೆಯಾಗಿರುವುದು ಬಿಟ್ಟರೆ ಹಣ್ಣಿನ ಬೆಲೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಏಲಕ್ಕಿ ಬಾಳೆ, ಮೂಸಂಬಿ, ಸಪೋಟ, ದ್ರಾಕ್ಷಿ ಮೂರು–ನಾಲ್ಕು ವಾರಗಳಿಂದ ಒಂದೇ ದರಕ್ಕೆ ಮಾರಾಟವಾಗುತ್ತಿವೆ. ಏಲಕ್ಕಿ ಬಾಳೆ ಕೆ.ಜಿ 110 2.ಗೋಧಿ, **ಬೇಳೆ ತುಟ್ಟಿ:** ಬೇಳೆ, ಕಾಳು ಬೆಲೆ ಜಾಸ್ತಿಯಾಗಿದೆ.

ಹನುಮಂತನಗರದಲ್ಲಿ ಮೂಲಸೌಕರ್ಯ ಮರೀಚಿಕೆ

• **ಉದಯವಾಹಿನಿ, ಮಾಲೂರು**

ಪಟ್ಟಣದ ಹನುಮಂತ ನಗರದಲ್ಲಿನ ಹಲವು ನಿವಾಸಿಗಳು ಇನ್ನೂ ಹೆಂಚಿನ ಮನೆಯಲ್ಲೇ ಜೀವನ ದೂಡುತ್ತಿದ್ದಾರೆ. ಈ ಭಾಗದ ಜನರು ಸುಮಾರು 2–3 ದಶಕಗಳಿಂದ ಸರ್ಕಾರದಿಂದ ಸೂರಿನ ಭಾಗ್ಯ ಸಿಗಲಿದೆ ಎಂಬ ನಿರೀಕ್ಷೆಯಲ್ಲಿದ್ದಾರೆ. ಆದರೆ, ಅವರಿಗೆ ಈವರೆಗೂ ಸೂರಿನ ಭಾಗ್ಯ ಮಾತ್ರ ಸಿಕ್ಕಿಲ್ಲ. ನಗರದ 12ನೇ ವಾರ್ಡ್ ಹನುಮಂತ ನಗರದ ಕೊಳೆಗೇರಿಯ ನಿವಾಸಿಗಳು ಸೂರು ಸೇರಿದಂತೆ ಹಲವು ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದಾರೆ.ಮಾಲೂರು ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಪಥದತ್ತ ದಾಪುಗಾಲಿಡುತ್ತಿದೆ. ಜಿಲ್ಲೆಯಲ್ಲೇ ಹೆಚ್ಚಿನ ಕೈಗಾರಿಕೆಗಳನ್ನು ಹೊಂದಿದ ಹೆಗ್ಗಳಿಕೆಗೆ ತಾಲ್ಲೂಕು ಪಾತ್ರವಾಗಿದೆ.

ದೊಡ್ಡ ಬಜೆಟ್ಟಿನ ಕೈಗಾರಿಕೆಗಳು ಇಲ್ಲಿ ನೆಲೆಯೂರಲು ಸಿದ್ಧವಾಗಿವೆ. ಹಾಗಾಗಿ ಈ ಭಾಗದ ಭೂಮಿಗೆ ಬಂಗಾರದ ಬೆಲೆ ಬಂದಿದೆ. ಸುತ್ತಮುತ್ತಲಿನ ಯುವ ಜನರಿಗೆ ಉದ್ಯೋಗದ ಅವಕಾಶ ಇದೆ. ಕೈಗಾರಿಕೆಗಳಿಗೆ ತಕ್ಕಂತೆ ನೂತನ ಬಡಾವಣೆಗಳ ಸಂಖ್ಯೆಯು ಹೆಚ್ಚುತ್ತಿದೆ. ಆದರೆ, ಮಾಲೂರು ಕೋಲಾರ ಮುಖ್ಯ ರಸ್ತೆಗೆ ಅಂಟಿಕೊಂಡಂತಿರುವ ಹನುಮಂತ ನಗರದ ಕೊಳೆಗೇರಿಯಲ್ಲಿನ ನಿವಾಸಿಗಳಿಗೆ ಯಾವುದೇ ಮೂಲಸೌಕರ್ಯಗಳಿಲ್ಲ ಎಂದು ಸ್ಥಳೀಯರು ದೂರಿದರು. ಕೊಳೆಗೇರಿ ನಿವಾಸಿಗಳಿಗೆ ನಗರ ಸಭೆಯಿಂದ ಪೈಪ್‌ಲೈನ್ ಮೂಲಕ 15 ದಿನಗಳಿಗೊಮ್ಮೆ ಕುಡಿಯುವ ನೀರು ಹರಿಸಲಾಗುತ್ತಿದೆ. ಉಳಿದ ಹದಿನೈದು ದಿನ ಕುಡಿಯುವ ನೀರಿನ ಸೌಕರ್ಯ ಇಲ್ಲದೆ ಇಲ್ಲಿನ ನಿವಾಸಿಗಳು ಪರದಾಡುವಂತಾಗಿದೆ. ಅನಿವಾರ್ಯವಾಗಿ ನೀರು ಡ್ರಮ್‌ಗಳಲ್ಲಿ ಸಂಗ್ರಹಿಸಿಕೊಳ್ಳಬೇಕಾದ ಅಗತ್ಯ ಉಂಟಾಗಿದೆ. ಸಂಗ್ರಹಿಸಿಟ್ಟ ನೀರಿನ ಕಾರಣ ಸೊಳ್ಳೆಗಳ ಕಾಟ ಹೆಚ್ಚಾಗುತ್ತಿದೆ. ಹೆಂಚಿನ ಮನೆಗಳ ಮುಂದೆ 2 ಅಡಿಗಳಷ್ಟು ಅಗಲವಾದ ರಸ್ತೆ ಇದೆ. ಬೀದಿದೀಪವಿಲ್ಲದ ಕಾರಣ ಸಂಜೆಯಾಗುತ್ತಲೇ, ಕಗ್ಗತ್ತಲು ಉಂಟಾಗುತ್ತದೆ. ಮಕ್ಕಳನ್ನು ಹೊರಬಿಡಲು ಹಿಂದೇಟು ಹಾಕುವಂತಾಗಿದೆ.

ದೂರು ಬಂದರೆ ಅಧಿಕಾರಿಗಳೇ ಹೊಣೆ - ಶಾಸಕ ರಮೇಶ ಬಂಡಿಸಿದ್ದೇಗೌಡ

ಉದಯವಾಹಿನಿ ಚಿತ್ರ

• **ಉದಯವಾಹಿನಿ, ಶ್ರೀರಂಗಪಟ್ಟಣ**

ಅಧಿಕಾರಿಗಳು ಸಾರ್ವಜನಿಕರ ಕೆಲಸಗಳನ್ನು ಸಕಾಲದಲ್ಲಿ ಮಾಡಿಕೊಡಬೇಕು. ಜನರಿಂದ ದೂರು ಬಂದರೆ ಸಂಬಂಧಿಸಿದ ಅಧಿಕಾರಿಯನ್ನೇ ಹೊಣೆ ಮಾಡಲಾಗುವುದು ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ಎಚ್ಚರಿಸಿದರು. ತಾಲ್ಲೂಕಿನ ಚಿಕ್ಕ ಅಂಕನಹಳ್ಳಿ ಗ್ರಾಮದಲ್ಲಿ ನಡೆದ ಪ್ರಜಾ ಸೇವಾ ಆಂದೋಲನದಲ್ಲಿ ಜನರಿಂದ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು. ಕುಡಿಯುವ ನೀರು, ಆರೋಗ್ಯ ಮತ್ತು ಶಿಕ್ಷಣ, ಸಾರ್ವಜನಿಕ ರಸ್ತೆ, ಸ್ಮಶಾನ ಅಭಿವೃದ್ಧಿಗೆ ಸಂಬಂಧಿಸಿದ ದೂರುಗಳಿಗೆ ತಕ್ಷಣ ಸ್ಪಂದಿಸಬೇಕು. ಪ್ರಜಾ ಸೇವಾ ಆಂದೋಲನದಲ್ಲಿ ಬರುವ ಎಲ್ಲಾ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಅಪಲೋಡ್ ಮಾಡಬೇಕು. ಕ್ರಮಬದ್ಧವಾದ ಅರ್ಜಿಗಳಿಗೆ ನಿಗದಿತ ಸಮಯದಲ್ಲಿ ಉತ್ತರ ನೀಡಬೇಕು ಎಂದು ಅವರು ಸೂಚಿಸಿದರು.

ಜನರು ಕಚೇರಿಗೆ ಅಲೆಯುವುದನ್ನು ತಪ್ಪಿಸಲು ರಾಜ್ಯ ಸರ್ಕಾರ ಪ್ರಜಾ ಸೇವಾ ಇಲಾಖೆ ಸ್ಥಾಪಿಸಿ ಹೆಚ್ಚುವರಿ ಕಾರ್ಯದರ್ಶಿಯನ್ನು ನೇಮಿಸಿದೆ. ಕೃಷಿ, ಕಂದಾಯ, ಸರ್ವೆ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸೇರಿದಂತೆ ಯಾವುದೇ ಇಲಾಖೆ ಸಂಬಂಧ ಬರುವ ದೂರುಗಳನ್ನು ಅಧಿಕಾರಿಗಳು ನಿಯಮಾನುಸಾರ ಸ್ಥಳದಲ್ಲೇ ಪರಿಹರಿಸಲಿದ್ದು, ಜನರ ಸಮಸ್ಯೆಗಳಿಗೆ ತಕ್ಷಣ ಪರಿಹಾರ ಸಿಗಲಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅ.31ರಂದು ಮಂಡ್ಯ ನಗರಕ್ಕೆ ಬರುತ್ತಿದ್ದಾರೆ. ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸುವ ಜತೆಗೆ ನೂರಾರು ಮಂದಿ ಫಲಾನುಭವಿಗಳಿಗೆ ಸರ್ಕಾರದ ಸವಲತ್ತುಗಳನ್ನು ವಿತರಿಸಲಿದ್ದಾರೆ. ಆ ಕಾರ್ಯಕ್ರಮಕ್ಕೆ ಹೆಚ್ಚು ಜನರು ಆಗಮಿಸಬೇಕು ಎಂದು ಮನವಿ ಮಾಡಿದರು.

ಕಳ್ಳೀಪುರದಲ್ಲಿ ಸಂಜೆಯಾದರೂ ಪತ್ತೆಯಾಗದ ವ್ಯಾಘ್ರ ಕುಟುಂಬ

ತಾಯಿ ಹುಲಿ ಮರಿಗಳೊಂದಿಗೆ ಕಾಡಿಗೆ ಮರಳಿರುವ ಶಂಕೆ : ರೈತರಲ್ಲಿ ಮನೆಮಾಡಿರುವ ಆತಂಕ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗೋಪಾಲಸ್ವಾಮಿ ಬೆಟ್ಟ ವಲಯದ ಕಳ್ಳೀಪುರ ಗ್ರಾಮದಲ್ಲಿ ಶನಿವಾರ ಕಾಣಿಸಿಕೊಂಡು ಆತಂಕ ಸೃಷ್ಟಿಸಿದ್ದ ತಾಯಿ ಹುಲಿ ಹಾಗೂ ಮೂರು ಮರಿಗಳ ಸುಳಿವು ಭಾನುವಾರ ಸಂಜೆಯಾದರೂ ಪತ್ತೆಯಾಗಿಲ್ಲ. ಹುಲಿ ಕುಟುಂಬ ಕಾಡಿಗೆ ಮರಳಿರಬಹುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

1 ರೈತರು ಹಾಗೂ ಸಾರ್ವಜನಿಕರಲ್ಲಿ ಆತಂಕ
2 ಅರಣ್ಯ ಇಲಾಖೆ ಅಧಿಕಾರಿಗಳು ಶಂಕೆ
3 ಮೂರು ಮರಿಗಳ ಸುಳಿವು

ಕಳ್ಳಿಪುರ ಗ್ರಾಮದ ಸುರೇಶ್ ಎಂಬ ರೈತರ ಜಮೀನಿನಲ್ಲಿ ತಾಯಿ ಹುಲಿ ತನ್ನ ಮೂರು ಮರಿಗಳೊಂದಿಗೆ ಕಾಣಿಸಿಕೊಂಡಿತ್ತು.

ಇದರಿಂದ ಸುತ್ತಮುತ್ತಲಿನ ಗ್ರಾಮಗಳ ರೈತರು ಹಾಗೂ ಸಾರ್ವಜನಿಕರಲ್ಲಿ ಆತಂಕ ಮೂಡಿತ್ತು. ಹುಲಿ ಕುಟುಂಬದ ಚಲನವಲನದ ಮೇಲೆ ನಿಗಾ ಇರಿಸಲು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದ್ದರು.

ಸೋಮವಾರವೂ ಕೂಂಬಿಂಗ್ ಕಾರ್ಯಾಚರಣೆ


ಉದಯವಾಹಿನಿ ಚಿತ್ರ

ಸಾಕಾನೆಗಳ ನೆರವಿನಿಂದ ಕಾರ್ಯಾಚರಣೆ

ರಾಂಪುರ ಆನೆ ಶಿಬಿರದ ಸಾಕಾನೆಗಳಾದ ಪಾರ್ಥ, ಧರ್ಮ ಹಾಗೂ ಕೆಬ್ಬೆ ಆನೆಗಳ ನೆರವಿನಿಂದ ಭಾನುವಾರ ಹುಲಿ ಕುಟುಂಬದ ಪತ್ತೆಗಾಗಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಯಿತು. ಅರಣ್ಯ ಸಿಬ್ಬಂದಿ ವಿವಿಧ ಪ್ರದೇಶಗಳಲ್ಲಿ ಹುಡುಕಾಟ ನಡೆಸಿದರೂ ಸಂಜೆಯವರೆಗೂ ತಾಯಿ ಹುಲಿ ಹಾಗೂ ಮರಿಗಳು ಕಾಣಿಸಿಕೊಳ್ಳಲಿಲ್ಲ. ಈ ನಡುವೆ, ಹುಲಿಗಳು ಈಗಾಗಲೇ ಕಾಡುಹಂದಿಯನ್ನು ಬೇಟೆಯಾಡಿ ಭಕ್ಷಿಸಿರುವುದರಿಂದ ಮತ್ತೆ ಅದೇ ಸ್ಥಳಕ್ಕೆ ವಾಪಸಾಗುವ ಸಾಧ್ಯತೆಯೂ ಇದೆ ಎಂಬ ಅನುಮಾನ ಸ್ಥಳೀಯರಲ್ಲಿ ವ್ಯಕ್ತವಾಗಿದೆ.

ಕ್ಯಾಮೆರಾ ಅಳವಡಿಸಲು ರೈತರ ಒತ್ತಾಯ

ಹುಲಿ ಕುಟುಂಬದ ಚಲನವಲನದ ಬಗ್ಗೆ ನಿಖರ ಮಾಹಿತಿ ಪಡೆಯಲು ಆಯಕಟ್ಟಿನ ಸ್ಥಳಗಳಲ್ಲಿ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂದು ಸ್ಥಳೀಯ ರೈತರು ಅರಣ್ಯ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ. ಇದರಿಂದ ಹುಲಿಗಳ ಓಡಾಟದ ಬಗ್ಗೆ ಮಾಹಿತಿ ಲಭ್ಯವಾಗಲಿದ್ದು, ರೈತರಲ್ಲಿ ಮನೆಮಾಡಿರುವ ಆತಂಕವನ್ನು ಕಡಿಮೆ ಮಾಡಲು ಸಹಕಾರಿಯಾಗಲಿದೆ ಎಂಬುದು ರೈತರ ಅಭಿಪ್ರಾಯವಾಗಿದೆ.



ತಾಯಿ ಹುಲಿ ಹಾಗೂ ಮರಿಗಳ ಪತ್ತೆಗಾಗಿ ಸೋಮವಾರವೂ ಕೂಂಬಿಂಗ್ ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಹುಲಿ ಕುಟುಂಬ ಕಾಡಿಗೆ ಹಿಂದಿರುಗಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಂತರಾಳದಿಂದ... EDITORIAL

ಕಬ್ಬು ಬೆಳೆಗಾರರ ಬೇಡಿಕೆ ಈಡೇರಲಿ

ನಮ್ಮಲ್ಲಿ ರಾಜಕಾರಣಿಗಳು ಗಣನೀಯ ಪ್ರಮಾಣದಲ್ಲಿ ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದವರೇ ಆಗಿದ್ದಾರೆ. ದರ ನಿಗದಿಪಡಿಸುವ ವಿಚಾರ ಬಂದಾಗ ಮಾತ್ರ ಅವರ ಒಲವು ಉದ್ಯಮಿಗಳ ಪರ ವಾಲುತ್ತದೆ. ನಮ್ಮದು ಕೃಷಿ ಆಧಾರಿತ ಆರ್ಥಿಕತೆಯಾದರೂ ಆಡಳಿತ ನಡೆಸುವವರು ಕೈಗಾರಿಕೆ ಮತ್ತು ಸೇವಾ ಕ್ಷೇತ್ರಕ್ಕೆ ನೀಡುವಷ್ಟು ಮಹತ್ವವನ್ನು ಕೃಷಿಗೆ ನೀಡುತ್ತಿಲ್ಲ ಎಂಬುದು ಎಲ್ಲರೂ ಬಲ್ಲ ಸಂಗತಿ. ಹೀಗಾಗಿಯೇ ನ್ಯಾಯಯುತ ಬೇಡಿಕೆಗೂ ಅವರು ಬೀದಿಗೆ ಇಳಿಯಬೇಕಾದ ಸ್ಥಿತಿ ಒದಗಿದೆ. ಈ ನಡುವೆ, ಕಬ್ಬು ಬೆಳೆಗಾರರ ಸಮಸ್ಯೆ ಅಧ್ಯಯನಕ್ಕೆ ಸಮಿತಿ ರಚಿಸಿರುವುದು ಕಾಲಹರಣ ಮಾಡುವ ತಂತ್ರ ಎಂದು ರಾಜ್ಯದ ಸಹಕಾರ ಸಚಿವ ಲಕ್ಷ್ಮಣ ಸವದಿ ಟೀಕಿಸಿದ್ದಾರೆ.

ಚುನಾವಣೆ ಸಂದರ್ಭದಲ್ಲಿ ಮತ ಕೇಳುವಾಗ ಎಲ್ಲರೂ ಮಣ್ಣಿನ ಮಕ್ಕಳೇ ಆಗಿರುತ್ತಾರೆ. ಅಧಿಕಾರಕ್ಕೇರಿದ ಬಳಿಕ ರೈತರ ಕಷ್ಟಗಳು ಕಣ್ಣಿಗೇ ಬೀಳುವುದಿಲ್ಲ. ಇದಕ್ಕೆ ಆ ಪಕ್ಷ ಈ ಪಕ್ಷ ಎಂಬ ಭೇದ ಇಲ್ಲ. ವೇದಿಕೆಗಳಲ್ಲಿ ಮೊಳಗುವ ರೈತ ಪರವಾದ ಮಾತುಗಳು ಕೃತಿಗೆ ಇಳಿಯುವುದೇ ಇಲ್ಲ. ಬೀದಿಗೆ ಇಳಿದು ಅಬ್ಬರಿಸಿದರೆ ಮಾತ್ರ ನೊಂದವರ ಗೋಳು ಕೇಳಿಸಿಕೊಳ್ಳುವ ಮಟ್ಟಿಗೆ ನಮ್ಮ ಆಡಳಿತ ಯಂತ್ರ ಜಡ್ಡುಗಟ್ಟಿದೆ. ಕಬ್ಬು ಬೆಳೆಗಾರರ ವ್ಯಥೆ ಕೂಡ ಇದಕ್ಕೆ ಹೊರತಲ್ಲ. ಪ್ರತೀ ಟನ್ ಕಬ್ಬಿಗೆ ಕನಿಷ್ಠ 5,500 ರೂ. ಬೆಂಬಲ ಬೆಲೆ ನಿಗದಿಗೊಳಿಸಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟು ರಾಜ್ಯದ ಕಬ್ಬು ಬೆಳೆಗಾರರು ಹೋರಾಟ ತೀವ್ರಗೊಳಿಸಿದ್ದರಿಂದ ಆಡಳಿತ ನಡೆಸುವವರ ಗಮನ ಕೊನೆಗೂ ಬೆಳೆಗಾರರ ಸಮಸ್ಯೆಗಳತ್ತ ಹರಿದಿದೆ. ಕಬ್ಬು ಅರೆಯುವ ಋತು ಆರಂಭವಾಗಲಿರುವ ಈ ಹೊತ್ತಿನಲ್ಲಿ ಬೆಳೆಗಾರರ ಸಮಸ್ಯೆಗಳ ಬಗ್ಗೆ ಅಧ್ಯಯನದ ಕಸರತ್ತು ಶುರುವಾಗಿದೆ. ಪ್ರತೀ ಟನ್ ಕಬ್ಬಿಗೆ ಕನಿಷ್ಠ 5,500 ರೂ. ಬೆಂಬಲ ಬೆಲೆ ನಿಗದಿಗೊಳಿಸಬೇಕು. ಸಕ್ಕರೆಗೆ ಕನಿಷ್ಠ ಬೆಂಬಲ ಬೆಲೆಯನ್ನು 60 ರೂ.ಗೆ ನಿಗದಿ ಮಾಡಬೇಕು. ಸ್ವಾಮಿನಾಥನ್ ನೇತೃತ್ವದ ಆಯೋಗದ ವರದಿಯನ್ನು ಜಾರಿಗೊಳಿಸಬೇಕು ಎಂಬುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಕಬ್ಬು ಬೆಳೆಗಾರರು ಉತ್ತರ ಕರ್ನಾಟಕದ ವಿವಿಧೆಡೆ ಹೆದ್ದಾರಿಗಳಲ್ಲಿ ಧರಣಿ ನಡೆಸಿ ಸರಕಾರದ ಗಮನ ಸೆಳೆದಿದ್ದಾರೆ. ರೈತರ ಹೋರಾಟ ತೀವ್ರ ಸ್ವರೂಪ ಪಡೆದ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡ ಕೇಂದ್ರ ಸರಕಾರವು ಕಬ್ಬು ಬೆಳೆಗಾರರ ಬೇಡಿಕೆಗಳ ಬಗ್ಗೆ ಪರಿಶೀಲನೆ ನಡೆಸಲು ಪರಿಹಾರೋಪಾಯಗಳನ್ನು ಸೂಚಿಸಲು ನೀತಿ ಆಯೋಗದ ಮಾಜಿ ಸದಸ್ಯ ಪ್ರೊ. ರಮೇಶ್ ಚಂದ್ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಕೃಷಿ ವೆಚ್ಚಗಳು ಮತ್ತು ಇತರ ಸಂಬಂಧಿತ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಕಬ್ಬು ಬೆಳೆಗಾರರಿಗೆ ಹೇಗೆ ಲಾಭದಾಯಕ ಬೆಲೆ ದೊರೆಯುವಂತೆ ಮಾಡಬಹುದು ಎಂಬುದರ ಬಗ್ಗೆ ಸಮಿತಿ ಪರಿಶೀಲನೆ ನಡೆಸಲಿದೆ. ಅಲ್ಲದೆ, ಸಕ್ಕರೆ ಉತ್ಪಾದನಾ ವೆಚ್ಚ ಮಾರುಕಟ್ಟೆಯಲ್ಲಿ ಇರುವಂತಹ ಬೆಲೆ ಮತ್ತು ಸಕ್ಕರೆ ಕಾರ್ಖಾನೆಗಳ ಆರ್ಥಿಕ ಸುಸ್ಥಿರತೆಯನ್ನು ಗಮನದಲ್ಲಿ ಇರಿಸಿಕೊಂಡು ಸಕ್ಕರೆಯ ಕನಿಷ್ಠ ಮಾರಾಟ ಬೆಲೆ (ಎಂಎಸ್‌ಪಿ) ಪರಿಷ್ಕರಿಸಬೇಕು ಎಂಬ ಬೇಡಿಕೆಯನ್ನೂ ಸಮಿತಿ ಪರಿಶೀಲಿಸಲಿದೆ ಎಂದು ವರದಿಯಾಗಿದೆ. ಈ ಸಮಿತಿಯು ರೈತರ ಪ್ರತಿನಿಧಿಗಳು, ಸಕ್ಕರೆ ಕಾರ್ಖಾನೆಗಳ ಸಂಘಗಳು, ರಾಜ್ಯ ಸರಕಾರಗಳು ಹಾಗೂ ತಜ್ಞರು ಒಳಗೊಂಡಂತೆ ಸಂಬಂಧಿತ ಪಾಲುದಾರರೊಂದಿಗೆ ಕೂಲಂಕಷವಾಗಿ ಸಮಾಲೋಚನೆ ನಡೆಸಿ, ಅದರ ಆಧಾರದ ಮೇಲೆ ವರದಿ ಸಲ್ಲಿಸಲಿದೆ. ಅಧ್ಯಯನಕ್ಕೆ ಸಮಿತಿ ರಚಿಸಿರುವುದು ಸ್ವಾಗತಾರ್ಹ.

ಕೃಷಿ ವೆಚ್ಚ ದಿನೇ ದಿನೇ ಹೆಚ್ಚತೊಡಗಿದೆ. ರಸಗೊಬ್ಬರ ಬೆಲೆ, ಕಾರ್ಮಿಕರ ಕೂಲಿ, ಕ್ರಿಮಿನಾಶಕಗಳ ದರ ಏರುತ್ತಲೇ ಇದೆ. ಇದನ್ನೆಲ್ಲ ಪರಿಗಣಿಸಿ, ಕನಿಷ್ಠ ಬೆಂಬಲ ಬೆಲೆಯನ್ನು ಕಾಲಕಾಲಕ್ಕೆ ಪರಿಷ್ಕರಿಸಬೇಕು. ಕೃಷಿಯನ್ನು ಲಾಭದಾಯಕವಾಗಿಸಲು ಇಂತಹ ಕ್ರಮಗಳು ಅಗತ್ಯ. ಆದರೆ ಸರಕಾರಗಳು ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲು ಮೀನಮೇಷ ಎಣಿಸುತ್ತಿವೆ. ರೈತರು ಬೀದಿಗಿಳಿದು ಧರಣಿ, ಪ್ರತಿಭಟನೆ ನಡೆಸಿದಾಗ ಕಣ್ಣೊರೆಸುವ ತಂತ್ರ ಎಂಬಂತೆ ಪರಿಹಾರೋಪಾಯಗಳತ್ತ ದೃಷ್ಟಿ ಹಾಯಿಸುತ್ತವೆ. ಅಧ್ಯಯನಕ್ಕೆ ಆಗ ಸಮಿತಿ ರಚನೆಯಾಗುತ್ತದೆ, ಆ ಸಮಿತಿ ಅಧ್ಯಯನ ಕೈಗೊಂಡು ತನ್ನ ವರದಿ ಸಲ್ಲಿಸುತ್ತದೆ. ಬಳಿಕ ವರದಿಯಲ್ಲಿನ ಶಿಫಾರಸುಗಳ ಬಗ್ಗೆ ಅವಲೋಕನ... ಈ ಪ್ರಕ್ರಿಯೆ ಪೂರ್ಣಗೊಳ್ಳುವಷ್ಟರಲ್ಲಿ ತಿಂಗಳುಗಳು ಉರುಳುತ್ತವೆ. ಶಿಫಾರಸುಗಳ ಜಾರಿಗೆ ಪುನಃ ಒತ್ತಾಯ, ಧರಣಿ ನಡೆಸುವಂತಹ ಪ್ರಮೇಯ ಎದುರಾದರೂ ಅಚ್ಚರಿಪಡಬೇಕಿಲ್ಲ. ರೈತರ ಪರವಾಗಿ ಸರಕಾರಗಳು ವ್ಯಕ್ತಪಡಿಸುವ ಕಾಳಜಿ ಪ್ರಾಮಾಣಿಕವಾದುದೇ ಆದಲ್ಲಿ ವಿಳಂಬಕ್ಕೆ ಆಸ್ಪದ ಇಲ್ಲದಂತೆ ನಿರ್ಧಾರಗಳು ಹೊರಬೀಳಬೇಕು. ಅವು ಪರಿಣಾಮಕಾರಿಯಾಗಿ ಜಾರಿಗೆ ಬರುವಂತೆ ನೋಡಿಕೊಳ್ಳಬೇಕು.

ಅಣಬೆಗಳನ್ನು ಈ ವಿಧಾನದಲ್ಲಿ ಸೇವಿಸಿದರೆ ಪ್ರೋಟೀನ್, ಫೈಬರ್, ವಿಟಮಿನ್ಸ್ ಪ್ರಯೋಜನ ಮತ್ತಷ್ಟು ಹೆಚ್ಚಿಸಲು ಸಾಧ್ಯ: ತಜ್ಞರ ಸಲಹೆ

ದೈನಂದಿನ ಆಹಾರ ಕ್ರಮದಲ್ಲಿ ಅಣಬೆಗಳನ್ನು ಸೇರಿಸುವುದರಿಂದ ದೇಹಕ್ಕೆ ಅಗತ್ಯವಿರುವಂತಹ ಫೈಬರ್, ಪ್ರೋಟೀನ್, ವಿಟಮಿನ್‌ಗಳ ಪ್ರಮಾಣವನ್ನು ಸುಲಭವಾಗಿ ಹೆಚ್ಚಿಸಿಕೊಳ್ಳಲು ಸಹಾಯವಾಗುತ್ತದೆ.

ಅಣಬೆಗಳು ಕಡಿಮೆ ಕ್ಯಾಲೊರಿ, ಅತಿ ಹೆಚ್ಚು ಪೋಷಕಾಂಶಗಳನ್ನು ಹೊಂದಿರುವ ಅತ್ಯುತ್ತಮ ಸೂಪರ್ ಆಹಾರಗಳ ಲಿಸ್ಟ್‌ನಲ್ಲಿ ಬರುತ್ತದೆ. ಅಣಬೆಗಳನ್ನು ಸಾಮಾನ್ಯವಾಗಿ ತರಕಾರಿಯಂತೆ ಆಹಾರದಲ್ಲಿ ಉಪಯೋಗಿಸಲಾಗುತ್ತದೆ.

ಆಯ್ಸ್ಟರ್ ಅಣಬೆಗಳಿಂದ ಹಿಡಿದು ಲಯನ್ಸ್ ಮೇನ್ ಅಣಬೆಗಳವರೆಗೆ ವಿವಿಧ ಬಗೆಯ ಅಣಬೆಗಳಲ್ಲಿ ಜೈವಿಕವಾಗಿ ಸಕ್ರಿಯವಾಗಿರುವ ಸಂಯುಕ್ತಗಳಿವೆ. ಇವುಗಳು ರೋಗನಿರೋಧಕ ವ್ಯವಸ್ಥೆ ವೃದ್ಧಿಸುವ, ಮೆದುಳಿನ ಕಾರ್ಯನಿರ್ವಹಣೆಯ ಆರೋಗ್ಯ ಹಾಗೂ ಹೃದಯದ ಆರೋಗ್ಯದೊಂದಿಗೆ ಸಂಬಂಧ ಹೊಂದಿವೆ. ಅಣಬೆಗಳನ್ನು ಕಡಿಮೆ ಅವಧಿಯಲ್ಲಿ ಬೆಳೆಯಬಹುದು, ಇವುಗಳಲ್ಲಿ ಪೋಷಕಾಂಶಗಳ ಹೇರಳವಾಗುತ್ತವೆ. ಅಣಬೆಗಳು ಸಸ್ಯಗಳಲ್ಲ, ಇವು ಒಂದು ರೀತಿಯ ಶಿಲೀಂಧ್ರಗಳಾಗಿವೆ. ಅಣಬೆಗಳಲ್ಲಿ ನಾರಿನಂಶ, ಪ್ರೋಟೀನ್, ವಿಟಮಿನ್ಸ್ ಹಾಗೂ ಖನಿಜಗಳ ಜೊತೆಗೆ ದೇಹದ ವಿವಿಧ ಜೈವಿಕ ಪ್ರಕ್ರಿಯೆಗಳ ಮೇಲೆ ತುಂಬಾ ಪ್ರಭಾವ ಬೀರುವಂತಹ ವಿವಿಧ ನೈಸರ್ಗಿಕ ಸಂಯುಕ್ತಗಳನ್ನು ಹೊಂದಿವೆ. ಈ ಕಾರಣದಿಂದ ಅಣಬೆಗಳು ಕೇವಲ ರುಚಿಗಾಗಿ ಹಾಗೂ ವೈವಿಧ್ಯಮಯ ಅಡುಗೆಯ ಬಳಕೆಗಾಗಿ ಮಾತ್ರವಲ್ಲದೆ, ದೇಹದ ಒಟ್ಟಾರೆ ಆರೋಗ್ಯವನ್ನು ವೃದ್ಧಿಸಲು ನಿಮ್ಮ ಆಹಾರ ಕ್ರಮದಲ್ಲಿ ಅತ್ಯಂತ ಅಮೂಲ್ಯ ಸ್ಥಾನವನ್ನು ಹೊಂದಿವೆ.

ಇತ್ತೀಚಿನ ಸಂಶೋಧನೆ ತಿಳಿಸುವ ಪ್ರಕಾರ, ಲಯನ್ಸ್ ಮೇನ್ ನಂತಹ ನಿರ್ದಿಷ್ಟ ಅಣಬೆಗಳ ಕುರಿತು ವಿಶೇಷ ಆಸಕ್ತಿಯನ್ನು ಹೊಂದಿವೆ.

ಈ ಅಣಬೆಗಳಲ್ಲಿ ಕಂಡುಬರುವ ನಿರ್ದಿಷ್ಟ ಸಂಯುಕ್ತಗಳು ಹಾಗೂ ನರಮಂಡಲಕ್ಕೆ ಸಂಬಂಧಿಸಿದ ಪ್ರಯೋಜನಗಳನ್ನು ನೀಡುತ್ತವೆ. ಇವುಗಳನ್ನು ಮೆದುಳಿನ ಜೀವಕೋಶಗಳ ಬೆಳವಣಿಗೆ ಹಾಗೂ ನರಗಳ ಆರೋಗ್ಯಕ್ಕೆ ಉತ್ತಮವಾಗಿವೆ.

ಈ ಸಂಶೋಧನಾ ಫಲಿತಾಂಶಗಳನ್ನು ಯಾವುದೇ ರೋಗಕ್ಕೆ ಪರಿಹಾರ ಇಲ್ಲವೇ ಚಿಕಿತ್ಸೆಗೆ ಪರ್ಯಾಯವಾಗಿ ಪರಿಗಣಿಸಬಾರದು ಎಂದು ಆರೋಗ್ಯ ತಜ್ಞರು ತಿಳಿಸುತ್ತಾರೆ. ಈ ಕುರಿತು ಹೆಚ್ಚಿನ ಮತ್ತು ದೀರ್ಘಕಾಲೀನ ಮಾನವ ಅಧ್ಯಯನಗಳ ಅಗತ್ಯವಿದೆ ಎಂದು ತಜ್ಞರು ತಿಳಿಸುತ್ತಾರೆ. ಅಣಬೆಗಳಲ್ಲಿ ಕಂಡುಬರುವ ಬೀಟಾ ಗ್ಲುಕನ್‌ಗಳಂತಹ ಸಂಯುಕ್ತಗಳು ಹೇರಳವಾಗಿ ಕಂಡುಬರುತ್ತದೆ ಎಂದು ಅಧ್ಯಯನ ತಿಳಿಸುತ್ತದೆ.

ಇವು ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳಾಗಿದ್ದು, ದೇಹದ ರೋಗನಿರೋಧಕ ವ್ಯವಸ್ಥೆಯೊಂದಿಗೆ ಇವುಗಳ ಸಂಭಾವ್ಯ ಪರಸ್ಪರ ಕ್ರಿಯೆಯ ಕುರಿತು ಸಂಶೋಧನೆ ನಡೆಸಲಾಗಿದೆ. ನಿಯಮಿತ ಆಹಾರದಲ್ಲಿ ಅಣಬೆಗಳನ್ನು ಸೇರಿಸುವುದರಿಂದ ದೊರೆಯುವ ಪೋಷಕಾಂಶಗಳು ದೇಹದ ಆರೋಗ್ಯಕ್ಕೆ ತುಂಬಾ ಉಪಯುಕ್ತವಾಗಿವೆ. ಸಮತೋಲಿತ ಆಹಾರದ ಭಾಗವಾಗಿ ಸೇವಿಸಿದಾಗ ಅಣಬೆಗಳಲ್ಲಿರುವ ನಾರಿನ ಅಂಶ, ಉತ್ಕರ್ಷಣ ನಿರೋಧಕಗಳು ಹಾಗೂ ಇತರ ಜೈವಿಕ ಸಕ್ರಿಯ ಸಂಯುಕ್ತಗಳು ಹೃದಯದ ಆರೋಗ್ಯಕ್ಕೆ ಕೊಡುಗೆ ನೀಡುತ್ತದೆ.

ಇವುಗಳಲ್ಲಿ ಸಾಮಾನ್ಯವಾಗಿ ಕ್ಯಾಲೊರಿ ಹಾಗೂ ಕೊಬ್ಬಿನಾಂಶ ಕಡಿಮೆ ಇರುತ್ತದೆ, ಹಲವು ಪ್ರಕಾರದ ಪೌಷ್ಟಿಕಾಂಶದ ಗುಣಲಕ್ಷಣಗಳನ್ನು ಹೊಂದಿವೆ.

ಮಾಂಸ ಅಥವಾ ಹೆಚ್ಚಿನ ಕ್ಯಾಲೊರಿ ಇರುವ ಆಹಾರಗಳ ಬದಲಿಗೆ ಅಣಬೆಗಳನ್ನು ಸೇವಿಸುವುದರಿಂದ ಆಹಾರದಲ್ಲಿ ಪೌಷ್ಟಿಕಾಂಶದ ವೈವಿಧ್ಯತೆಯನ್ನು ಹೆಚ್ಚಿಸಬಹುದು ಎಂದು ತಜ್ಞರು ತಿಳಿಸುತ್ತಾರೆ. ಅಣಬೆಗಳಲ್ಲಿ ಕಂಡುಬರುವ ಬೀಟಾ ಗ್ಲುಕನ್‌ಗಳಂತಹ ಸಂಯುಕ್ತಗಳು ಹೇರಳವಾಗಿ ಕಂಡುಬರುತ್ತದೆ ಎಂದು ಅಧ್ಯಯನ ತಿಳಿಸುತ್ತದೆ. ಇವು ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳಾಗಿದ್ದು, ದೇಹದ ರೋಗನಿರೋಧಕ ವ್ಯವಸ್ಥೆಯೊಂದಿಗೆ ಇವುಗಳ ಸಂಭಾವ್ಯ ಪರಸ್ಪರ ಕ್ರಿಯೆಯ ಕುರಿತು ಸಂಶೋಧನೆ ನಡೆಸಲಾಗಿದೆ. ನಿಯಮಿತ ಆಹಾರದಲ್ಲಿ ಅಣಬೆಗಳನ್ನು ಸೇರಿಸುವುದರಿಂದ ದೊರೆಯುವ ಪೋಷಕಾಂಶಗಳು ದೇಹದ ಆರೋಗ್ಯಕ್ಕೆ ತುಂಬಾ ಉಪಯುಕ್ತವಾಗಿವೆ.

ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

19

ಕಾಫಿ-ಟೀ ಅತಿರೇಕ ನರಗಳಿಗೆ ಕಂಟಕ



ಎಚ್ಚರಕ್ಕಾಗಿ ದಿನಕ್ಕೆ ಐದಾರು ಬಾರಿ ಚಹಾ-ಕಾಫಿ ಸೇವಿಸುವುದು ವಿದ್ಯಾರ್ಥಿಗಳಲ್ಲಿ ಸಾಮಾನ್ಯವಾಗಿದೆ. ಬೆಳಗ್ಗೆ ಎದ್ದೊಡನೆ ಒಂದು, ಓದಿನ ನಡುವೆ ಇನ್ನೊಂದು, ರಾತ್ರಿ ಜಾಗರಣೆಗೆ ಮಗದೊಂದು ಲೋಟ. ಮೊದಮೊದಲು ಚುರುಕು ಅನ್ನಿಸಿದರೂ, ಕ್ರಮೇಣ ದೇಹ ಎಚ್ಚರಿಕೆ ನೀಡುತ್ತದೆ. ಮಿತಿಮೀರಿದ ಕೆಫೀನ್ ನರಮಂಡಲದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

ಅತಿಯಾದ ಕೆಫೀನ್ ಸೇರಿದಾಗ ನರಗಳು ಅತಿಪ್ರಚೋದನೆಗೊಳ್ಳುತ್ತವೆ. ಪರಿಣಾಮವಾಗಿ ಕೈ ನಡುಕ, ಹೃದಯ ಬಡಿತದ ಏರಿಕೆ, ಆತಂಕದ ತೀವ್ರತೆ ಕಾಣಿಸಿಕೊಳ್ಳುತ್ತದೆ. ರಾತ್ರಿ ಹಾಸಿಗೆ ಸೇರಿದರೂ ನಿದ್ರೆ ಹತ್ತಿರ ಸುಳಿಯದು. ಶಿರೋವೇದನೆ, ಜಠರದ ಉರಿ, ಕಾರಣವಿಲ್ಲದ ಗಾಬರಿ ಕೂಡ ಕಾಣಿಸಬಹುದು. ಒಂದು ಕಪ್ ಉತ್ತೇಜನ ನೀಡಿದರೆ, ಅತಿರೇಕವು ನರಗಳನ್ನು ನಿತ್ರಾಣಗೊಳಿಸುತ್ತದೆ.



ಪರೀಕ್ಷಾ ಸಮಯದಲ್ಲಿ ಇದು ಇನ್ನಷ್ಟು ಅಪಾಯಕಾರಿ. ನಿದ್ರೆ ಭಂಗವಾದರೆ ಮರುದಿನ ಓದಿದ್ದು ನೆನಪಿಗೆ ನಿಲ್ಲುವುದಿಲ್ಲ, ಏಕಾಗ್ರತೆ ಚದುರುತ್ತದೆ, ಸಣ್ಣ ವಿಷಯಕ್ಕೂ ಸಿಟ್ಟು ಬರುತ್ತದೆ.ಕಾಫಿಯಿಂದ ಓದು ಹೆಚ್ಚುತ್ತದೆ ಎಂಬುದು ಕೇವಲ ಭ್ರಮೆ. ನಾವು ಕೃತಕ ಚೈತನ್ಯಕ್ಕಾಗಿ ನೈಸರ್ಗಿಕ ಶಕ್ತಿಯನ್ನು ಬಲಿಕೊಡುತ್ತೇವೆ.

ದಿನಕ್ಕೆ ಎರಡು ಕಪ್ ಮಿತಿ ಸಾಕು, ಸಂಜೆ ಐದರ ನಂತರ ಚಹಾ-ಕಾಫಿ ಬೇಡ. ಬದಲಾಗಿ ನೀರು, ಹಾಲು, ನಿಂಬೆ ಪಾನಕ ಸೇವಿಸಿ. ನರಗಳಿಗೆ ವಿಶ್ರಾಂತಿ ನೀಡಿದರೆ ಅವು ಸಹಜವಾಗಿ ಕೆಲಸ ಮಾಡುತ್ತವೆ. ಆರೋಗ್ಯಕರ ನರಮಂಡಲದಿಂದ ಮಾತ್ರ ಅರ್ಥಪೂರ್ಣ ಅಧ್ಯಯನ ಸಾಧ್ಯ.

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ
ವಿಮರ್ಶಕರು

ನಮ್ಮ ದೇಶ ಹಲವು ಜಾತಿ,ಧರ್ಮ, ಭಾಷೆ,ಸಂಸ್ಕೃತಿ,ಆಚಾರ -ವಿಚಾರ,ಕಟ್ಟುಪಾಡುಗಳು, ಮೂಡನಂಬಿಕೆಗಳು ಹಾಗೂ ಹಲವು ಸಂಪ್ರದಾಯ ಒಳಗೊಂಡ ಕುಟುಂಬಗಳಿಂದ ಕೂಡಿದ ಸಮಾಜ ನಿರ್ಮಾಣವಾಗಿದೆ. ಸಮಾಜದಲ್ಲಿ ಉಡುಗೊರೆ ಎಂಬ ಈ ಗೊಡ್ಡು ಸಂಪ್ರದಾಯ ಅನಾದಿಕಾಲದಿಂದಲೂ ತಲೆಯೆತ್ತಿದೆ ಈಗಲೂ ಜೀವಂತವಾಗಿದೆ. ಇದೊಂದು ಸಮಾಜದ ಒಂದು ದೊಡ್ಡ ಪಿಡುಗು.ಇದರ ಆಳ ಅಗಲವನ್ನು ಅಳೆಯಲು ಯಾರಿಂದಲೂ ಸಾಧ್ಯವಿಲ್ಲ.

ಇದೊಂದು ದೊಡ್ಡ ಪ್ರತಿಷ್ಠೆಯಾಗಿದೆ.ಎಲ್ಲಾ ಆದಾಯ ಇರುವವರಿಗೆ ಒಂದು ಮತ್ತು ಇಲ್ಲದವವರಿಗೆ ಒಂದು ಹೀಗೆ ಇದರಲ್ಲಿ ಯಾವುದೇ ಹೋಲಿಕೆ ವ್ಯತ್ಯಾಸವಿಲ್ಲದೇ ಉಡುಗೊರೆ ಮೆರೆಯುತ್ತಿದೆ. ಈ ಉಡುಗೊರೆಯಿಂದ ಎಷ್ಟೋ ಸಂಸಾರಗಳಲ್ಲಿ ಬಿರುಕು ಹುಟ್ಟಿ ಮನಸ್ತಾಪಗಳಾಗಿ ದೂರವಾಗಿವೆ.

ಉಡುಗೊರೆ ಎಂಬುದು ಸಮಾಜದಲ್ಲಿ ಚಾಲ್ತಿ ಇರುವ ಒಂದು ಗೊಡ್ಡು ಸಂಪ್ರದಾಯ

ಉದಾಹರಣೆಗೆ: ಮದುವೆಯ ಸಮಾರಂಭ,ಹುಟ್ಟಿದ ದಿನಾಚರಣೆ,ನಾಮಕರಣ, ಗೃಹಪ್ರವೇಶ ಸಮಾರಂಭ, ಹೆಣ್ಣುಮಕ್ಕಳ ಶ್ರೀಮಂತ ಸಮಾರಂಭ, ಹಬ್ಬ-ಹರಿದಿನಗಳ ಸಮಾರಂಭ ಇನ್ನೂ ಇತರೆ ಸಭೆ-ಸಮಾರಂಭಗಳಿಗೆ ಉಡುಗೊರೆ ಕೊಡುವುದು ಸರ್ವೇಸಾಮಾನ್ಯವಾಗಿದೆ. ಇವೆಲ್ಲವನ್ನೂ ನಾವು ಅವಲೋಕಿಸಿ ನೋಡಿದಾಗ ಹೋಟೆಲ್ ನಲ್ಲಿ ತಿಂಡಿ ಅಥವಾ ಊಟ ಮಾಡಲು ಹಣಕೊಟ್ಟು ಬಿಲ್ಲು ಹೇಗೆ ಕಟ್ಟಿ ಊಟ ಮಾಡಿಕೊಂಡು ವಾಪಸ್ ಬರುವಹಾಗೆ.ಈ ಮೇಲ್ಕಂಡ ಎಲ್ಲಾ ಸಮಾರಂಭಗಳಲ್ಲೂ ಉಡುಗೊರೆ ಮೂಲಕ ಆಯೋಜಿಸಿರುವವರಿಗೆ ಹಣ ಮೂಲಕ ಅಥವಾ ಇನ್ಯಾವುದೇ ಮೂಲಕ ಉಡುಗೊರೆ ನೀಡಿ ಊಟವನ್ನು ಮಾಡಿಕೊಂಡು ಬರುವ ಪದ್ಧತಿ ಚಾಲ್ತಿಯಲ್ಲಿದೆ. ಇದರಲ್ಲಿ ವಿಶೇಷ ಎರಡು ಒಂದೇ ಅಲ್ಲವೇ ! ಇದನ್ನು ಎಲ್ಲರೂ ಸಾಮಾನ್ಯ ಜ್ಞಾನದಿಂದ ಅರ್ಥಮಾಡಿಕೊಳ್ಳಬೇಕು.ಎಷ್ಟೋ ಬಡ ಕುಟುಂಬಗಳು ಉಡುಗೊರೆಯನ್ನು ಸಮಾಂತರವಾಗಿ ನೀಡಲು ಅಥವಾ ಕೊಡಲು ಸಮರ್ಥರಲ್ಲದ್ದರಿಂದ ಸಮಾರಂಭಗಳಿಗೆ ಹೋಗಲು ಮನಸ್ಸು ಒಪ್ಪದೇ ಹಿಂಜರಿಯುತ್ತ ತಪ್ಪಿಸಿಕೊಳ್ಳುತ್ತಾರೆ. ಹಾಗೂ ಮಾನಸಿಕ ತೊಳಲಾಟಕ್ಕೆ ಸಿಲುಕಿ ನರಳುತ್ತಾರೆ,ಎಂತಹ ಕೆಟ್ಟ ಸಂಪ್ರದಾಯ ನಮ್ಮ ದೇಶದ ಸಮಾಜದಲ್ಲಿ ಹರಿದಾಡುತ್ತಿದೆ. ಇಷ್ಟೊಂದು ವಿಜ್ಞಾನ ತಂತ್ರಜ್ಞಾನ ಬೆಳೆದಿದ್ದರೂ ಸಹ ಇನ್ನೂ ಹಳೆಯ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ.

ಸಮಾರಂಭ ಮುಗಿದ ಮೂರು-ನಾಲ್ಕು ದಿವಸಗಳ ನಂತರ ಉಡುಗೊರೆಗಳನ್ನು ಲೆಕ್ಕಾಚಾರ ಮಾಡಿ ಅದರಲ್ಲಿ ವ್ಯತ್ಯಾಸವಾದರೆ ಇರುವ ವಿಶ್ವಾಸವನ್ನು ಹಾಗೂ ಸಂಬಂಧವನ್ನೂ ಸಹ ಕಳೆದುಕೊಳ್ಳುವ ಸಂಭವ ಹೆಚ್ಚಾಗಿದೆ. ಯಾವುದೇ ತರಹದ ಉಡುಗೊರೆಗಳು ಕೊಡುವುದು ಮತ್ತು ಸ್ವೀಕರಿಸುವುದು ಎರಡೂ ಸಹ ತಪ್ಪೇ! ಹಾಗೂ ಯಾವುದೇ ತರಹದ ಉಡುಗೊರೆಗಳು ಉಚಿತವಾಗಿ ನೀಡುವುದು ಉಚಿತವಲ್ಲ ಹಾಗೂ ಉಚಿತವಾಗಿ ಬಯಸುವುದೂ ಅಥವಾ ಅಪೇಕ್ಷೆ ಪಡುವುದೂ ಸಹ ತಪ್ಪು.

ಉದಾಹರಣೆಗೆ: ಪ್ರಕೃತಿದತ್ತವಾಗಿ ದೊರಕಿರುವ ಗಾಳಿ ಒಂದೇ ಉಚಿತ, ಕಲಿತಿರುವ ವಿದ್ಯೆ ಒಂದೇ ಸ್ವಂತ ಆಸ್ತಿ ಇನ್ನು ಉಳಿದವು ಯಾವುದೂ ಕೂಡ ಉಚಿತವಾಗಬಾರದು. ಒಂದು ವೇಳೆ ತಮಗೆ ಮನಸ್ಸಿದ್ದು ತಾವು ಕೊಡುವ ದಾನ ಇನ್ನೊಬ್ಬರಿಗೆ ಗೊತ್ತಾಗದ ಹಾಗೆ ಬಡವರ ಅಥವಾ ದುಡಿಯಲು ಶಕ್ತಿ ಇಲ್ಲದ ಅಂಗವಿಕಲರ ಮನೆಯನ್ನು ಬೆಳಕು ಮಾಡಿ.ಆಗ ನಿಮ್ಮ ಮನ ಶುದ್ಧ ಮತ್ತು ಮನೆ ಶುದ್ಧ- ಪರಿಶುದ್ಧವಾಗುತ್ತದೆ. ಒಂದು ದಿನ ಬಡವರ ಆಶೀರ್ವಾದವೇ ಶ್ರೀಮಂತರಿಗೆ ಶ್ರೀರಕ್ಷೆಯಾಗಿ ಪರಿಣಮಿಸುತ್ತದೆ.ಕೇವಲ ಈ ಉಡುಗೊರೆಗಳು ತಮ್ಮ ಸ್ವಪ್ರತಿಷ್ಠೆಗಳೇ ಜಾಸ್ತಿ. ಅದರಲ್ಲಿ ಪ್ರೀತಿ-ವಿಶ್ವಾಸ ತುಂಬಿರುವುದಿಲ್ಲ. ಕೇವಲ ಹೆಗ್ಗಳಿಕೆ,ತೋರ್ಪಡಿಸುವಿಕೆ ಉಡುಗೊರೆ ಪ್ರದರ್ಶಿಸುವುದು ಹಾಗೂ ಬೇರೆಯವರು ನೋಡಲೆಂದು ಉಡುಗೊರೆ ಕೊಡುವುದೇ ಜಾಸ್ತಿ.ಈ ರೀತಿಯ ಸಂಪ್ರದಾಯ ಗಳು ಭಾರತ ದೇಶದಲ್ಲಿ ಇರುವುದರಿಂದ ಈ ಕೂಡಲೇ ಎಲ್ಲಾ ಪ್ರಜ್ಞಾವಂತರು, ವಿದ್ಯಾವಂತರು, ಜ್ಞಾನವಂತರು ಮಿಗಿಲಾಗಿ ಹಿರಿಯ ಸಮಾಜ ಸುಧಾರಕರು ಅರ್ಥೈಸಿಕೊಂಡು ಉಡುಗೊರೆ ಎಂಬ ದೊಡ್ಡ ಸಮಾಜದ ಪಿಡುಗನ್ನು ಈ ಕೂಡಲೇ ಸಮಾಜದಿಂದ ಮುಂದಿನ ಉಜ್ವಲ ಭವಿಷ್ಯಕ್ಕೆ ಓಡಿಸುವ ಸಂಕಲ್ಪವನ್ನು ಮಾಡುವ ಅಗತ್ಯತೆ ಇದೆ. ಉಡುಗೊರೆ ಕೊಡಲೇ ಬೇಕೆಂದು ತೀರ್ಮಾನ ಮಾಡಿದ ಮೇಲೆ ಕೆಲವು ಹೆಸರಾಂತ ಸಾಹಿತಿಗಳು ಬರೆದಿರುವ ಪುಸ್ತಕಗಳನ್ನ ಖರೀದಿ ಮಾಡಿ ಉಡುಗೊರೆಯಾಗಿ ಕೊಡಿ ಆಗ ಒಂದು ಅರ್ಥ ಬರುತ್ತದೆ.ಮುಂದೆ ಮಾಡುವ ಯಾವುದೇ ಸಭೆ-ಸಮಾರಂಭ ಕಾರ್ಯಕ್ರಮಗಳಲ್ಲಿ ಆಹ್ವಾನ ಪತ್ರಿಕೆಗಳಲ್ಲಿ ಉಡುಗೊರೆ ನಿಷೇಧ ಎಂದು ಮುದ್ರಿಸಿ. ನಂತರ ನಾಮಫಲಕವನ್ನು ಸಮಾರಂಭಗಳಲ್ಲಿ ತೂಗುಹಾಕಿ. ಈ ರೀತಿ ತಮ್ಮಗಳ ಶುಭಕಾರ್ಯಗಳನ್ನು ಮಾಡುವುದರಲ್ಲಿ ಅರ್ಥವಿದೆಯೆಂದು ತಿಳಿದುಕೊಳ್ಳಲು ಹಾಗೂ ಈ ಬಗ್ಗೆ ಎಲ್ಲರೂ ಮನಸ್ಸನ್ನು ಪರಿವರ್ತನೆ ಮಾಡಿಕೊಳ್ಳಲೆಂದು ಈ ಲೇಖನ ಸಿದ್ಧಪಡಿಸಿರುತ್ತೇನೆ. ವಿಜ್ಞಾನ ತಂತ್ರಜ್ಞಾನ ಬೆಳೆದಿರುವ ಡಿಜಿಟಲ್ ಯುಗದ ಕಾಲಘಟ್ಟದಲ್ಲಿ ಹಳೆಯ ಸಂಪ್ರದಾಯಗಳನ್ನ ಮುಂದುವರಿಸುವುದರಲ್ಲಿ ಅರ್ಥವಿಲ್ಲ.ಈ ಬಗ್ಗೆ ವಿಶಾಲವಾಗಿ ದೂರದೃಷ್ಟಿ ಇಟ್ಟುಕೊಂಡು ಮುಂದಿನ ಮಕ್ಕಳ ಹಾಗೂ ಯುವಕರ ಭವಿಷ್ಯಕ್ಕೆ ಸುಧಾರಣೆಯಾಗುವ ಚಿಂತನೆ ಮಾಡಿದ್ದೇನೆ ಶುಭವಾಗಲಿ.

ರಾಮಾಯಣ

22. ಪ್ರಹಸ್ತನನ್ನು ನೀಲನು ಸಂಹರಿಸಿದುದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಸಿಡಿಲು ಬಡಿದರೆ ಕುರಿಯು ಎದುರಿಸಲಾದೀತೇ? ವೀರರೊಡೆಯನಾದ ಪವಮಾನನಂದನನ ಹೊಡೆತಕ್ಕೆ ಸಿಕ್ಕಿದ ಈ ಹುಲುದೈತ್ಯ ಬದುಕಿಯಾನೇ? ಹನುಮನ ಹೊಡೆತಕ್ಕೆ ಸಿಕ್ಕಿ ಕರುಳುಗಳನ್ನುಗುಳುತ್ತ. ಕಣ್ಣುಗಳನ್ನು ಅರಳಿಸಿ, ಮೈಯೆಲ್ಲ ಪುಡಿಪುಡಿಯಾಗಿ ನೆಲಕ್ಕೊರಗಲು ಅವನ ಬಳಗವು ಭೀತಿಯಿಂದ ಉಸಿರುಗಟ್ಟಿಕೊಂಡು ಕಾಲಿಗೆ ಬುದ್ಧಿ ಹೇಳಿತು. ಮೃತ್ಯುವಿನ ಮಗನಾದ ಅಕಂಪನನು ಮಡಿದನೆಂದು ಗಗನಾಂಗಣದಲ್ಲಿ ನೆರೆದಿದ್ದ ಯಕ್ಷಿಗಳೂ ಗಾಂಧರ್ವರೂ ಸಂತಸದಿಂದ ಹಿಗ್ಗಿ ಸಗರವಂಶೋದ್ಧೂತನನ್ನು ಹಾಡಿ ಹೊಗಳುತ್ತ ಹೂಮಳೆಗರೆದು ದುಂದುಭಿಗಳನ್ನು ಹೊಡೆದು ಆನಂದದಿಂದ ಕುಣಿದು ನಲಿಯುತ್ತ ಅಂಜನಾಸುತನನ್ನು ಪೂಜಿಸಿದರು. ಲೋಕಾಪಕಾರಿಯನ್ನು ತರಿದು ತನ್ನ ಬಳಗವನ್ನು ಪೊರೆದು ದೇವತೆಗಳ ಪೂಜೆಗರ್ಹನಾಗಿ ಸಂಭ್ರಮದಿಂದ ಕೂಡಿ ಶ್ರೀಕಾಂತನಾದ ರಾಮಪುರದರಸನ ಅನುಚರರಲ್ಲಿ ಅಗ್ರೇಸರನಾದ ಮರುತ್ಸುತನು ರಣದಲ್ಲಿ ಪ್ಲವಗೋತ್ತಮರನ್ನು ರಕ್ಷಿಸಲು ಅಸುರರು ಲಂಕೆಯೆಡೆಗೆ ಓಡಿದರು.

ಗಿರಿಜಾತೆಯೇ ಕೇಳು, ಅಕಂಪನನು ಯುದ್ಧದಲ್ಲಿ ಸತ್ತನೆಂಬ ವಾರ್ತೆ ಎಲ್ಲೆಡೆಗೆ ಬಲು ವೇಗವಾಗಿ ಹರಡಿ ರಾಕ್ಷಸೇಶ್ವರನ ಕಿವಿಗೂ ಬಿದ್ದಿತು, ಆ ಹೊತ್ತಿಗೆ ಯುದ್ಧದಲ್ಲಿ ಪಾರಾಗಿ ಬಂದ ರಕ್ಕಸಸೈನ್ಯವೂ ಈ ಸುದ್ದಿಯನ್ನು ತಂದು ರಾಜನಿಗೊಪ್ಪಿಸಿತು. ಆಶ್ಚರ್ಯದಿಂದ ಕೂಡಿದ ಅವನ ಮುಖ ಕಳೆಗುಂದಿತು; ಅವನನ್ನು ದೀನತೆ ಆವರಿಸಿತು. ಸುತ್ತಲಿದ್ದ ಅಮಾತ್ಯರ ಕಡೆಗೆ ತಿರುಗಿ, ''ಇದೇನು, ಹೀಗಾಗಿಹೋಯಿತಲ್ಲ! ಕಾಲಬಲದಿಂದ ಇವನೂ ಸಾಯುವಂತಾಯಿತೇ!'' ಎಂದು ನುಡಿದ. ಮುಂದೇನೆಂಬುದರ ಬಗ್ಗೆ ದಿಕ್ಕು ತೋಚದೆ, ಚಿಂತೆಯಿಂದ ಕೂಡಿ ಹುಬ್ಬುಗಳು ಗಂಟಿಕ್ಕಿಕೊಳ್ಳಲು, ಮೇಲೆದ್ದು ಭಾರವಾದ ಹೆಜ್ಜೆಗಳನ್ನಿಡುತ್ತ ಬಂದು ತನ್ನ ರಥವನ್ನೇರಿ ಅಲ್ಲಿಂದ ಹೊರಟ. ಆಗ ಅವನ ಹಿಂದೆ ಬಂದ ಪ್ರಹಸ್ತನು ಅವನನ್ನು ನಿಲ್ಲಿಸಿ, ಅವನ ಕೈಗಳನ್ನು ಹಿಡಿದುಕೊಂಡು ಮುಂದಿನ ಕಾರ್ಯಗಳ ಬಗ್ಗೆ ಆಲೋಚಿಸುತ್ತ, ತನ್ನ ನಗರದ ಪರಿಸ್ಥಿತಿಯನ್ನು ಅವಲೋಕಿಸಲು ಕೋಪದಿಂದ ಬಂದ. ಎಲ್ಲೆಲ್ಲೂ ಬೊಬ್ಬರಿಯುತ್ತ ಜಯಕಾರ ಮಾಡುತ್ತಿದ್ದ ಕಪಿಗಳನ್ನು ಕಂಡು ಒಳಗೊಳಗೇ ತೊಳಲಿ ಸಂಕಟಗೊಳ್ಳುತ್ತ ಅತಿಕೋಪದಿ0ದ ಕೂಡಿದ ರಕ್ಕಸೇಂದ್ರನು ಪ್ರಹಸ್ತನ ಜೊತೆಗೆ ಹೀಗೆಂದ ರಣರಂಗದಲ್ಲಿ ಇವರ ಬಲವನ್ನು ಮರ್ದಿಸಲು ನೀನೊಬ್ಬ, ಕುಂಭಕರ್ಣ, ಇಂದ್ರಜಿತು, ನಿಕುಂಭ ಮತ್ತು ನಾನು ಇಷ್ಟು ಮಂದಿಯನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ಆಪತ್ತು ಅಡಸಿದಾಗ ಧೈರ್ಯಗುಂದಿದರೆ ಕೆಲಸ ಕೆಡುತ್ತದೆಯೇ ಹೊರತು ಜಯೋತ್ಸಾಹವುಂಟಾಗದು. ಆದ್ದರಿಂದ ನೀನೀಗ ಹೊರಡು ನಮ್ಮ ಸೈನ್ಯಸಮೇತವಾಗಿ ಬೇಗನೇ ಹೋಗಿ ವಾನರರ ಬಲದೊಳಗೆ ಹೊಕ್ಕು, ನಿನ್ನ ಆರ್ಭಟದಿಂದ ಅವರನ್ನೆಲ್ಲ ನಡುಗಿಸಿ ಪಲಾಯನಗೈವಂತೆ ಮಾಡಿ, ಎದುರಾದವರನ್ನು ಹುಡಿಗುಟ್ಟಿ ಬಾ. ನಿನ್ನ ಸಿಂಹನಾದವನ್ನು ಕೇಳಿಯೇ ವಾನರರು ಹೆದರುತ್ತಾರೆ. ನಿನ್ನ ಅಭಿಪ್ರಾಯವೇನು? ಆಗ ಪ್ರಹಸ್ತನು ಕೈಜೋಡಿಸಿಕೊಂಡು, ''ದೈತ್ಯೇಂದ್ರಾ, ಹಿಂದೆ ದೇವದಾನವ ಯುದ್ಧದಲ್ಲಿ ಗೆಲವನ್ನು ಪಡೆದ ಲೋಕಾತೀಶ ಬಲಶಾಲಿಯಾದ ನಿನ್ನೆದುರು ನಿಂತು ಹೋರಾಡುವವರಾರಿದ್ದಾರೆ? ನೀನು ಅಪ್ಪಣೆಯಿತ್ತರೆ, ನಾನೇ ಸಂತಸದಿಂದ ಯುದ್ಧಕ್ಕೆ ನಡೆದು ರಾಘವ ಲಕ್ಷ್ಮಣ ಸುಗ್ರೀವರನ್ನು ಸಂಹರಿಸಿ ಬರುತ್ತೇನೆ'' ಎಂದು ಉತ್ತರಿಸಿದ. ''ಮಂತ್ರಿಗಳ ಸಭೆಯಲ್ಲಿ ಸಮಾಲೋಚನೆ ಮಾಡಿ ನಿಷ್ಕರ್ಷ ಮಾಡಿದ ರೀತಿಯಲ್ಲಿ ಕಾರ್ಯವನ್ನು ಕೈಗೊಳ್ಳುವ ರಾಜನು ದೋಷರಹಿತನಾಗುತ್ತಾನೆ. ಯಾರಿಗೂ ಹೇಳದೆ ಮನೋಭವನ ತೀವ್ರತೆಗೆ ಒಳಗಾಗಿ ನೀನು ಸೀತೆಯನ್ನು ಕರೆತಂದೆ, ಅದರಿಂದ ಈ ದೊಡ್ಡ ವಿಪತ್ತು ನಮಗೆದುರಾಗಿದೆ, ಅಸುರಕುಲವಿನಾಶಕವೆನ್ನಿಸಿದೆ. ಆದರೆ ನೀನು ನಿಡುಗಾಲ ದಾನಮಾನಗಳಿಂದ ನನಗೆ ಐಸಿರಿಯನ್ನಿತ್ತು ಸಲಹಿದ ಒಡೆಯ. ಹಾಗಾಗಿ ನಿನ್ನ ಕಾರ್ಯದಲ್ಲಿ ಹಿಂಜರಿಯುವುದು ಅನೈತಿಕವಾದುದು. ನೀನು ಪೊರೆದ ಈ ದೇಹವನ್ನು ನಿನಗಾಗಿಯೇ ಅರ್ಪಿಸುತ್ತೇನೆ ಆದರೆ ಈ ಯುದ್ಧದಲ್ಲಿ ಶತ್ರುಗಳನ್ನು ಗೆದ್ದು ಬರುತ್ತೇನೆನ್ನುವುದು ಹುಸಿ ಮಾತು. ಹೆಂಡಿರುಮಕ್ಕಳ ಉಳಿವಿಗಾಗಿ ಯೋಚಿಸದೆ ನನ್ನ ಪ್ರಾಣವನ್ನು ನಿನಗಾಗಿ ಮುಡಿಪಿಟ್ಟಿದ್ದೇನೇ ಎಂದು ಉತ್ತರಿಸಿ, ಪ್ರಹಸ್ತನು ಹೊರಟ. ಹೀಗೆ ರಾವಣನಿಂದ ಬೀಳ್ಕೊಂಡ ಪ್ರಹಸ್ತನು ಬಂದು ತಮ್ಮ ಕಡೆಯ ಸೈನ್ಯವನ್ನೆಲ್ಲ ಸೇರಿಸಿ ಸೇನಾನಿಗಳಿಗೆ ಕರ್ತವ್ಯಗಳನ್ನು ನಿಗದಿ ಮಾಡಿ, ಬಿಲ್ಲುಬಾಣ ಮುಂತಾದ ಆಯುಧಗಳನ್ನು ಸಜ್ಜುಗೊಳಿಸಿಕೊಂಡು, ಕವಚಗಳನ್ನುಧರಿಸಿ, ಹೊಡೆಯುವ ರಣಭೇರಿಗಳ ಅಬ್ಬರದ ದನಿಯ ನಡುವೆ ದಿವ್ಯರಥವನ್ನೇರಿ ಆನಂದದಿಂದ ಹೊರಡಲು, ದೇವತತಿ ನಡುಗಿತು, ಅವನ ಸಿಂಹನಾದವನ್ನು ಕೇಳಿ ಸಮುದ್ರವೇ ಕಂಪಿಸಿತು.

ಮುಂದುವರೆಯುವುದು

ಮಹರ್ಷಿ ವಾಲ್ಮೀಕಿ ಜಯಂತಿ: ಆದಿಕವಿಯ ಪರಿವರ್ತನೆಯ ಪರ್ವ

ಮಹರ್ಷಿ ವಾಲ್ಮೀಕಿ ಜಯಂತಿಯು ಪ್ರತಿ ವರ್ಷ ಆಶ್ವಿನ ಮಾಸದ ಪೂರ್ಣಿಮೆಯ ದಿನದಂದು ಅಥವಾ ಅದರ ನಂತರದ ದಿನದಂದು ಆಚರಿಸಲ್ಪಡುತ್ತದೆ. 2026ರಲ್ಲಿ ಈ ಪರ್ವವು ಅಕ್ಟೋಬರ್ 26ರಂದು ಸೋಮವಾರ ಬರಲಿದೆ. ಕೆಲವು ಪ್ರದೇಶಗಳಲ್ಲಿ ಮತ್ತು ಪಂಚಾಂಗದ ವ್ಯತ್ಯಾಸಗಳ ಆಧಾರದ ಮೇಲೆ, ಪೂರ್ಣಿಮೆಯ ಮರುದಿನವನ್ನೂ ಸೇರಿಸಿಕೊಂಡು ಈ ಶುಭದಿನವನ್ನು ವಿಶೇಷವಾಗಿ ಆಚರಿಸುವ ಪರಂಪರೆ ಇದೆ.

ಆದಿಕವಿಯ ಪರಿಚಯ: ಮಹರ್ಷಿ ವಾಲ್ಮೀಕಿಯವರು ಸಂಸ್ಕೃತ ಸಾಹಿತ್ಯದ ಪ್ರಥಮ ಕವಿ ಎಂದು ಪರಿಗಣಿಸಲ್ಪಟ್ಟಿದ್ದಾರೆ. ಅವರನ್ನು ಆದಿಕವಿ ಎಂಬ ಗೌರವಾನ್ವಿತ ನಾಮದಿಂದ ಕರೆಯಲಾಗುತ್ತದೆ. ಅವರು ರಚಿಸಿದ ರಾಮಾಯಣ ಮಹಾಕಾವ್ಯವು 24,000 ಶ್ಲೋಕಗಳನ್ನು ಮತ್ತು ಏಳು ಕಾಂಡಗಳನ್ನು ಒಳಗೊಂಡಿದೆ. ಇದು ವಿಶ್ವದ ಪ್ರಥಮ ಮಹಾಕಾವ್ಯವೆಂದು ಪರಿಗಣಿಸಲ್ಪಟ್ಟಿದೆ.

ಜನ್ಮ ಮತ್ತು ಪವಾಡಸದೃಶ ಪರಿವರ್ತನೆ: ಮಹರ್ಷಿ ವಾಲ್ಮೀಕಿಯವರ ಜೀವನವು ಅಪೂರ್ವ ಪರಿವರ್ತನೆಯ ಕಥೆಯಾಗಿದೆ. ಅವರ ಮೂಲ ಹೆಸರು ರತ್ನಾಕರ. ಅವರು ಕಾಡಿನಲ್ಲಿ ಪ್ರಯಾಣಿಕರನ್ನು ಲೂಟಿ ಮಾಡುವ ಭಯಂಕರ ಕಳ್ಳನಾಗಿದ್ದರು. ಒಮ್ಮೆ ಸಪ್ತರ್ಷಿಗಳು ಅವರ ಮಾರ್ಗದಲ್ಲಿ ಬಂದಾಗ, ನೀನು ಮಾಡುತ್ತಿರುವ ಪಾಪಗಳ ಫಲವನ್ನು ನಿನ್ನ ಕುಟುಂಬದವರು ಹಂಚಿಕೊಳ್ಳುತ್ತಾರೆಯೇ? ಎಂದು ಪ್ರಶ್ನಿಸಿದರು. ಈ ಪ್ರಶ್ನೆಯು ರತ್ನಾಕರನ ಹೃದಯವನ್ನು ಬದಲಿಸಿತು. ಮನೆಗೆ ಹೋಗಿ ವಿಚಾರಿಸಿದಾಗ, ಕುಟುಂಬದವರು ತಮ್ಮ ನಿರ್ವಹಣೆ ಅವನ ಧರ್ಮವಾದರೂ, ಅವನ ಪಾಪಕ್ಕೆ ಅವನೇ ಹೊಣೆ ಎಂದು ಹೇಳುತ್ತಾರೆ. ಈ ಘಟನೆಯಿಂದ ಮನನೊಂದ ರತ್ನಾಕರನಲ್ಲಿ ಜ್ಞಾನೋದಯವಾಗಿ ಪಾಪಪ್ರಜ್ಞೆ ಜಾಗೃತಗೊಳ್ಳುತ್ತದೆ. ಸಪ್ತರ್ಷಿಗಳ ಮಾರ್ಗದರ್ಶನದಂತೆ ಅವರು ವರ್ಷಗಳ ಕಾಲ ತಪಸ್ಸನ್ನು ಆಚರಿಸಿದರು. ತಪಸ್ಸಿನ ತೀವ್ರತೆಗೆ ಅವರ ಶರೀರದ ಸುತ್ತಲೂ ಹುತ್ತ ಬೆಳೆಯುತ್ತದೆ. ತಪಸ್ಸಿನ ಸಿದ್ಧಿಯ ನಂತರ ಹುತ್ತದಿಂದ ಹೊರಬಂದಿದ್ದರಿಂದ ಅವರಿಗೆ ವಾಲ್ಮೀಕಿ ಎಂಬ ಹೆಸರು ಬಂದಿತು.

ಸಂಸ್ಕೃತದಲ್ಲಿ ವಾಲ್ಮೀಕ ಎಂದರೆ ಹುತ್ತ ಎಂದರ್ಥ.

ಕ್ರೌಂಚ ಪಕ್ಷಿಯ ಘಟನೆ ಮತ್ತು ಆದಿಕಾವ್ಯದ ಜನನ:--

ವಾಲ್ಮೀಕಿಯವರು ಕೇವಲ ತಪಸ್ವಿಯಾಗಷ್ಟೇ ಅಲ್ಲದೆ, ಪ್ರಕೃತಿಯ ಪ್ರೇಮಿಯೂ ಆಗಿದ್ದರು. ಒಮ್ಮೆ ಅವರು ತಮಸಾ ನದಿಯ ದಂಡೆಯಲ್ಲಿ ಜಗಳವಾಡುತ್ತಿದ್ದ ಕ್ರೌಂಚ ಪಕ್ಷಿಗಳ ಜತೆಯನ್ನು ನೋಡುತ್ತಿದ್ದಾಗ, ಬೇಡನೊಬ್ಬ ಗಂಡು ಪಕ್ಷಿಯನ್ನು ಬಾಣದಿಂದ ಹೊಡೆದು ಉರುಳಿಸುತ್ತಾನೆ. ಕಂಗಾಲಾದ ಹೆಣ್ಣು ಪಕ್ಷಿಯ ಗೋಳನ್ನು ಕಂಡ ವಾಲ್ಮೀಕಿಯವರ ಹೃದಯ ಕರಗಿ, ಅವರ ಬಾಯಿಂದ ಅರಿವಿಲ್ಲದೆಯೇ ಶ್ಲೋಕವೊಂದು ಹೊರಹೊಮ್ಮುತ್ತದೆ:

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ।
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ॥

ಇದು ಸಂಸ್ಕೃತ ಸಾಹಿತ್ಯದ ಪ್ರಥಮ ಶ್ಲೋಕವೆಂದು ಪರಿಗಣಿತವಾಗಿದೆ. ನಂತರ ಬ್ರಹ್ಮದೇವರ ಪ್ರೇರಣೆಯಂತೆ, ಅವರು ಜಗದ್ವಿಖ್ಯಾತ ರಾಮಾಯಣ ಮಹಾಕಾವ್ಯವನ್ನು ರಚಿಸಿದರು.

ರಾಮಾಯಣದ ಕೊಡುಗೆ ಮತ್ತು ತತ್ತ್ವಗಳು: ವಾಲ್ಮೀಕಿ ರಾಮಾಯಣವು

ಕೇವಲ ಒಂದು ಧಾರ್ಮಿಕ ಗ್ರಂಥವಲ್ಲ; ಅದು ಮಾನವೀಯ ಮೌಲ್ಯಗಳು, ಕುಟುಂಬ ಧರ್ಮ, ಪ್ರಜಾಪಾಲನೆ ಮತ್ತು ಸತ್ಯದ ಹಾದಿಯನ್ನು ಬೋಧಿಸುವ ಜೀವನ ಮಾರ್ಗದರ್ಶಿ. ಶ್ರೀರಾಮನನ್ನು ಒಬ್ಬ ಪರಿಪೂರ್ಣ ಮಾನವನನ್ನಾಗಿ (ಮರ್ಯಾದಾ ಪುರುಷೋತ್ತಮ) ಜಗತ್ತಿಗೆ ಪರಿಚಯಿಸಿದ ಶ್ರೇಯಸ್ಸು ವಾಲ್ಮೀಕಿಯವರಿಗೆ ಸಲ್ಲುತ್ತದೆ.

ಆಚರಣೆಗಳು: ಈ ಪರ್ವದಂದು ಭಕ್ತರು ದೇವಾಲಯಗಳಿಗೆ ಭೇಟಿ ನೀಡಿ ರಾಮಾಯಣದ ಶ್ಲೋಕಗಳನ್ನು ಪಠಿಸುತ್ತಾರೆ. ವಿಶೇಷ ಪೂಜೆಗಳು ಮತ್ತು ಸಾಮುದಾಯಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಅನೇಕ ಸ್ಥಳಗಳಲ್ಲಿ ಶೋಭಾ ಯಾತ್ರೆ ಎಂಬ ಮೆರವಣಿಗೆಗಳನ್ನು ನಡೆಸಲಾಗುತ್ತದೆ. ಈ ಮೆರವಣಿಗೆಗಳಲ್ಲಿ ಮಹರ್ಷಿ ವಾಲ್ಮೀಕಿಯವರ ಪ್ರತಿಮೆಯನ್ನು ಕುಂಕುಮ ವರ್ಣದ ವಸ್ತ್ರಗಳಲ್ಲಿ ಅಲಂಕರಿಸಿ ಕೊಂಡೊಯ್ಯಲಾಗುತ್ತದೆ. ಭಾರತದ ಪಂಜಾಬ್, ಹರಿಯಾಣ, ಉತ್ತರಾಖಂಡ ಮತ್ತು ಮಧ್ಯಪ್ರದೇಶದಂತಹ ರಾಜ್ಯಗಳಲ್ಲಿ ಈ ದಿನವನ್ನು ಪ್ರಾದೇಶಿಕ ರಜಾದಿನವನ್ನಾಗಿ ಆಚರಿಸಲಾಗುತ್ತದೆ.

ಮಹತ್ವ: ವಾಲ್ಮೀಕಿ ಜಯಂತಿಯು ಕೇವಲ ಒಬ್ಬ ಮಹಾನ್ ಕವಿಯ ಜನ್ಮದಿನವಲ್ಲ. ಇದು ಪರಿವರ್ತನೆಯ ಶಕ್ತಿಯ ಸಂಕೇತವಾಗಿದೆ. ಒಬ್ಬ ಕಳ್ಳನು ತನ್ನ ಪ್ರಾಮಾಣಿಕ ಪ್ರಾಯಶ್ಚಿತ್ತ ಮತ್ತು ಭಕ್ತಿಯ ಮೂಲಕ ಮಹಾನ್ ಋಷಿಯಾಗಿ ಪರಿವರ್ತನೆಯಾದ ಕಥೆಯು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹಿಂದಿನ ಜೀವನವನ್ನು ಮೀರಿ ಉತ್ತಮ ಭವಿಷ್ಯವನ್ನು ನಿರ್ಮಿಸಿಕೊಳ್ಳಬಹುದು ಎಂಬ ಸಂದೇಶವನ್ನು ನೀಡುತ್ತದೆ. ಈ ದಿನವು ಜ್ಞಾನ, ಧರ್ಮ ಮತ್ತು ಸತ್ಯದ ಬಗೆಗಿನ ಸಮರ್ಪಣೆಯ ಮೌಲ್ಯಗಳನ್ನು ಪ್ರೋತ್ಸಾಹಿಸುತ್ತದೆ. ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯದ ಇತಿಹಾಸದಲ್ಲಿ ಮಹರ್ಷಿ ವಾಲ್ಮೀಕಿಯವರ ಸ್ಥಾನ ಅತ್ಯುನ್ನತವಾದದ್ದು. ಒಬ್ಬ ವ್ಯಕ್ತಿ ಎಷ್ಟೇ ದೊಡ್ಡ ತಪ್ಪನ್ನು ಮಾಡಿದ್ದರೂ, ಪಶ್ಚಾತ್ತಾಪ ಮತ್ತು ಸನ್ಮಾರ್ಗದ ಮೂಲಕ ಮಹರ್ಷಿಯಾಗಬಹುದು ಎಂಬುದಕ್ಕೆ ವಾಲ್ಮೀಕಿಯವರ ಜೀವನವೇ ಜ್ವಲಂತ ಸಾಕ್ಷಿ. ಈ ದಿನದಂದು ಅವರ ವಿಚಾರಗಳನ್ನು ಸ್ಮರಿಸುವುದು, ಸಾಹಿತ್ಯ ಮತ್ತು ಜ್ಞಾನಕ್ಕೆ ಅವರು ನೀಡಿದ ಕೊಡುಗೆಯನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ವಾಲ್ಮೀಕಿಯವರ ಜೀವನ ಹಾಗೂ ಪ್ರಮುಖ ಅಂಶಗಳು

ವಾಲ್ಮೀಕಿಯವರು ಒಬ್ಬ ಶ್ರೇಷ್ಠ ಋಷಿ ಮತ್ತು ಸಂಸ್ಕೃತ ಕವಿ. ಹಿಂದೂ ಧರ್ಮದ ಮಹಾಕಾವ್ಯಗಳಲ್ಲಿ ಒಂದಾದ ರಾಮಾಯಣದ ಕರ್ತೃ (ಬರೆದವರು) ಇವರೇ. ಇವರು ಮೊಟ್ಟಮೊದಲ ಮಹಾಕಾವ್ಯವನ್ನು ರಚಿಸಿದ್ದರಿಂದ ಇವರನ್ನು ಆದಿಕವಿ ಎಂದು ಕರೆಯಲಾಗುತ್ತದೆ. ವಾಲ್ಮೀಕಿ ಋಷಿಯ ಜೀವನವು, ಒಬ್ಬ ಕ್ರೂರ ವ್ಯಕ್ತಿಯು ಮಹಾನ್ ಋಷಿಯಾಗಿ ಪರಿವರ್ತನೆಯಾದ ಪವಾಡ ಸದೃಶ. ಪ್ರಾಚೀನ ಕಾಲದಲ್ಲಿ, ರತ್ನಾಕರ ಎಂಬ ಹೆಸರಿನ ಒಬ್ಬ ಕ್ರೂರ ಬೇಡರ ನಾಯಕನಿದ್ದ. ಕಾಡಿನ ಮಾರ್ಗವಾಗಿ ಹೋಗುವ ಪ್ರಯಾಣಿಕರನ್ನು, ಋಷಿಗಳನ್ನು ಅಡ್ಡಗಟ್ಟಿ ದೋಚಿ, ಕೊಲೆ ಮಾಡುತ್ತಾ ತನ್ನ ಕುಟುಂಬವನ್ನು ಸಾಕುತ್ತಿದ್ದ.ಒಂದು ದಿನ, ಅದೇ ದಾರಿಯಲ್ಲಿ ನಾರದ ಮಹರ್ಷಿಗಳು ಬರುತ್ತಿದ್ದರು.

ರತ್ನಾಕರನು ನಾರದರನ್ನು ಅಡ್ಡಗಟ್ಟಿ, ಅವರಲ್ಲಿದ್ದ ವೀಣೆ ಮತ್ತು ವಸ್ತ್ರಗಳನ್ನು ಕಸಿದುಕೊಳ್ಳಲು ಮುಂದಾದ.ಆಗ ನಾರದರು ನಗುಮುಖದಿಂದ, ಏಕೆ ನೀನು ಈ ಪಾಪದ ಕೆಲಸ ಮಾಡುತ್ತಿರುವೆ? ಎಂದು ಕೇಳಿದರು. ಆಗ ರತ್ನಾಕರ ನನ್ನ ಹೆಂಡತಿ ಮಕ್ಕಳನ್ನು ಸಲಹಲು, ಅವರಿಗೆ ಊಟ ಒದಗಿಸಲು ಈ ಕೆಲಸ ಮಾಡುತ್ತಿದ್ದೇನೆ. ಎಂದ. ನಾರದರು ಸರಿ, ನಿನ್ನ ಕಷ್ಟದ ಸಂಪಾದನೆಯಲ್ಲಿ ಪಾಲು ಪಡೆಯುವ ನಿನ್ನ ಕುಟುಂಬದವರು, ನೀನು ಮಾಡುವ ಈ ಪಾಪದ ಭಾರದಲ್ಲಿಯೂ ಪಾಲುದಾರರಾಗುತ್ತಾರೆಯೇ? ಹೋಗಿ ಕೇಳಿ ಬಾ, ನೀನು ಬರುವವರೆಗೆ ನಾನು ಇಲ್ಲೇ ಇರುತ್ತೇನೆ. ಎಂದರು.ನಾರದರ ಮಾತಿನಿಂದ ಗೊಂದಲಕ್ಕೊಳಗಾದ ರತ್ನಾಕರನು ಮನೆಗೆ ಓಡಿದನು. ಅವನು ತನ್ನ ಹೆಂಡತಿ, ಮಕ್ಕಳು ಮತ್ತು ತಾಯಿಯನ್ನು ನಿಮಗಾಗಿ ನಾನು ಮಾಡುತ್ತಿರುವ ದರೋಡೆ ಮತ್ತು ಪಾಪದ ಕೆಲಸದಲ್ಲಿ ನೀವೂ ಪಾಲುದಾರರೇ? ಕೇಳಿದ. ಅವರೆಲ್ಲರೂ ತಲೆಬಾಗಿಸಿ, ಇಲ್ಲ! ನಿಮ್ಮ ಸಂಪಾದನೆಯಲ್ಲಿ ಪಾಲುದಾರರು, ಆದರೆ ನಿಮ್ಮ ಪಾಪ ನಿಮ್ಮದೇ. ಅದನ್ನು ನೀವೊಬ್ಬರೇ ಹೊರಬೇಕು, ಎಂದು ಉತ್ತರಿಸಿದರು.

ಈ ಉತ್ತರ ಕೇಳಿ ರತ್ನಾಕರನಿಗೆ ತೀವ್ರವಾದ ಆಘಾತವಾಯಿತು.

ಷ.ಬ್ರ.ಡಾ.ಅಭಿನವ ರಾಮಲಿಂಗ ಶ್ರೀ

ಹುಷಾರಿಲ್ಲ-ಹುಷಾರಿಲ್ಲ ಪ್ರಾಣಿಗೆ, ಕಾಳಜಿಯಿಲ್ಲ- ಇಲಾಖೆಗೆ!

'ಅಮ್ಮಾ...' ಎಂದು ಕರಳಿನಿಂದ ಚೀರಿದರೂ ಸಿಗಲಿಲ್ಲ ಸಣ್ಣದೊಂದು ಸಹಾಯ! ಕಾಯಂ ಪಶು ವೈದ್ಯರಿಲ್ಲ- ಮೂಕಪ್ರಾಣಿಗೆ ಸಾವು-ನೋವು

- ಇಲಿಯಾಸ್ ಪಟೇಲ್. ಬಳಗನೂರು ರಾಜ್ಯ ವಿಶೇಷವರದಗಾರರು
- ಉದಯವಾಹಿನಿ,ಯಾದಗಿರಿ/ಕೆಂಭಾವಿ :

ತನ್ನ ಹೊಟ್ಟೆ ಖಾಲಿಯಿದ್ದರೂ ಸರಿ, ಕೊಟ್ಟಿಗೆಯಲ್ಲಿ ಕಟ್ಟಿದ ದನಕರುಗಳ ಹೊಟ್ಟೆ ತುಂಬಿಸಿ, ಅವುಗಳ ಮುಖ ನೋಡಿ ದಿನದ ಆಯಾಸವೆಲ್ಲ ಮರೆಯುವವನು ನಮ್ಮ ನಾಡಿನ ರೈತ. ತನ್ನ ಸ್ವಂತ ಮಗುವಿಗಿಂತ ಹೆಚ್ಚಾಗಿ ಸಾಕಿ ಬೆಳೆಸಿದ ಆ ಮೂಕಪ್ರಾಣಿ ಅಸಹಾಯಕವಾಗಿ ಕಣ್ಣು ಮುಚ್ಚುತ್ತಿದ್ದರೆ, ಎಂತಹ ಕಲ್ಲುಮನಸ್ಸಿನ ಮನುಷ್ಯನ ಕಣ್ಣಲ್ಲೂ ನೀರು ಉಕ್ಕಿ ಹರಿಯುತ್ತದೆ. ಆದರೆ, ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಪ್ರಮುಖ ಕೇಂದ್ರ ಕೆಂಭಾವಿಯ ಪಶು ಆಸ್ಪತ್ರೆಯ ಅಧಿಕಾರಿಗಳಿಗೆ ಮಾತ್ರ ಈ ಅನ್ನದಾತನ ಎದೆಯೊಳಗಿನ ರಕ್ತಕಣ್ಣೀರು ಕಾಣಿಸುತ್ತಲೇ ಇಲ್ಲ!

ಇಲ್ಲಿ ಕಟ್ಟಡವಿದೆ, ಬೋರ್ಡ್ ಇದೆ... ಆದರೆ ಬಡ ರೈತನ ಕೂಗಿಗೆ ಸ್ಪಂದಿಸುವ ಒಂದೇ ಒಂದು ಜೀವಂತ ಹೃದಯ ಇಲ್ಲ! ಕಾಯಂ ವೈದ್ಯರಿಲ್ಲದೆ ಆಸ್ಪತ್ರೆ ಅನಾಥವಾಗಿ ಬಿದ್ದಿದ್ದರೆ, ಇತ್ತ ಕರ್ತವ್ಯ ಮರೆತ ಸಿಬ್ಬಂದಿಯ ಕ್ರೂರ ಬೇಜವಾಬ್ದಾರಿತನ ರೈತರ ಪಾಲಿಗೆ ಜೀವಂತ ಕಟುಕನಂತೆ ಪರಿಣಮಿಸಿದೆ.

'ಅಮ್ಮಾ...' ಎಂದು ಕರಳಿನಿಂದ ಚೀರಿದರೂ ಸಿಗಲಿಲ್ಲ ಸಣ್ಣದೊಂದು ಸಹಾಯ!
ರಾತ್ರಿ ವೇಳೆಯಲ್ಲಿ ಕತ್ತಲು ಕವಿದಾಗ ಜಾನುವಾರುಗಳಿಗೆ ಇದ್ದಕ್ಕಿದ್ದಂತೆ ತೀವ್ರ ಸ್ವರೂಪದ ಕಾಯಿಲೆ ಬಂದಾಗ ಅಥವಾ ಹೆರಿಗೆ ನೋವಿನಿಂದ ಆ ಮೂಕಜೀವ ನರಳಾಡಲು ಶುರುಮಾಡಿದಾಗ, ರೈತನಿಗೆ ಉಳಿದಿರುವುದು ಒಂದೇ ಭರವಸೆ ಅದುವೇ ಪಶು ಆಸ್ಪತ್ರೆ.

ಆದರೆ, ಕತ್ತಲ ರಾತ್ರಿಯಲ್ಲಿ ಆಸ್ಪತ್ರೆಯ ಸಿಬ್ಬಂದಿಗೆ ನೂರಾರು ಬಾರಿ ಫೋನ್ ಮಾಡಿದರೂ ಅಲ್ಲಿ ಬರುವುದು ಬರಿ 'ರಿಂಗ್' ಶಬ್ದ ಮಾತ್ರ. ಕಣ್ಣೆದುರೇ ಹೆರಿಗೆ ನೋವಿನಲ್ಲಿ ಜೀವ ಬಿಡಲು ತವಕಿಸುತ್ತಿರುವ ತಾಯಿ ಆಕಳನ್ನು ನೋಡಿ, ಫೋನ್ ಕೈಯಲ್ಲಿ ಹಿಡಿದು ಯಾರಾದರೂ ಬನ್ನಿಪ್ಪಾ, ನನ್ನ ಆಕಳು ಉಳಿಸಿಕೊಡಿ ಎಂದು ಅಳುತ್ತಾ ಬೇಡುವ ರೈತನ ಆರ್ತಕೂಗು ಆ ಸಿಬ್ಬಂದಿಯ ಕಿವಿಗೆ ಬೀಳಲೇ ಇಲ್ಲ! ಆಸ್ಪತ್ರೆಯ ಬಾಗಿಲು ಬಂದ್, ಸಿಬ್ಬಂದಿಯ ಫೋನ್ ಸ್ವಿಚ್ಡ್ ಆಫ್...

ಉದಯವಾಹಿನಿ ಚಿತ್ರ


ಉದಯವಾಹಿನಿ ಚಿತ್ರ

ಕೊನೆಗೆ ಕಣ್ಣೆದುರೇ ಮೂಕಪ್ರಾಣಿಯ ಉಸಿರು ನಿಂತಾಗ, ಆ ರೈತನ ಎದೆಯೊಳಗಿನ ಕರುಳು ಹರಿದು ಬಿದ್ದಂತೆ ಅನಿಸದೇ ಇನ್ನೇನು?

ಒಂದು ಮಾತ್ರೆಗೂ ಇಲ್ಲದ ಯೋಗ್ಯತೆ; ಖಾಸಗಿ ಮೆಡಿಕಲ್‌ಗಳ ಮುಂದೆ ಬಡವನ ಕೈ ಚೀಲ ಖಾಲಿ! ಕಷ್ಟಪಟ್ಟು, ಜಾನುವಾರನ್ನು ಹೇಗೋ ಆಸ್ಪತ್ರೆಗೆ ಹೊತ್ತುಕೊಂಡು ಹೋದರೂ ಅಲ್ಲಿ ರೈತನಿಗೆ ಕಾಯುತ್ತಿರುವುದು ಚಿಕಿತ್ಸೆಯಲ್ಲ... ಬದಲಿಗೆ ಕಟುಕತನದ ಉಡಾಫೆ!

ಆಸ್ಪತ್ರೆಯ ಒಳಗೆ ಹೋದರೆ ಗಾಯಕ್ಕೆ ಹಚ್ಚುವ ಸಣ್ಣ ಮುಲಾಮಿಲ್ಲ, ಜೀವ ರಕ್ಷಿಸುವ ಒಂದೇ ಒಂದು ಚುಚ್ಚುಮದ್ದೂ ಇಲ್ಲ! ಆಚೆ ಮೆಡಿಕಲ್‌ನಲ್ಲಿ ತಗೊಂಡು ಬನ್ನಿ ಎಂದು ಸಿಬ್ಬಂದಿ ಜಾರಿಕೊಳ್ಳುತ್ತಾರೆ. ಸಣ್ಣ ಸಣ್ಣ ಔಷಧಿಗಳಿಗೂ ಖಾಸಗಿ ಅಂಗಡಿಗಳಲ್ಲಿ ಸಾವಿರಾರು ರೂಪಾಯಿ ಸುರಿಯಬೇಕು. ಮಳೆಯಿಲ್ಲದೆ, ಬೆಳೆಯಿಲ್ಲದೆ ಈಗಾಗಲೇ ಸಾಲದ ಸುಳಿಯಲ್ಲಿ ಬಿದ್ದಿರುವ ಅನ್ನದಾತ, ತನ್ನ ಜೀವನಾಧಾರವಾದ ದನಕರುಗಳನ್ನು ಉಳಿಸಿಕೊಳ್ಳಲು ಹೆಂಡತಿಯ ತಾಲಿಯನ್ನೂ ಮಾರುವ ಸ್ಥಿತಿಗೆ ಬಂದು ತಲುಪಿದ್ದಾನೆ. ಪ್ರಾಣಿಯ ಜೀವ ಉಳಿಯುತ್ತೋ ಇಲ್ಲವೋ ಎಂಬ ಭಯ ಒಂದೆಡೆಯಾದರೆ, ಜೇಬು ಖಾಲಿಯಾಗಿ ಬೀದಿಗೆ ಬೀಳುವ ಭೀತಿ ಇನ್ನೊಂದೆಡೆ!

ವ್ಯವಸ್ಥೆಯೇ... ನಿನ್ನ ಮನಸ್ಸು ಇನ್ನೆಷ್ಟು ಕಲ್ಲಿನಂತಾಗಬೇಕು? ಕೆಂಭಾವಿ ಭಾಗದ ಸಾವಿರಾರು ರೈತರ ಕಣ್ಣೀರು ಇವತ್ತು ಪ್ರಶ್ನೆ ಮಾಡುತ್ತಿದೆ ? ನಮ್ಮ ಮೂಕಪ್ರಾಣಿಗಳಿಗೆ ಜೀವ ಇಲ್ಲವೇ? ಅವುಗಳ ಜೀವಕ್ಕೆ ಬೆಲೆ ಇಲ್ಲವೇ?

> ಸರ್ಕಾರಿ ಆಸ್ಪತ್ರೆ ಅಂತ ಹೆಸರಿಟ್ಟಿದ್ದೀರಲ್ಲ, ಹೊರಗಡೆ ಔಷಧಿ ಬರೆದುಕೊಡೋಕೆ ಇವರ್ಯಾಕೆ ಬೇಕು? ನಮ್ಮ ಕೈಯಲ್ಲಿ ಕಾಸಿಲ್ಲದೆ, ಸಾಕಿದ ಪ್ರಾಣಿನೂ ಉಳಿಸಿಕೊಳ್ಳಲಾಗದೆ ನಾವು ದಿನವೂ ಸಾಯ್ತಾ ಇದ್ದೀವಿ. ಈ ಆಸ್ಪತ್ರೆಗೆ ಬರೋದಕ್ಕಿಂತ ನಮ್ಮ ಪ್ರಾಣಿಗಳನ್ನು ನಾವೇ ಕಣ್ಣೀರಲ್ಲಿ ಹೂತುಹಾಕೋ ಸ್ಥಿತಿ ಬಂದಿದೆ. ಜಿಲ್ಲಾಧಿಕಾರಿಗಳು ತಕ್ಷಣ ಆಸ್ಪತ್ರೆಗೆ ಕಾಯಂ ವೈದ್ಯರನ್ನು ನೇಮಕ ಮಾಡಬೇಕು, ಸಿಬ್ಬಂದಿಗಳು ರೈತರ ಕರೆಗೆ ಸ್ಪಂದಿಸಬೇಕು ಮತ್ತು ತುರ್ತು ಸಮಯದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಚಿಕಿತ್ಸೆ ಕೊಡಬೇಕು.
> -ಹೆಸರು ಹೇಳಲು ಇಚ್ಛಿಸದ ಸ್ಥಳೀಯ ರೈತ

ಸಿಬ್ಬಂದಿಗಳ ಮೇಲೆ ಕ್ರಮಕೈಗೊಳ್ಳಿ : ರೈತರ ಕರೆಗಳನ್ನು ನಿರ್ಲಕ್ಷಿಸಿ, ಮೂಕಜೀವಿಗಳ ಸಾವಿಗೆ ಕಾರಣರಾಗುತ್ತಿರುವ ಕರ್ತವ್ಯ ಲೋಪ ಎಸಗಿದ ಸಿಬ್ಬಂದಿಗಳನ್ನು ಕ್ರಮ ಕೈಗೊಳ್ಳಬೇಕು.

ದಕ್ಷ ವೈದ್ಯರ ನಿಯೋಜನೆ: ಆಸ್ಪತ್ರೆಗೆ ಕೂಡಲೇ ಸಮರ್ಥ, ಕರುಣೆಯುಳ್ಳ ಕಾಯಂ ಪಶುವೈದ್ಯರನ್ನು ನೇಮಿಸಬೇಕು.

ಉಚಿತ ಔಷಧಿ ಖಾತರಿ: ಆಸ್ಪತ್ರೆಯ ಗೋದಾಮಿನಲ್ಲಿ ತುರ್ತು ಜೀವ ರಕ್ಷಕ ಔಷಧಗಳು ಸದಾ ಲಭ್ಯವಿರುವಂತೆ ನೋಡಿಕೊಳ್ಳಬೇಕು.

ಜಿಲ್ಲಾ ಪಶುಪಾಲನಾ ಇಲಾಖೆಯ ಉಪನಿರ್ದೇಶಕರು ಕೇವಲ ಕಚೇರಿಯಲ್ಲಿ ಕುಳಿತು ಆದೇಶ ಹೊರಡಿಸುವುದನ್ನು ಬಿಟ್ಟು, ತಕ್ಷಣ ಕೆಂಭಾವಿಯ ಈ ಅನಾಥ ಆಸ್ಪತ್ರೆಗೆ ಭೇಟಿ ನೀಡಬೇಕಿದೆ. ಅನ್ನದಾತನ ಎದೆಯೊಳಗಿನ ರಕ್ತಕಣ್ಣೀರನ್ನು ಒರೆಸುವ ಕೆಲಸ ತಕ್ಷಣವಾಗಬೇಕಿದೆ!

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಒಂದು ಕೋಟಿಗೆ ಹೆಚ್ಚಿಸುವ ಗುರಿ

- ಉದಯವಾಹಿನಿ, ಬೀದರ್:

'ನಾಡಿನ ಹಿರಿಯ ಸಾಹಿತಿಗಳು, ಕನ್ನಡಪರ ಸಂಘಟನೆಗಳ ಮುಖಂಡರು ಹಾಗೂ ಹಿತೈಷಿಗಳ ಒತ್ತಾಯದ ಮೇರೆಗೆ ಮುಂಬರುವ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದೇನೆ' ಎಂದು ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಘೋಷಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿರಿಯ ಸಾಹಿತಿ ಗೋ. ರು. ಚನ್ನಬಸಪ್ಪ ಸೇರಿದಂತೆ ಅನೇಕ ಸಾಹಿತಿಗಳು ಹಾಗೂ ಕನ್ನಡಪರ ಹೋರಾಟಗಾರರ ಪ್ರೀತಿಯ ಒತ್ತಾಯಕ್ಕೆ ಮಣಿದು ಚುನಾವಣಾ ಕಣಕ್ಕಿಳಿಯುತ್ತಿದ್ದೇನೆ. ಕನ್ನಡ ನಾಡು, ನುಡಿಯ ಸೇವೆಯೇ ನನ್ನ ಪ್ರಮುಖ ಉದ್ದೇಶ' ಎಂದು ತಿಳಿಸಿದರು.

'ಕನ್ನಡ ಸಾಹಿತ್ಯ ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತನ್ನಾಗಿ ರೂಪಿಸುವ ಆಶಯ ಹೊಂದಿದ್ದೇನೆ. ಪ್ರಸ್ತುತ ಸುಮಾರು 4 ಲಕ್ಷ ಇರುವ ಪರಿಷತ್ತಿನ ಸದಸ್ಯತ್ವವನ್ನು ಒಂದು ಕೋಟಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಯುವಕರು, ಮಹಿಳೆಯರು ಹಾಗೂ ಮಕ್ಕಳನ್ನು ಸಾಹಿತ್ಯ ಚಟುವಟಿಕೆಗಳತ್ತ ಆಕರ್ಷಿಸಲು ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುವುದು' ಎಂದರು.

ಉದಯವಾಹಿನಿ ಚಿತ್ರ

'ಪರಿಷತ್ತಿನ ವತಿಯಿಂದ ಪ್ರತಿ ತಿಂಗಳು ಸಾಹಿತ್ಯ ಸಂವಾದ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಅಪ್ರಕಟಿತ ವಿದ್ವಾಂಸರ ಕೃತಿಗಳ ಪ್ರಕಟಣೆಗೆ ಆದ್ಯತೆ ನೀಡಲಾಗುವುದು. ಸಾಹಿತ್ಯದ ಮೂಲಕ ಸಾಮರಸ್ಯ, ನೈತಿಕತೆ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸಲು ಪ್ರಯತ್ನಿಸಲಾಗುವುದು' ಎಂದು ಹೇಳಿದರು.

ಕನ್ನಡದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ: 'ಯುಪಿಎಸ್‌ಸಿ ಹಾಗೂ ಕೆಪಿಎಸ್‌ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡ ಮಾಧ್ಯಮದಲ್ಲಿ ಎದುರಿಸುವ ಅಭ್ಯರ್ಥಿಗಳಿಗೆ ಪರಿಷತ್ತಿನ ಮೂಲಕ ತರಬೇತಿ ನೀಡಲು ಉದ್ದೇಶಿಸಲಾಗಿದೆ.

ಜನವರಿಯೊಳಗೆ ಜಿಪಂ, ತಾಪಂ ಚುನಾವಣೆ: ಈಶ್ವರ ಖಂಡ್ರೆ

- ಉದಯವಾಹಿನಿ, ಶಿವಮೊಗ್ಗ:

ರಾಜ್ಯ ಸರ್ಕಾರ ಈಗಾಗಲೇ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿಯ ಅಧಿಸೂಚನೆ ಹೊರಡಿಸಿದ್ದು, ಮುಂದಿನ ಡಿಸೆಂಬರ್ ಅಂತ್ಯ ಅಥವಾ ಜನವರಿಯಲ್ಲಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಯುವ ಸಾಧ್ಯತೆ ಇದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿ.ಪಂ. ಮತ್ತು ತಾ.ಪಂ ಚುನಾವಣೆಯ ಮೀಸಲಾತಿಯ ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಲು ನ.19ರವರೆಗೆ ಅವಕಾಶವಿದೆ. ಆಕ್ಷೇಪಣೆಗಳ ಪರಿಶೀಲನೆಯ ಬಳಿಕ ಕರಡು ಅಧಿಸೂಚನೆ ಹೊರಡಿಸಲಾಗುವುದು. ನಂತರ ರಾಜ್ಯ ಚುನಾವಣೆ ಆಯೋಗ ಚುನಾವಣೆ ಪ್ರಕ್ರಿಯೆ ನಡೆಯಲಿದೆ ಎಂದು ವಿವರಿಸಿದರು. ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಬದ್ಧವಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಕುಡಿಯುವ ನೀರಿಗೆ ಹಣಕಾಸಿನ ಕೊರತೆ ಇಲ್ಲ: ಎಲ್ ನಿನೋ ಕಾರಣಕ್ಕೆ ರಾಜ್ಯದಲ್ಲಿ ಮಳೆಯ ಕೊರತೆ ಆಗಿದ್ದರೂ, ಗ್ರಾಮೀಣ ಕುಡಿಯುವ ನೀರಿನ ಪೂರೈಕೆಗೆ ಹಣಕಾಸಿನ ಕೊರತೆ ಇಲ್ಲ. ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಸಾಕಷ್ಟು ಹಣವಿದೆ ಎಂದು ಹೇಳಿದ ಈಶ್ವರ ಬಿ ಖಂಡ್ರೆ


ಉದಯವಾಹಿನಿ ಚಿತ್ರ

> ಯಾವುದೇ ಗ್ರಾಮದಲ್ಲಿ ಕೊಳವೆ ಬಾವಿ ಬತ್ತಿಹೋಗಿ, ಕುಡಿಯುವ ನೀರಿನ ಸಮಸ್ಯೆ ಆದರೆ, 24 ಗಂಟೆಯೊಳಗೆ ಪರ್ಯಾಯ ಜಲ ಮೂಲದಿಂದ ಹಾಗೂ ಟ್ಯಾಂಕರ್ ನಿಂದ ನೀರು ಪೂರೈಕೆ ಮಾಡಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

117 ಕೋಟಿ ಹಣವನ್ನು ಗ್ರಾಮೀಣ ಕುಡಿಯುವ ನೀರಿಗೆ ಬಿಡುಗಡೆ ಮಾಡಲಾಗಿತ್ತು. ಇದರ ಜೊತೆಗೆ ಮುಖ್ಯಮಂತ್ರಿಯವರು ಗ್ರಾಮೀಣ ಕುಡಿಯುವ ನೀರಿನ ಪೂರೈಕೆಗೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 1 ಕೋಟಿ ರೂ. ಬಿಡುಗಡೆ ಮಾಡಿದ್ದು, ಕುಡಿಯುವ ನೀರು ಪೂರೈಕೆಗೆ ಸದ್ಯ 306 ಕೋಟಿ ಲಭ್ಯವಿದೆ ಎಂದು ತಿಳಿಸಿದರು.

ಜಾನಪದ ಜೀವಂತಿಕೆಗೆ ಯುವಜನೋತ್ಸವಗಳು ಪೂರಕ

- ಉದಯವಾಹಿನಿ, ಕಲಬುರಗಿ :

ಇಂದಿನ ಯುವಕರು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗದೆ ದೇಸಿ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುವದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಆಡಳಿತ ಸರ್ಕಾರಗಳು ನಡೆಸುತ್ತಿರುವ ಯುವಜನೋತ್ಸವಗಳು ಜಾನಪದ ಸಂಸ್ಕೃತಿಯ ಜೀವಂತಿಕೆಗೆ ಪೂರಕವಾಗಿವೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಸುರೇಶ ಬಡಿಗೇರ ಹೇಳಿದರು.

ನಗರದ ಶರಣಬಸವೇಶ್ವರ ಕಲಾ ಮಹಾ ವಿದ್ಯಾಲಯದಲ್ಲಿ ಕಲಬುರ್ಗಿ ಜಿಲ್ಲಾ ಪಂಚಾಯತ ಯುವ ಸಬಲೀಕರಣ ಕ್ರೀಡಾ ಇಲಾಖೆ ಹಾಗೂ ಮೇರಾ ಯುವ ಭಾರತ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ ಕಲಬುರ್ಗಿ ಜಿಲ್ಲಾ ಮಟ್ಟದ ಯುವಜನೋತ್ಸವ-2026 ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಸುರೇಶ ನಂದಗಾವ ಅವರು, ಇಂದಿನ ವಿದ್ಯಾರ್ಥಿಗಳು ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು ಮತ್ತು ನಾಡು ನುಡಿ ರಕ್ಷಣೆಗಾಗಿ ಮುಂದೆ ಬರಬೇಕು ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಅಮೃತ ಅಷ್ಟಗಿ, ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತರಾದ ಪಿ ಆರ್ ಪಾಂಡು, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರಾದ ಸುಭಾಷ್ ವಗ್ಗನ್ಕರ, ಬಸವರಾಜ್ ತೋಟದ ಹಾಗೂ ಇಲಾಖೆಯ ಅಧಿಕಾರಿಗಳಾದ ಸಂಜಯ ಬಾಣದ, ರಾಜಕುಮಾರ, ಕ್ಷೀರಸಾಗರ ಯೋಗೇಂದ್ರ, ದೇಸಾಯಿ, ಪ್ರವೀಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ದುರಸ್ತಿ ಕಾಣದೇ ದುಃಸ್ಥಿತಿ ತಲುಪಿದ ಉಪನಾಲೆಗಳು

- ಉದಯವಾಹಿನಿ, ಕಡರನಾಯ್ಕನಹಳ್ಳಿ:

ಭದ್ರಾ ಅಚ್ಚುಕಟ್ಟು ಪ್ರದೇಶದ ಉಪನಾಲೆಗಳು ಹಲವು ವರ್ಷಗಳಿಂದ ಸೂಕ್ತ ನಿರ್ವಹಣೆ ಇಲ್ಲದೆ ಹಾಗೂ ದುರಸ್ತಿ ಕಾಣದೆ ಸಂಪೂರ್ಣ ಹಾನಿಗೊಳಗಾಗಿದ್ದು, ನೀರಾವರಿ ಆಶ್ರಿತ ಭೂಮಿಗಳ ರೈತರು ಸಂಕಷ್ಟ ಎದುರಿಸುವಂತಾಗಿದೆ.ಹಲವು ವರ್ಷಗಳಿಂದ ನಾಲೆಗಳ ತೂಬುಗಳು ಸಂಪೂರ್ಣ ಹಾನಿಗೊಳಗಾಗಿದ್ದು, ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ಕಿರುಗಾಲುವೆಗಳಿಗೆ ಸರಿಯಾಗಿ ನೀರು ಹರಿಯುತ್ತಿಲ್ಲ. ಇದರಿಂದಾಗಿ ಮೇಲ್ಭಾಗದ ರೈತರು ಅನಿವಾರ್ಯವಾಗಿ ನಾಲೆಯ ನೀರನ್ನು ಅಡ್ಡಗಟ್ಟಿ ಜಮೀನುಗಳಿಗೆ ಹಾಯಿಸಿಕೊಳ್ಳುತ್ತಿದ್ದಾರೆ. ಜಲಸಂಪನ್ಮೂಲ ಇಲಾಖೆ ಈ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದು,ಉಪನಾಲೆಗಳ ದುರಸ್ತಿಗೆ ಮುಂದಾಗಿಲ್ಲ ಎಂಬ ಆರೋಪಗಳು ಕೇಳಿಬಂದಿವೆ.

ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಬೇಕಾದರೆ ನಾಲೆಗಳ ಸಮಗ್ರ ದುರಸ್ತಿ ಕಾರ್ಯ ನಡೆಯಬೇಕು' ಎಂದು ಕೊಕ್ಕನೂರಿನ ರೈತರಾದ ಅಭಿನಂದನ್ ಪಾಟೀಲ್ ಒತ್ತಾಯಿಸಿದರು.

ನಾಯಕ ಸಮುದಾಯದ ಅಭಿವೃದ್ಧಿಗೆ ಶಿಕ್ಷಣವೇ ಅಸ್ತ್ರ

- ಉದಯವಾಹಿನಿ, ದಾವಣಗೆರೆ:

'ನಾಯಕ ಸಮುದಾಯ ಮತ್ತು ಮಾದಿಗ ಸಮುದಾಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ಎರಡೂ ಸಮುದಾಯಗಳು ಒಂದಾಗಿ, ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಮಾತ್ರ ಸಮಾಜದ ಒಟ್ಟಾರೆ ಅಭಿವೃದ್ಧಿ ಸಾಧ್ಯ' ಎಂದು ಸಚಿವ ಕೆ.ಎಸ್. ಬಸವಂತಪ್ಪ ಅಭಿಪ್ರಾಯಪಟ್ಟರು.

ವಾಲ್ಮೀಕಿ ಜಯಂತ್ಯುತ್ಸವದ ಅಂಗವಾಗಿ ನಗರದಲ್ಲಿ ಆಯೋಜಿಸಿದ್ದ ಬೈಕ್ ರ್ಯಾಲಿಗೆ ಚಾಲನೆ ನೀಡಿ ಮಾತನಾಡಿದರು. 'ಗ್ರಾಮೀಣ ಪ್ರದೇಶದಲ್ಲಿ ಈ ಎರಡೂ ಸಮುದಾಯಗಳು ಪ್ರಮುಖ ಪಾತ್ರ ವಹಿಸುತ್ತವೆ. ನಾಯಕರು ಊರನ್ನು ಕಾಯುವ ಕೆಲಸ ಮಾಡಿದರೆ, ಮಾದಿಗ ಸಮುದಾಯದವರು ಊರನ್ನು ಸ್ವಚ್ಛವಾಗಿಡುವ ಕೆಲಸ ಮಾಡುತ್ತಾರೆ. ಈ ಎರಡೂ ಸಮುದಾಯಗಳು ಗ್ರಾಮೀಣ ಪ್ರದೇಶದಲ್ಲಿ ಉತ್ತಮ


ಉದಯವಾಹಿನಿ ಚಿತ್ರ

ಕೆಲಸ ಮಾಡುತ್ತಾ ಎಲ್ಲರ ವಿಶ್ವಾಸ ಗಳಿಸಿವೆ. ಈ ಒಗ್ಗಟ್ಟು ಹೀಗೆಯೇ ಮುಂದುವರಿಯಬೇಕು. ನಾವು ಪರಸ್ಪರ ಸಹಕಾರದಿಂದ ಮುಂದೆ ಸಾಗಬೇಕು' ಎಂದು ಆಶಿಸಿದರು. 'ಸಮುದಾಯದ ಮಕ್ಕಳು ಉನ್ನತ ಅಧಿಕಾರಿಗಳಾಗಬೇಕು. ಸಮುದಾಯದವರು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದರೆ ಅದಕ್ಕೆ ಏಕೈಕ ಅಸ್ತ್ರ ಶಿಕ್ಷಣ. ಹೀಗಾಗಿ ಪೋಷಕರು ಮಕ್ಕಳ

> 'ಮೀಸಲಾತಿ ವಿಚಾರದಲ್ಲಿ ಎದುರಾಗಿರುವ ಕಾನೂನು ತೊಡಕುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ಗಂಭೀರ ಚಿಂತನೆ ನಡೆಸಿದ್ದಾರೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲೂ ಚರ್ಚೆಯಾಗಿದೆ.

ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು' ಎಂದು ಸಲಹೆ ನೀಡಿದರು. 'ಸಮುದಾಯದ ಏಳಿಗೆಯಲ್ಲಿ ಶಿಕ್ಷಣದ ಪಾತ್ರ ಬಹಳ ಮುಖ್ಯ. ಎಲ್ಲಿ ಶಿಕ್ಷಣ ಇರುತ್ತದೆಯೋ ಆ ಸಮುದಾಯ ತಾನಾಗಿಯೇ ಅಭಿವೃದ್ಧಿ ಹೊಂದುತ್ತದೆ.

ಆದ್ದರಿಂದ ಪ್ರತಿಯೊಬ್ಬರೂ ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿ ವಹಿಸಬೇಕು. ಏನೇ ಕಷ್ಟ ಬಂದರೂ, ಯಾವುದೇ ತ್ಯಾಗಕ್ಕೂ ಸಿದ್ಧರಾಗಿ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು' ಎಂದು ಹೇಳಿದರು.

ಮುಂಗಾರಿನಲ್ಲಿ ಬರದಿಂದಾಗಿ ರೂ 21 ಕೋಟಿಯಷ್ಟು ಬೆಳೆ ನಷ್ಟ!

- ಉದಯವಾಹಿನಿ ಮೊಳಕಾಲ್ಮುರು:

ಈ ಬಾರಿಯ ಮುಂಗಾರಿನಲ್ಲಿ ತಾಲ್ಲೂಕಿನಲ್ಲಿ ಬರದಿಂದಾಗಿ ಅಂದಾಜು 21 ಕೋಟಿಯಷ್ಟು ಬೆಳೆ ನಷ್ಟವಾಗಿದೆ ಎಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ.ಯಾವುದೇ ಶಾಶ್ವತ ನೀರಾವರಿ ಮೂಲಗಳಿಲ್ಲದ, ಮಳೆಯಾಶ್ರಿತವಾಗಿ ಒಂದು ಬೆಳೆ ಬೆಳೆಯುವ ಪದ್ಧತಿ ಇಲ್ಲಿದೆ. ಈ ಬೆಳೆಯೇ ಇಲ್ಲಿ ಜೀವನಕ್ಕೆ ಆಸರೆಯಾಗಿದ್ದು, ಈ ವರ್ಷ ಮಳೆ ಕೈಕೊಟ್ಟಿರುವುದರಿಂದ ಜನರ ಬದುಕು ಸಂಕಷ್ಟಕ್ಕೆ ಸಿಲುಕಿದ್ದರೆ, ಜಾನುವಾರುಗಳನ್ನು ಸಲುಹುವುದು ಹೇಗೆ ಎಂಬ ಚಿಂತೆ ರೈತರದ್ದಾಗಿದೆ.

'ಈ ಬಾರಿ ಮಳೆ ಸರಿಯಾಗಿ ಸುರಿಯದ್ದರಿಂದ ಮುಂಗಾರು ಬಿತ್ತನೆ ವ್ಯತ್ಯಾಸವಾಯಿತು. ಬಿತ್ತನೆ ನಂತರ ಒಮ್ಮೆಯೂ ಹದ ಮಳೆ ಬರಲಿಲ್ಲ. ಕಸಬಾ ಹೋಬಳಿಗೆ ಹೋಲಿಕೆ ಮಾಡಿದಲ್ಲಿ ದೇವಸಮುದ್ರ ಹೋಬಳಿಯಲ್ಲಿ ಇನ್ನೂ ಮಳೆ ಕಡಿಮೆ. ಅಲ್ಲಿ ಬೆಳೆ ಸರಿಯಾಗಿ ಹುಟ್ಟಲಿಲ್ಲ' ಎಂದು ಅಮಕುಂದಿಯ ರೈತ ಗೋವಿಂದಪ್ಪ ಮಾಹಿತಿ ಹೇಳಿದರು.

ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಕಳೆ ತೆಗೆಯುವ ತನಕ ಗಿಡಗಳು ಬೆಳವಣಿಗೆಯಾಗಿದ್ದವು. ನಂತರ ಮಳೆ ಬಾರದೇ ಪೂರ್ಣ ಒಣಗಿ ಹೋಗಿವೆ. ಮೇವಿಗೂ ಈ ವರ್ಷ ಸಂಕಷ್ಟ ಎದುರಾಗಿದೆ. ಬಹುತೇಕ ರೈತರು ಜಾನುವಾರುಗಳಿಗೆ ಮೇವು ಸಂಗ್ರಹಕ್ಕಾಗಿ ಕಷ್ಟಪಡುತ್ತಿದ್ದು, ನೆರೆಯ ಆಂಧ್ರದಲ್ಲಿ ನೀರಾವರಿಯಲ್ಲಿ ಬೆಳೆದಿರುವ ಶೇಂಗಾ, ಮೆಕ್ಕೆಜೋಳ, ಜೋಳದ ಸಪ್ಪೆಯನ್ನು ಕೊಳ್ಳುತ್ತಿದ್ದಾರೆ. ಈ ಮೇವು ದುಬಾರಿಯಾಗಿದ್ದರೂ ಕೊಳ್ಳುವುದು ಅನಿವಾರ್ಯವಾಗಿದೆ.

ಉದಯವಾಹಿನಿ ಚಿತ್ರ

> ಈಚೆಗೆ ಬಿಸಿಲಿನ ತಾಪ ಹೆಚ್ಚಾಗಿದ್ದು ಜಾನುವಾರುಗಳನ್ನು ಅರಣ್ಯ ಪ್ರದೇಶಕ್ಕೆ ಮೇಯಿಸಲು ಒಯ್ಯುವುದು ಕಷ್ಟವಾಗಿದೆ. ಅಲ್ಲಿ ಮೇವು, ನೀರಿನ ಲಭ್ಯತೆ ತೀವ್ರ ಕಡಿಮೆಯಾಗಿದೆ. -ಪಾಲಯ್ಯ, ಜಾನುವಾರು ಪಾಲಕ

21 ಕೋಟಿ ನಷ್ಟ: 'ತಾಲ್ಲೂಕಿನಲ್ಲಿ ಒಟ್ಟು 32,000 ಹೆಕ್ಟೇರ್ ಕೃಷಿ ಭೂಮಿ ಇದ್ದು, ಈ ವರ್ಷ 16,700 ಹೆಕ್ಟೇರ್‌ನಲ್ಲಿ ಶೇಂಗಾ, 2,420 ಹೆಕ್ಟೇರ್‌ನಲ್ಲಿ ತೊಗರಿ, 400 ಹೆಕ್ಟೇರ್‌ನಲ್ಲಿ ಹತ್ತಿ, 115 ಹೆಕ್ಟೇರ್‌ನಲ್ಲಿ ರಾಗಿ, 120 ಹೆಕ್ಟೇರ್‌ನಲ್ಲಿ ಹುರುಳಿ, 400 ಹೆಕ್ಟೇರ್‌ನಲ್ಲಿ ಔಡಲ, 215 ಹೆಕ್ಟೇರ್‌ನಲ್ಲಿ ನವಣೆ ಬಿತ್ತಲಾಗಿತ್ತು. ಬಹುತೇಕ ಬೆಳೆಗಳಲ್ಲಿ ಶೇ 50ಕ್ಕೂ ಹೆಚ್ಚು ನಷ್ಟವಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಮಾನದಂಡದಂತೆ ಅಂದಾಜು 21 ಕೋಟಿಯಷ್ಟು ನಷ್ಟವಾಗಿದೆ ಎಂದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ' ಎಂದು ಕೃಷಿ ಇಲಾಖೆ ತಾಲ್ಲೂಕು ಸಹಾಯಕ ನಿರ್ದೇಶಕ ಮಂಜುನಾಥ್ ಹೇಳಿದರು.

ವಕೀಲಿ ವೃತ್ತಿ ವ್ಯವಹಾರ ಆಗದಿರಲಿ ನ್ಯಾಯಮೂರ್ತಿ ಕಿವಿಮಾತು

ಉತ್ತಮ ನ್ಯಾಯವಾದಿಯಾಗಬೇಕಾದರೆ ಅಧ್ಯಯನಶೀಲತೆ ಪ್ರಮುಖ ಪಾತ್ರ ವಹಿಸುತ್ತದೆ. ಓದದೇ ಒಳ್ಳೆಯ ವಕೀಲರಾಗಲು ಸಾಧ್ಯವಿಲ್ಲ

- ಉದಯವಾಹಿನಿ, ಚಿತ್ರದುರ್ಗ:

'ವಕೀಲಿ ವೃತ್ತಿ ಎಂದಿಗೂ ವ್ಯವಹಾರ ಆಗಬಾರದು, ವ್ಯವಹಾರದಲ್ಲಿ ಲಾಭವೇ ಮೊದಲ ಆದ್ಯತೆಯಾಗಿರುತ್ತದೆ. ಲಾಭದ ದೃಷ್ಟಿಯಿಂದ ವಕೀಲಿ ವೃತ್ತಿ ಮಾಡಿದರೆ ಸಾರ್ವಜನಿಕರಿಗೆ ನ್ಯಾಯ ಕೊಡಿಸಲು ಸಾಧ್ಯವಾಗುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ ಕಿವಿಮಾತು ಹೇಳಿದರು.

1 : ಪರಿಶ್ರಮದಿಂದ ವೃತ್ತಿಪರವಾಗಿ ಹೆಜ್ಜೆ ಇಡಬೇಕು
2 : ಕಾಲ ಎಲ್ಲವೂ ಬೆರಳ ತುದಿಯಲ್ಲೇ ದೊರೆಯುತ್ತದೆ
3 : ಕೃತಕ ಬುದ್ಧಿಮತ್ತೆಯ ಸಹಾಯವೂ ದೊರೆಯುತ್ತದೆ

ನಗರದ ಕಮ್ಮರೆಡ್ಡಿ ಸಮುದಾಯ ಭವನದಲ್ಲಿ ನಡೆದ ಸರಸ್ವತಿ ಕಾನೂನು ಕಾಲೇಜಿನ ವಜ್ರ ಮಹೋತ್ಸವ, ಸ್ನಾತಕೋತ್ತರ ಕಾನೂನು ಪದವಿ ಕೋರ್ಸ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು. 'ವಕೀಲಿ ವೃತ್ತಿಯನ್ನು ಆಯ್ಕೆ ಮಾಡಿಕೊಂಡ ನಂತರ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು, ಉನ್ನತ ಮಟ್ಟದ ಜೀವನ ಶೈಲಿ ನಿರ್ವಹಣೆ ಮಾಡಬೇಕು ನಿಜ. ಹಾಗಂತ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳಬಾರದು. ಬಡಜನರಿಗೆ ಅನ್ಯಾಯವಾಗುವಂತಹ

ಉದಯವಾಹಿನಿ ಚಿತ್ರ

ಯಾವುದೇ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬಾರದು. ವಕೀಲಿ ವೃತ್ತಿ ಪ್ರತಿಷ್ಠಿತವಾದ ಕೆಲಸವಾಗಿದ್ದು ಸದಾ ಘನತೆಯನ್ನು ಕಾಯ್ದುಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ ಆಗಿರಬೇಕು' ಎಂದು ಹೇಳಿದರು. ''ಉತ್ತಮ ನ್ಯಾಯವಾದಿಯಾಗಬೇಕಾದರೆ ಅಧ್ಯಯನಶೀಲತೆ ಪ್ರಮುಖ ಪಾತ್ರ ವಹಿಸುತ್ತದೆ. ಓದದೇ ಒಳ್ಳೆಯ ವಕೀಲರಾಗಲು ಸಾಧ್ಯವಿಲ್ಲ. ಪರಿಶ್ರಮದಿಂದ ವೃತ್ತಿಪರವಾಗಿ ಹೆಜ್ಜೆ ಇಡಬೇಕು. ಇಂದಿನ ಆಧುನಿಕ ಕಾಲಘಟ್ಟದಲ್ಲಿ ಎಲ್ಲವೂ ಬೆರಳ ತುದಿಯಲ್ಲೇ ದೊರೆಯುತ್ತದೆ. ಪುಸ್ತಕ ಓದುವ ಜೊತೆಗೆ ಡಿಜಿಟಲ್ ರೂಪದಲ್ಲಿಯೂ ನಾವು ಅಧ್ಯಯನ ಮಾಡಬಹುದು. ಕೃತಕ ಬುದ್ಧಿ ಮತ್ತೆಯ ಸಹಾಯವೂ ದೊರೆಯುತ್ತದೆ. ಏನೇ ಆದರೂ ವಕೀಲರಿಗೆ ಓದು

> ವಕೀಲರು, ಕಾನೂನು ವಿದ್ಯಾರ್ಥಿಗಳು ಕೇವಲ ಕಾನೂನು ಪುಸ್ತಕಗಳಿಗಷ್ಟೇ ಸೀಮಿತವಾಗಬಾರದು. ಸಮಾಜದಲ್ಲಿ ವಿಶೇಷವಾದ ವ್ಯಕ್ತಿತ್ವ ರೂಪಿಸಿಕೊಳ್ಳಬೇಕಾದರೆ ಕತೆ, ಕವಿತೆ, ಕಾದಂಬರಿಗಳನ್ನೂ ಓದಬೇಕು' ಎಂದು ಸಲಹೆ ನೀಡಿದರು. -ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ

ಮಾತ್ರ ಇರಲೇಬೇಕು' ಎಂದು ಸಲಹೆ ನೀಡಿದರು.

'ನಮ್ಮ ವೃತ್ತಿ ನಗರಗಳಿಗೆ ಮಾತ್ರ ಸೀಮಿತವಾಗಬಾರದು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ನ್ಯಾಯಾಂಗ ವ್ಯವಸ್ಥೆಯ ಮೇಲೆ ಗೌರವ ಬರುವ ರೀತಿಯಲ್ಲಿ ವಕೀಲರು, ನ್ಯಾಯಾಧೀಶರು ನಡೆದುಕೊಳ್ಳಬೇಕು. ಈಗ ಕಾನೂನು ಸೇವಾ ಪ್ರಾಧಿಕಾರಗಳು ಇದ್ದು ಅವುಗಳ ಸಹಾಯದಿಂದ ಗ್ರಾಮೀಣ ಭಾಗದ ಜನರಿಗೂ ಕಾನೂನಿನ ಅರಿವು ಮೂಡಿಸುವ ನಿಟ್ಟಿನಲ್ಲಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು' ಎಂದರು.

'ಡಾ.ಬಿ.ಆರ್. ಅಂಬೇಡ್ಕರ್ ಅವರು ಶ್ರೇಷ್ಠ ಸಂವಿಧಾನ ನೀಡಿದ್ದಾರೆ. ಅವರು ಒಬ್ಬ ಶ್ರೇಷ್ಠ ಸಮಾಜ ಸುಧಾರಕರು, ದಕ್ಷ ತತ್ವಜ್ಞಾನಿಯೂ ಆಗಿದ್ದರು. ಅವರ ಕೊಡುಗೆಯಿಂದಾಗಿ ಪ್ರಸ್ತುತ ಸಮಾಜದ ವಿವಿಧ ಹಿನ್ನೆಲೆಗಳಿಂದ ಬಂದವರು ಒಂದೆಡೆ ಸೇರಲು

> ಗ್ರಾಮೀಣ ಪ್ರದೇಶದ ಕಾನೂನು ವಿದ್ಯಾರ್ಥಿಗಳು ಮುಂದೆ ಕಾನೂನು ಕ್ಷೇತ್ರದಲ್ಲಿ ನ್ಯಾಯಾಧೀಶರಾಗಲು ಸಂವಿಧಾನವೇ ಉತ್ತಮ ಅವಕಾಶ ಕಲ್ಪಿಸಿದೆ. ಆ ಮೂಲಕ ನ್ಯಾಯಾಂಗ ಇಲಾಖೆಯಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು' ಎಂದು ಹೇಳಿದರು.
> -ನ್ಯಾಯಮೂರ್ತಿ ಬಸವರಾಜ್

ಸಾಧ್ಯವಾಗಿದೆ. ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಕೇವಲ ಸಂವಿಧಾನದ ಶಿಲ್ಪಿಯೆಂದು ಸೀಮಿತಗೊಳಿಸಬಾರದು, ಅವರೊಬ್ಬ ಮಾನವತಾವಾದಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು. ಹೈಕೋರ್ಟ್ ನ್ಯಾಯಮೂರ್ತಿ ಸುನೀಲ್‌ದತ್ ಯಾದವ್ ಮಾತನಾಡಿ, 'ಶಿಕ್ಷಣವು ಸಮಾಜವನ್ನು ಪರಿವರ್ತಿಸುವ ಏಕೈಕ ಶಕ್ತಿಯಾಗಿದೆ. ಸಣ್ಣ ಸಮುದಾಯಗಳಿಂದ ಬರುವ ವಿದ್ಯಾರ್ಥಿಗಳು ಕೂಡ ಉನ್ನತ ಹುದ್ದೆಗಳನ್ನು ಅಲಂಕರಿಸಬಹುದು. ಕಾನೂನು ವಿದ್ಯಾರ್ಥಿಗಳು ಮತ್ತು ವಕೀಲರು ಕೇವಲ ಹಣ ಸಂಪಾದನೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳದೇ ಬಡವರು ಹಾಗೂ ಅಂಚಿನಲ್ಲಿರುವ ಜನರ ಪರವಾಗಿ ನಿಲ್ಲಬೇಕು. ಬಿ.ಆರ್.ಅಂಬೇಡ್ಕರ್ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದರು.

ಮಿನಿ ನ್ಯೂಸ್

ದುರ್ಗಾಪರಮೇಶ್ವರಿ ದೇವಿ ಮೆರವಣಿಗೆ

ಉದಯವಾಹಿನಿ ಚಿತ್ರ

- ಉದಯವಾಹಿನಿ, ವಿಜಯಪುರ, :

ವಿಜಯಪುರ ಪಟ್ಟಣದ ಕೋಲಾರ ರಸ್ತೆಯಲ್ಲಿರುವ ಆನಂದನಗರದ ಬಸಮುರಿ ವಿಜಯ ವಿನಾಯಕ ಸ್ವಾಮಿ ಸೇವಾ ಸಮಿತಿಯ ವತಿಯಿಂದ ಆಯೋಜಿಸಲಾಗಿದ್ದ 12ನೇ ವರ್ಷದ ಶರನ್ನವರಾತ್ರಿ ಮಹೋತ್ಸವ ಹಾಗೂ ಅಷ್ಟಭುಜಾ ದುರ್ಗಾಪರಮೇಶ್ವರಿ ದೇವಿ ಪ್ರತಿಷ್ಠಾಪನಾ ಮಹೋತ್ಸವವು ಅತ್ಯಂತ ಶ್ರದ್ಧಾ-ಭಕ್ತಿ ಹಾಗೂ ಸಂಭ್ರಮದಿಂದ ಸಂಪನ್ನಗೊಂಡಿತು. ಅಕ್ಟೋಬರ್ 11 ರಿಂದ 24ರವರೆಗೆ ನಡೆದ ಈ ಧಾರ್ಮಿಕ ಮಹೋತ್ಸವದಲ್ಲಿ ಪ್ರಧಾನ ಅರ್ಚಕರಾದ ಅನಂತ್ ಕುಮಾರ್ ಭಟ್ ಹಾಗೂ ನಾಗೇಶ್ ಕುಮಾರ್ ಅವರ ನೇತೃತ್ವದಲ್ಲಿ ವಿವಿಧ ಹೋಮ-ಹವನಗಳು, ವಿಶೇಷ ಪೂಜಾ ಕೈಂಕರ್ಯಗಳು ಹಾಗೂ ಅಲಂಕಾರ ಸೇವೆಗಳು ನೆರವೇರಿದವು. ಪುಷ್ಪಾಲಂಕೃತ ವಿಶೇಷ ವಾಹನದಲ್ಲಿ ಶ್ರೀ ಅಷ್ಟಭುಜಾ ದುರ್ಗಾಪರಮೇಶ್ವರಿ ದೇವಿಯ ಪ್ರಮುಖ ಬೀದಿ ಉತ್ಸವ ಹಾಗೂ ಮೆರವಣಿಗೆಯು ವೈಭವದಿಂದ ಜರುಗಿತು. ನೂರಾರು ಭಕ್ತಾದಿಗಳು ಮಂಗಳವಾದ್ಯಗಳು ಹಾಗೂ ದೇವಿಯ ನಾಮಸ್ಮರಣೆಯೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡು ಕೃತಾರ್ಥರಾದರು. ನಂತರ ಶನಿವಾರದಂದು ಸಮೀಪದ ಚನ್ನರಾಯಪಟ್ಟಣ ಕೆರೆಯಲ್ಲಿ ಮಹಾಮಂಗಳಾರತಿ ನೆರವೇರಿಸಿ, ಶಾಸ್ತ್ರೋಕ್ತವಾಗಿ ಅಮ್ಮನವರ ವಿಗ್ರಹವನ್ನು ವಿಸರ್ಜಿಸಲಾಯಿತು. ಈ ಸಮಾರಂಭದಲ್ಲಿ ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಹಾಗೂ ಅಪಾರ ಸಂಖ್ಯೆಯ ಸ್ಥಳೀಯ ಭಕ್ತಾದಿಗಳು ಉಪಸ್ಥಿತರಿದ್ದರು.

ವಾಡಿ ರೈಲು ನಿಲ್ದಾಣದ ಅಭಿವೃದ್ಧಿಗೆ ಆಗ್ರಹ

- ಉದಯವಾಹಿನಿ, ವಾಡಿ:

ಇಲ್ಲಿನ ರೈಲು ನಿಲ್ದಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಮೇಲ್ಸೇತುವೆ ನಿರ್ಮಿಸಬೇಕು ಎಂದು ಒತ್ತಾಯಿಸಿ ಸ್ಥಳೀಯ ಬಿಜೆಪಿ ಮುಖಂಡರು ಸೊಲ್ಲಾಪುರ ವಿಭಾಗದ ರೈಲ್ವೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.ಪಟ್ಟಣದ ರೈಲು ನಿಲ್ದಾಣಕ್ಕೆ ಭೇಟಿ ನೀಡಿದ 'ಜನಸಂವಾದ'ದ ಮುಖ್ಯಸ್ಥ ಡಿ.ಎನ್. ಸೌರಭ್ ಹಾಗೂ ಸ್ಟೇಷನ್ ಪ್ರಬಂಧಕ ಸಿ.ಎಚ್. ರಾಮಕೃಷ್ಣ ಅವರನ್ನು ಭೇಟಿಯಾದ ಬಿಜೆಪಿ ಅಧ್ಯಕ್ಷ ವೀರಣ್ಣ ಯಾರಿ ಹಾಗೂ ಮುಖಂಡರು, ನಿಲ್ದಾಣದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಮನವಿ ಮಾಡಿದರು.

ವಾಡಿ ರೈಲು ನಿಲ್ದಾಣ ಮತ್ತು ಸುತ್ತಮುತ್ತಲಿನ ರೈಲ್ವೆ ಗೇಟ್‌ಗಳಿಂದಾಗಿ ನಿತ್ಯ ಸಾವಿರಾರು ಸಾರ್ವಜನಿಕರು ಹಾಗೂ ಪ್ರಯಾಣಿಕರು ತೀವ್ರ ಸಂಚಾರ ಸಂಕಷ್ಟ ಎದುರಿಸುತ್ತಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಮೇಲ್ಸೇತುವೆ ನಿರ್ಮಿಸಬೇಕು ಎಂದು ಆಗ್ರಹಿಸಿದರು. ಅಲ್ಲದೆ, ಕಳೆದ ಹಲವು ವರ್ಷಗಳಿಂದ ನಿಲ್ದಾಣದಲ್ಲಿ ಪ್ರಯಾಣಿಕರು ಎದುರಿಸುತ್ತಿರುವ ಕುಡಿಯುವ ನೀರು, ಶೌಚಾಲಯ ಸೇರಿದಂತೆ ವಿವಿಧ ಅನಾನುಕೂಲಗಳ ಬಗ್ಗೆ ವಿವರಿಸಿದ ಅವರು ಶೀಘ್ರವೇ ಸಮಸ್ಯೆ ಬಗೆಹರಿಸುವಂತೆ ನಿಯೋಗ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ರವಿ ನಾಯಕ, ತಾಲ್ಲೂಕು

ಉದಯವಾಹಿನಿ ಚಿತ್ರ

ಕಾರ್ಯದರ್ಶಿ ಕಿಶನ್ ಜಾಧವ್, ಯುವ ಮೋರ್ಚಾ ಅಧ್ಯಕ್ಷ ಭಾಗಣ್ಣ ದೊರೆ, ಮಹಾತ್ಮ ಗಾಂಧಿ ಶಾಲೆಯ ಮುಖ್ಯಸ್ಥ ಅನ್ವರ್ ಸರ್, ಪ್ರಮುಖ ಮುಖಂಡರಾದ ಗಿರಿಮಲ್ಲಪ್ಪ ಕಟ್ಟಿಮನಿ, ಅಂಬದಾಸ ಜಾಧವ್, ಗಣಪತರಾವ್ ಸುತ್ರಾವೆ ಹಾಗೂ ಸತೀಶ ಸಾವಳಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

'ಕಿಸಾರ್' 11ನೇ ವಾರ್ಷಿಕ ಸಮ್ಮೇಳನ ಹುಬ್ಬಳ್ಳಿಯಲ್ಲಿ ಪ್ರಾರಂಭ

- ಉದಯವಾಹಿನಿ ಹುಬ್ಬಳ್ಳಿ:

ಸಂತಾನೋತ್ಪತ್ತಿ ಚಿಕಿತ್ಸಾ ಕ್ಷೇತ್ರದಲ್ಲಿ ಜ್ಞಾನ ವಿನಿಮಯ, ಸಹಯೋಗ ಹಾಗೂ ಸಮಗ್ರ ಆರೈಕೆಗೆ ಉತ್ತೇಜನ ನೀಡುವ ಉದ್ದೇಶದಿಂದ, ಭಾರತೀಯ ಸಹಾಯಕ ಸಂತಾನೋತ್ಪತ್ತಿ ಸಂಘದ ಕರ್ನಾಟಕ ಘಟಕ (ಕಿಸಾರ್)ದ 11ನೇ ವಾರ್ಷಿಕ ಸಮ್ಮೇಳನ ನಗರದ ಡೆನಿಸನ್ಸ್ ಹೋಟೆಲ್‌ನಲ್ಲಿ ಆರಂಭವಾಯಿತು. ಪ್ರಸ್ತುತ ವರ್ಷದ ಸಮ್ಮೇಳನ 'ಸಂತಾನೋತ್ಪತ್ತಿ ಆರೈಕೆಯಲ್ಲಿ ಒಗ್ಗಟ್ಟು: ಸಮಗ್ರ ಸೇವೆ, ಹಂಚಿಕೊಂಡ ಕನಸುಗಳು' ಧ್ಯೇಯವಾಕ್ಯದಲ್ಲಿ ನಡೆಯುತ್ತಿದ್ದು, ಸಂತಾನೋತ್ಪತ್ತಿ ಚಿಕಿತ್ಸಾ ಕ್ಷೇತ್ರದಲ್ಲಿ ಎಲ್ಲರನ್ನೂ ಒಳಗೊಳ್ಳುವ ಆರೈಕೆ, ಪರಸ್ಪರ ಸಹಕಾರ ಮತ್ತು ವೈದ್ಯಕೀಯ ಜ್ಞಾನದ ಹಂಚಿಕೆಗೆ ಮಹತ್ವ ನೀಡಿದೆ. ಟ್ರಾವೆಕ್ಸೆಲ್ ಇಂಡಿಯಾ ಪ್ರೈವೇಟ್ ಲಿ. ಕಾರ್ಯಕ್ರಮ ನಿರ್ವಹಿಸುತ್ತಿದೆ. ಭಾನುವಾರ ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ.

ರಾಜ್ಯದ ವಿವಿಧ ಭಾಗಗಳಿಂದ 400ಕ್ಕೂ ಹೆಚ್ಚು ಸ್ತ್ರೀರೋಗ ತಜ್ಞರು ಹಾಗೂ ಸಂತಾನೋತ್ಪತ್ತಿ ಮತ್ತು ಬಂಜೆತನ ನಿವಾರಣಾ ತಜ್ಞರು ಪಾಲ್ಗೊಂಡಿದ್ದರು. ವಿವಿಧ ಗೋಷ್ಠಿಯಲ್ಲಿ ಭಾಗಿಯಾಗಿ ಮಾಹಿತಿ ವಿನಿಮಯ ಮಾಡಿಕೊಂಡರು. ವಿವಿಧ ಆಸ್ಪತ್ರೆಗಳ, ಆಧುನಿಕ ಯಂತ್ರೋಪಕರಣ ಮಾಹಿತಿ ನೀಡುವ 38 ಮಳಿಗೆಗಳನ್ನು ಹಾಕಲಾಗಿದೆ.ಇದೇ ವೇಳೆ ಕಿರಿಯ ವೈದ್ಯರಿಗೆ ವೈದ್ಯಕೀಯ ಉಪಕರಣಗಳ ಕುರಿತು ತರಬೇತಿ ಕಾರ್ಯಾಗಾರ ನಡೆಯಿತು.

ಅಳ್ನಾವರ ಜಂಕ್ಷನ್‌ನಲ್ಲಿ ಆಹಾರ ಮಳಿಗೆ ಸ್ಥಾಪನೆಗೆ ಮನವಿ

- ಉದಯವಾಹಿನಿ ಅಳ್ನಾವರ:

ಉದಯವಾಹಿನಿ ಚಿತ್ರ

ದೇಶದಾದ್ಯಂತ 7,000ಕ್ಕೂ ಹೆಚ್ಚು ರೈಲು ನಿಲ್ದಾಣಗಳಲ್ಲಿ ಹಮ್ಮಿಕೊಂಡ ರೈಲ್ ಸಂವಾದ-ವಿಶೇಷ ಅಭಿಯಾನ್ 6.0 ಅಂಗವಾಗಿ ನೈಋತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದ ವತಿಯಿಂದ ಅಳ್ನಾವರ ಜಂಕ್ಷನ್‌ನಲ್ಲಿ ಸಾರ್ವಜನಿಕರೊಂದಿಗೆ ಸಂವಾದ ನಡೆಯಿತು.ಹಲವು ಪ್ರಯಾಣಿಕರು ಮಾತನಾಡಿ, ಇಲ್ಲಿನ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿದೆ. ಪ್ಲಾಟ್‌ಫಾರ್ಮ್‌ಗಳಲ್ಲಿ ಆಹಾರ ಮಳಿಗೆಗಳು ಇಲ್ಲದಿರುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ ಎಂಬ ಸಮಸ್ಯೆಯನ್ನು ಗಮನಕ್ಕೆ ತಂದರು. ರೈಲಿಗಾಗಿ ಕಾಯುವ ಪ್ರಯಾಣಿಕರಿಗೆ ಚಹಾ, ತಿಂಡಿ ಹಾಗೂ ಇತರ ಆಹಾರ ಪದಾರ್ಥಗಳು ಸುಲಭವಾಗಿ ದೊರೆಯುವಂತೆ ಪ್ಲಾಟ್ ಫಾರ್ಮ್‌ನಲ್ಲಿ ಆಹಾರ ಮಳಿಗೆ ವ್ಯವಸ್ಥೆ ಕಲ್ಪಿಸಿ ಎಂದು ಮನವಿ ಮಾಡಿದರು. ನೈಋತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದ ಹಿರಿಯ ವಿಭಾಗೀಯ ವೈದ್ಯಾಧಿಕಾರಿ ಡಾ. ಕವಿರಾಜ ಕೊಟ್ಟೂರ ಮಾತನಾಡಿ, ಪ್ರಯಾಣಿಕರಿಗೆ ಉತ್ತಮ ಸೇವೆ ಒದಗಿಸುವುದು ಮತ್ತು ಅವರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದು ನಮ್ಮ ಆದ್ಯತೆಯಾಗಿದೆ ಎಂದು ತಿಳಿಸಿದರು.

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	07:30 ರಿಂದ 09:00
ಗುಳಿಕ ಕಾಲ	ಮಧ್ಯಾಹ್ನ	01:30 ರಿಂದ 03:00
ಯಮಗಂಡ ಕಾಲ	ಬೆಳಿಗ್ಗೆ	10:30 ರಿಂದ 12:00

ಮೇಷ: ಹಲ್ಲುನೋವು ಅಥವಾ ಹೊಟ್ಟೆ ಹಾಳಾಗುವಿಕೆ ನಿಮಗೆ ಕೆಲವು ಸಮಸ್ಯೆಗಳನ್ನು ತರಬಹುದು. ತಕ್ಷಣ ಪರಿಹಾರ ಪಡೆಯಲು ವೈದ್ಯರ ಸಲಹೆ ಪಡೆಯಿರಿ. ಯಾವುದೇ ಆಪ್ತ ಸಂಬಂಧಿಕರ ಬೆಂಬಲದಿಂದ ನೀವು ನಿಮ್ಮ ವ್ಯಾಪಾರದಲ್ಲಿ ಉತ್ತಮವಾಗಿ ಮಾಡಬಹುದು. ಇದು ನಿಮಗೆ ಆರ್ಥಿಕ ಲಾಭವನ್ನು ನೀಡುತ್ತದೆ.

ವೃಷಭ: ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ,ಆನಂದ. ತರಾತುರಿಯಲ್ಲಿ ಹೂಡಿಕೆಗಳನ್ನು ಮಾಡಬೇಡಿ ನೀವು ಎಲ್ಲಾ ಸಾಧ್ಯವಿರುವ ಕೋನಗಳಿಂದ ಹೂಡಿಕೆಯನ್ನು ಪರಿಶೀಲಿಸದೇ ಹೋದರೆ ನಷ್ಟ ಖಚಿತ.

ಮಿಥುನ: ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಜೀವನ ಸಂಗಾತಿಯೊಂದಿಗೆ ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಜಗಳವಾಗುವ ಸಾಧ್ಯತೆ ಇದೆ.

ಕಟಕ: ಸ್ನಾಯುಗಳಿಗೆ ಆರಾಮ ನೀಡಲು ನಿಮ್ಮ ದೇಹವನ್ನು ತೈಲದಿಂದ ಮಸಾಜ್ ಮಾಡಿ ನಿಮಗೆ ಆಕರ್ಷಕವಾಗಿ ತೋರುವ ಯಾವುದೇ ಹೂಡಿಕೆಯ ಯೋಜನೆಯ ಬಗ್ಗೆ ಹೆಚ್ಚು ಕಂಡುಹಿಡಿಯಲು ಮೇಲ್ಮೈಗಿಂತ ಕೆಳಗೆ ಆಳವಾಗಿ ಕೆದಕಿ. ಯಾವುದೇ ಪ್ರಮಾಣ ಮಾಡುವ ಮೊದಲು ತಜ್ಞರನ್ನು ಸಂಪರ್ಕಿಸಿ.

ಸಿಂಹ: ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಕೆಲವು ಸಾಮಾಜಿಕ ಸಮಾರಂಭಗಳಿಗೆ ಹಾಜರಾಗಿ.

ಕನ್ಯಾ: ಖಿನ್ನತೆಯನ್ನು ಹೊಡೆದೋಡಿಸಿ ? ಇದ ನಿಮ್ಮನ್ನು ಆವರಿಸಿಕೊಳ್ಳುತ್ತಿದೆ ಮತ್ತು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತಿದೆ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ಕಲ್ಪನೆಗಳ ಹಿಂದೆ ಓಡಬೇಡಿ ಹಾಗೂ ಸಾಧ್ಯವಾದಷ್ಟೂ ವಾಸ್ತವವಾದಿಗಳಾಗಿರಿ. ನಿಮ್ಮ ಸ್ನೇಹಿತರ ಜೊತೆ ಸಮಯ ಕಳೆಯಿರಿ.

ತುಲಾ: ನೀವು ಭಯವೆಂಬ ದೈತ್ಯನ ಜೊತೆ ಹೋರಾಡಲು ಸಿದ್ಧವಾಗುತ್ತಿದ್ದ ಹಾಗೆ ನಿಮ್ಮ ಆಲೋಚನೆಗಳನ್ನು ಸಕಾರಾತ್ಮಕವಾಗಿ ರೂಪಿಸಿಕೊಳ್ಳಿ. ಇಲ್ಲದಿದ್ದಲ್ಲಿ ನೀವು ಈ ರಾಕ್ಷಸನಿಗೆ ಒಬ್ಬ ಜಡ ಮತ್ತು ನಿಷ್ಕರುಣೆಯ ಬಲಿಯಾಗುತ್ತೀರಿ. ಉದ್ಯೋಗಕ್ಕೆ ಸಂಬಂಧಿಸಿರುವ ಜನರಿಗೆ ಇಂದು ಹಣದ ಬಹಳಷ್ಟು ಅಗತ್ಯವಿರುತ್ತದೆ.

ವೃಶ್ಚಿಕ: ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು. ಸಂಬಂಧಿಗಳಿದ್ದಲ್ಲಿ ಸಣ್ಣ ಪ್ರಯಾಣ ನಿಮ್ಮ ದೈನಂದಿನ ಒತ್ತಡದ ಜೀವನದಿಂದ ನಿಮಗೆ ಸುಖ ಮತ್ತು ವಿಶ್ರಾಂತಿಯನ್ನು ತರುತ್ತದೆ.

ಧನಸ್ಸು: ಊಟ ನಿಮ್ಮನ್ನು ಒಂದು ಶಾಂತ ಮತ್ತು ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ನಿಮ್ಮ ಸೃಜನಶೀಲ ಪ್ರತಿಭೆಯನ್ನು ಸರಿಯಾಗಿ ಬಳಸಿದಲ್ಲಿ ಅದು ಅತ್ಯಂತ ಲಾಭದಾಯಕವೆಂದು ಸಾಬೀತಾಗಬಹುದು. ಸ್ನೇಹಿತರು ನಿಮ್ಮ ವೈಯಕ್ತಿಕ ಜೀವನದಲ್ಲಿ ಅಗತ್ಯಕ್ಕಿಂತಲೂ ಹೆಚ್ಚು ಹಸ್ತಕ್ಷೇಪ ಮಾಡುತ್ತಾರೆ.

ಮಕರ: ನೀವು ನಿಮ್ಮ ಜೀವನವನ್ನು ಮರಗಳಂತೆ ಮಾಡಿಕೊಳ್ಳುತ್ತೀರಿ–ಅವುಗಳು ತಾವು ಸೂರ್ಯನಡಿ ನಿಂತು ಶಾಖದ ಬೇಗೆ ತಡೆದುಕೊಂಡು ಇತರರಿಗೆ ನೆರಳು ನೀಡುತ್ತವೆ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

ಕುಂಭ: ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಇಂದು ಹಣದ ತುಂಬಾ ಅಗತ್ಯವಿರಬಹುದು ಮತ್ತು ಜೀವನದಲ್ಲಿ ಹಣದ ಏನು ಮೌಲ್ಯವಿದೆ ಎಂದು ನಿಮಗೆ ಅರ್ಥವಾಗಬಹುದು. ಇತ್ತೀಚೆಗೆ ನಿಮ್ಮ ವೈಯಕ್ತಿಕ ಜೀವನ ನಿಮ್ಮ ಗಮನದ ಕೇಂದ್ರಬಿಂದುವಾಗಿದೆ.

ಮೀನ: ನಿಮ್ಮ ವಿಶ್ವಾಸ ಮತ್ತು ಚೈತನ್ಯ ಇಂದು ಅಧಿಕವಾಗಿರುತ್ತದೆ. ನಿಮ್ಮ ಹಿಂದಿನ ಸಾಲವನ್ನು ಇಂದಿನ ವರೆಗೂ ಮರುಪಾವತಿ ಮಾಡದೇ ಇರುವ ನಿಮ್ಮ ಸಂಬಂಧಿಕರಿಗೆ ಇಂದು ಸಾಲ ಕೊಡಬಾರದು. ಜನರು ನಿಮಗೆ ಹೊಸ ಭರವಸೆ ಕನಸುಗಳನ್ನು ನೀಡುತ್ತಾರೆ ಇದು ನಿಮ್ಮ ಸ್ವಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

ಶೃಂಗೇರಿಯಲ್ಲಿ ಆರೂಢಭಾರತೀ ಶ್ರೀಗಳಿಗೆ ತಡೆ.

• **ಉದಯವಾಹಿನಿ, ಶೃಂಗೇರಿ**

ಉದಯವಾಹಿನಿ ಚಿತ್ರ

ಶ್ರೀಗಳ ಭೇಟಿಗೆ ಆಗಮಿಸಿದ ಸಿದ್ಧಾರೂಢ ಮಿಷನ್ ಅಧ್ಯಕ್ಷ ಡಾ ಆರೂಢಭಾರತೀ ಸ್ವಾಮೀಜಿಯವರ ಪ್ರವೇಶ ತಡೆದ ಪ್ರಸಂಗ ನಡೆದಿದೆ. ನಿನ್ನೆ ಶುಕ್ರವಾರ ಸಂಜೆ ಈ ಘಟನೆ ಜರುಗಿದೆ. ಮಠದ ಸಂಪ್ರದಾಯದಂತೆ ಅಂಗಿಯನ್ನು ಕಳಚುವಂತೆ ಕಾವಲುಗಾರ ಸ್ವಾಮೀಜಿಯವರಿಗೆ ಒರಟಾಗಿ ಹೇಳಿದ್ದಾನೆ. ಸ್ವಾಮೀಜಿ ಒಪ್ಪದಿದ್ದಾಗ ಪ್ರವೇಶ ತಡೆದಿದ್ದಾನೆ. ಆಗ ಒಳಗಡೆ ಕೆಲಸಗಾರ ಅಂಗಿಯನ್ನು ಧರಿಸಿಯೇ ಕೆಲಸ ಮಾಡುತ್ತಿರುವುದು ಸ್ವಾಮೀಜಿಯ ಕಣ್ಣಿಗೆ ಬಿದ್ದಿದೆ. ಅದನ್ನು ಕಾವಲುಗಾರನಿಗೆ ತೋರಿಸಿ ಆತನ ಅಂಗಿ ಬಿಚ್ಚಿಸು ಎಂದಿದ್ದಾರೆ. ಆದರೆ ಕಾವಲುಗಾರ ಆತ ಕೆಲಸಗಾರ ಎಂದಿದ್ದಾನೆ. ಅಷ್ಟರಲ್ಲಿ ಇಬ್ಬರು ಸಫಾರಿ ವೇಶದಲ್ಲಿ ಒಳಹೋದುದನ್ನು ಸ್ವಾಮೀಜಿ ಪ್ರಶ್ನಿಸಿದ್ದಾರೆ. ಅವರು ಶ್ರೀಗಳ ಅಂಗರಕ್ಷಕರು ಎಂದು ಕಾವಲುಗಾರ ವಾದಿಸಿದ್ದಾನೆ.

ಕಾವಲುಗಾರನೂ ಖಾಕಿ ಅಂಗಿ – ಪ್ಯಾಂಟ್ ನಲ್ಲಿದ್ದ. ಮಠದ ಕೆಲಸಗಾರನಿಗೆ ಅಂಗರಕ್ಷಕರಿಗೆ ಕಾವಲುಗಾರನಿಗೆ ಇಲ್ಲದ ಸಾಂಪ್ರದಾಯಿಕ ವಸ್ತ್ರಸಂಹಿತೆ ಸಾಂಪ್ರದಾಯಿಕ ಖಾವೀಧಾರಿ ಸಂನ್ಯಾಸಿಗೇಕೆ ಎಂದು ಸ್ವಾಮೀಜಿ ಆಕ್ಷೇಪಿಸಿದ್ದಾರೆ.

ಇಷ್ಟೆಲ್ಲ ನಡೆಯುತ್ತಿದ್ದರೂ ಅಲ್ಲಿದ್ದ ನೂರಾರು ಜನ ಮೂಕಪ್ರೇಕ್ಷಕರಾಗಿದ್ದರು. ವಾದ ತೀವ್ರಗೊಳ್ಳುವುದನ್ನು ಗಮನಿಸಿದ ಅಂಗರಕ್ಷಕರು ಧಾವಿಸಿ ಸ್ವಾಮೀಜಿಯವರಲ್ಲಿ ಕ್ಷಮೆ ಕೋರಿ ಪ್ರವೇಶ ನೀಡಲು ಮುಂದಾದರು. ಆದರೆ ಲಿಂಗಾಯತನಾಗಿ ಹುಟ್ಟಿದ, ಸಂಸ್ಕೃತ ಪ್ರಾಧ್ಯಾಪಕನಾಗಿರುವ ಒಬ್ಬ ಸಂನ್ಯಾಸಿಗೇ ಎಲ್ಲ ಸಮಾನವೆಂಬ ಅದ್ವೈತದ ಕ್ಷೇತ್ರದಲ್ಲಿಯೇ ಹೀಗಾದರೆ ಅನ್ಯರ ಪಾಡೇನು ಎಂದು ಬೇಸರ ವ್ಯಕ್ತಪಡಿಸಿ ಗುರುಗಳ ಭೇಟಿ ಮಾಡದೇ ಸ್ವಾಮೀಜಿ ಹೊರನಡೆದರು.

ಶಿರಾಡಿ ಬಳಿ ಲಾರಿ–ಕಾರು ಅಪಘಾತ: ಮೂವರಿಗೆ ಗಾಯ

• **ಉದಯವಾಹಿನಿ, ಶಿರಾಡಿ (ಉಪ್ಪಿನಂಗಡಿ):**

ರಾಷ್ಟ್ರೀಯ ಹೆದ್ದಾರಿ 75ರ ಕಡಬ ತಾಲ್ಲೂಕು ಶಿರಾಡಿ ಗ್ರಾಮದ ಬರ್ಚಿನಹಳ್ಳ ಎಂಬಲ್ಲಿ ಲಾರಿ ಮತ್ತು ಕಾರಿನ ನಡುವೆ ಅಪಘಾತ ಸಂಭವಿಸಿ, ಕಾರಿನಲ್ಲಿದ್ದ ಮೂವರು ಗಂಭೀರ ಗಾಯಗೊಂಡಿದ್ದಾರೆ. ಬಿ.ಸಿ.ರೋಡ್ ಕಡೆಯಿಂದ ಬೆಂಗಳೂರು ಕಡೆಗೆ ತೆರಳುತ್ತಿದ್ದ ಕಾರಿಗೆ, ಸಕಲೇಶಪುರ ಕಡೆಯಿಂದ ಮಂಗಳೂರು ಕಡೆಗೆ ಬರುತ್ತಿದ್ದ ಲಾರಿ ಡಿಕ್ಕಿ ಹೊಡೆದಿದೆ.

ಅಪಘಾತದಲ್ಲಿ ಕಾರಿನಲ್ಲಿದ್ದ ಅನೂಪ್ ಕುಮಾರ್, ಅವರ ಪತ್ನಿ ವೀಣಾ ಹಾಗೂ ಅತ್ತೆ ರೇಖಾ ಗಾಯಗೊಂಡಿದ್ದಾರೆ. ಡಿಕ್ಕಿಯ ರಭಸಕ್ಕೆ ಎರಡೂ ವಾಹನಗಳು ಜಖಂಗೊಂಡಿವೆ. ಸಕಲೇಶಪುರ ಕಡೆಯಿಂದ ಬರುತ್ತಿದ್ದ ಲಾರಿ ಚಾಲಕ ಮತ್ತೊಂದು ಲಾರಿಯನ್ನು ಹಿಂದಿಕ್ಕುವ ವೇಳೆ ಲಾರಿ ಡಿಕ್ಕಿ ಹೊಡೆದು ಅವಘಡ ಸಂಭವಿಸಿದೆ ಎಂದು ದೂರಲಾಗಿದೆ. ಗಾಯಗೊಂಡವರನ್ನು ನೆಲ್ಯಾಡಿಯ ಖಾಸಗಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಬಳಿಕ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಲಾರಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಚಿರತೆ ಉಗುರು ಸಂಗ್ರಹ: ಆರೋಪಿ ಬಂಧನ

• **ಉದಯವಾಹಿನಿ, ಶಿರಸಿ:**

ಅಕ್ರಮವಾಗಿ ಚಿರತೆ ಉಗುರುಗಳನ್ನು ಸಂಗ್ರಹಿಸಿಟ್ಟಿದ್ದ ಆರೋಪಿಯನ್ನು ಬಂಧಿಸುವಲ್ಲಿ ಬನವಾಸಿ ಅರಣ್ಯಾಧಿಕಾರಿಗಳ ತಂಡ ಯಶಸ್ವಿಯಾಗಿದೆ.ತಾಲ್ಲೂಕಿನ ಉಂಬಳೆಕೊಪ್ಪದ ಲಕ್ಷ್ಮಣ ಶೇಷಪ್ಪ ನಾಯ್ಕ ಬಂಧಿತ ಆರೋಪಿ. ಈತ ಚಿರತೆಯ 10 ಉಗುರುಗಳನ್ನು ಕಿತ್ತು ತನ್ನ ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ. ಉಪ ಅರಣ್ಯ ಸಂರಕ್ಷಣಾಧಿಕಾರಿ ಯೋಗೇಶ ಸಿ.ಕೆ. ಅವರ ಮಾರ್ಗದರ್ಶನ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಮಿತ ಚವ್ಹಾಣ ಅವರ ನೇತೃತ್ವದಲ್ಲಿ ಶುಕ್ರವಾರ ಬನವಾಸಿ ವಲಯ ಅರಣ್ಯಾಧಿಕಾರಿ ಕಾರ್ತಿಕ ಕಂಬಳಿ, ಸುಗಾವಿ ಉಪ ವಲಯ ಅರಣ್ಯಾಧಿಕಾರಿ ಪ್ರೇಮಕುಮಾರ ಕಾರಭಾರಿ ಮತ್ತು ಅರಣ್ಯ ಪಾಲಕರಾದ ಸಂತೋಷ ಕಕ್ಕಳಬೇಲಿ, ರವಿ ಜಾಡರ, ಎಚ್.ಎನ್.ಈಶ್ವರಪ್ಪ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

ಕಾಲುವೆಗಳ ವಾರಾಬಂದಿ ರದ್ದುಪಡಿಸಿ ನಿರಂತರ ನೀರು ಹರಿಸಲು : ದೊಡ್ಡಮನಿ ಮನವಿ

• **ಉದಯವಾಹಿನಿ, ಯಾದಗಿರಿ:**

ನಾರಾಯಣಪುರ ಬಸವಸಾಗರ ಜಲಾಶಯದ ಎಡದಂಡೆ ಮತ್ತು ಬಲದಂಡೆ ಕಾಲುವೆಗಳಿಗೆ ಜಾರಿಯಲ್ಲಿರುವ ವಾರಾಬಂದಿ ಪದ್ಧತಿಯನ್ನು ತಕ್ಷಣವೇ ರದ್ದುಪಡಿಸಿ, ಬೆಳೆಗಳನ್ನು ಉಳಿಸಲು ನಿರಂತರವಾಗಿ ನೀರು ಹರಿಸುವಂತೆ ಆಗ್ರಹಿಸಿ ಮಾನ್ಯ ಜಲಸಂಪನ್ಮೂಲ ಸಚಿವರಿಗೆ ಮನವಿ ಸಲ್ಲಿಸಲಾಗಿದೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಪರಸನಹಳ್ಳಿ ಗ್ರಾಮದ ಕಾನೂನು ವಿದ್ಯಾರ್ಥಿ ಪ್ರಶಾಂತ್ ಎಸ್. ದೊಡ್ಡಮನಿ ಅವರು ಜಲಾಶಯದ ಅಚ್ಚುಕಟ್ಟು ಪ್ರದೇಶದ ರೈತರ ಪರವಾಗಿ ಜಲಸಂಪನ್ಮೂಲ ಸಚಿವರಿಗೆ ಈ ಮನವಿ ಪತ್ರವನ್ನು ಸಲ್ಲಿಸಿದ್ದಾರೆ.

ಸಂಕಷ್ಟದಲ್ಲಿ ರೈತರು: ಬಸವಸಾಗರ ಜಲಾಶಯದ ಎಡ ಮತ್ತು ಬಲದಂಡೆ ಕಾಲುವೆಗಳ ಮೂಲಕ ನೀರು ಪಡೆದು ರೈತರು ತಮ್ಮ ಕೃಷಿ ಜಮೀನುಗಳಲ್ಲಿ ಭತ್ತ, ಮೆಣಸಿನಕಾಯಿ ಸೇರಿದಂತೆ ವಿವಿಧ ಬೆಳೆಗಳನ್ನು ಬೆಳೆಯುತ್ತಿದ್ದಾರೆ.

ಆದರೆ, ಪ್ರಸ್ತುತ ಜಾರಿಯಲ್ಲಿರುವ ವಾರಾಬಂದಿ ಪದ್ಧತಿಯಿಂದಾಗಿ ಬೆಳೆಗಳಿಗೆ ಅತ್ಯಗತ್ಯವಿರುವ ಸಮಯದಲ್ಲಿ ಸಮರ್ಪಕವಾಗಿ ನೀರು ದೊರೆಯದೆ ರೈತರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ವಿಶೇಷವಾಗಿ ಭತ್ತದ ಬೆಳೆ ಹಾಗೂ ಮೆಣಸಿನ ಗಿಡಗಳಿಗೆ ಸಮಯಕ್ಕೆ ಸರಿಯಾಗಿ ನೀರು ಸಿಗದ ಕಾರಣ ಗಿಡಗಳು ಒಣಗಲಾರಂಭಿಸಿವೆ. ಕೃಷಿಗಾಗಿ ಸಾಲ ಮಾಡಿ ಬಿತ್ತನೆ ಬೀಜ, ಗೊಬ್ಬರ, ಕೂಲಿ ಹಾಗೂ ಇತರ ಖರ್ಚುಗಳನ್ನು ಭರಿಸಿರುವ ರೈತರು ಬೆಳೆ ನಷ್ಟದ ಭೀತಿಯಲ್ಲಿದ್ದು, ಆರ್ಥಿಕವಾಗಿ ಕಂಗಾಲಾಗಿದ್ದಾರೆ.



ಉದಯವಾಹಿನಿ ಚಿತ್ರ

> ನಮ್ಮ ಪ್ರದೇಶದಲ್ಲಿ ಕಾಲುವೆಗಳಲ್ಲಿ ಜಾರಿಯಲ್ಲಿರುವ ವಾರಾಬಂದಿ ಪದ್ಧತಿಯಿಂದಾಗಿ ಭತ್ತ ಮತ್ತು ಮೆಣಸಿನಕಾಯಿ ಬೆಳೆಗಳು ಸಂಪೂರ್ಣವಾಗಿ ಒಣಗಿ ಹೋಗುತ್ತಿವೆ. ಈಗಾಗಲೇ ಶೇಕಡಾ 65 ರಷ್ಟು ಬೆಳೆಗಳು ಕೈಗೆ ಬಂದಿದ್ದು, ಈ ನಿರ್ಣಾಯಕ ಹಂತದಲ್ಲಿ ನೀರಿಲ್ಲದಿದ್ದರೆ ರೈತರಿಗೆ ಚೇತರಿಸಿಕೊಳ್ಳಲಾಗದಷ್ಟು ನಷ್ಟವಾಗುತ್ತದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಆದ್ದರಿಂದ ಜಲಸಂಪನ್ಮೂಲ ಸಚಿವರು ತಕ್ಷಣವೇ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ವಾರಾಬಂದಿ ಪದ್ಧತಿಯನ್ನು ರದ್ದುಪಡಿಸಬೇಕು ಮತ್ತು ಕಾಲುವೆಗಳಿಗೆ ನಿರಂತರವಾಗಿ ನೀರು ಹರಿಸಲು ಕ್ರಮ ಕೈಗೊಳ್ಳಬೇಕು.
>
> ಪ್ರಶಾಂತ್ ಎಸ್. ದೊಡ್ಡಮನಿಕಾನೂನು ವಿದ್ಯಾರ್ಥಿ

CM ಸಭೆಗೂ ಮುನ್ನ ಮೂರು ಪ್ರಮುಖ ಬೇಡಿಕೆಗಳಿಗೆ ರೈತರ ಬಿಗಿ ಪಟ್ಟು

ರಾಜ್ಯ ಸರ್ಕಾರವು ಪ್ರತಿ ಟನ್ ಕಬ್ಬಿಗೆ ರೂ.1,000 ಬೆಂಬಲ ಬೆಲೆ ನೀಡಬೇಕು, ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ರೂ.4,500 ಪಾವತಿಸಬೇಕು

• **ಉದಯವಾಹಿನಿ, ಬೆಳಗಾವಿ:**

ಕಬ್ಬು ಬೆಂಬಲ ಬೆಲೆಗೆ ಆಗ್ರಹಿಸಿ ಹೋರಾಟ ನಡೆಸುತ್ತಿರುವ ಉತ್ತರ ಕರ್ನಾಟಕದ ರೈತರು ಈಗ ರಾಜ್ಯ ಸರ್ಕಾರಕ್ಕೆ ಅಂತಿಮ ಗಡುವು ನೀಡಿದ್ದಾರೆ. ಅಕ್ಟೋಬರ್ 26 ರಂದು ಬೆಳಗಾವಿಯಲ್ಲಿ ಮುಖ್ಯಮಂತ್ರಿ ಡಿಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆಯಲಿರುವ ಉನ್ನತ ಮಟ್ಟದ ಸಭೆಗೂ ಮುನ್ನ ರೈತ ಸಂಘಟನೆಗಳು ಮೂರು ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದು, ಇವುಗಳು ಈಡೇರದಿದ್ದರೆ ಅಕ್ಟೋಬರ್ 27 ರಂದು ರಾಜ್ಯಾದ್ಯಂತ ಬಂದ್ ಆಚರಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

1 : 27 ರಂದು ರಾಜ್ಯಾದ್ಯಂತ ಬಂದ್ ಎಚ್ಚರಿಕೆ ನೀಡಿದ್ದಾರೆ
2 : ಕಸ ಅಥವಾ ಕೆಸರು ಇದೆ ಎಂಬ ಕಾರಣ 'ಅಕ್ರಮ'
3 : ಬೆಲೆಯನ್ನು ಪ್ರತಿ ಕೆ.ಜಿ.ಗೆ ರೂ.60ಕ್ಕೆ ಹೆಚ್ಚಿಸಬೇಕು

ರಾಜ್ಯ ಸರ್ಕಾರವು ಪ್ರತಿ ಟನ್ ಕಬ್ಬಿಗೆ ರೂ.1,000 ಬೆಂಬಲ ಬೆಲೆ ನೀಡಬೇಕು, ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ರೂ.4,500 ಪಾವತಿಸಬೇಕು ಹಾಗೂ ಕಬ್ಬಿನ ತೂಕ ಮಾಡುವಾಗ ಕಸ ಅಥವಾ ಕೆಸರು ಇದೆ ಎಂಬ ಕಾರಣ ನೀಡಿ ಹಣ ಕಡಿತಗೊಳಿಸುವ ಅಕ್ರಮ ಪದ್ಧತಿಯನ್ನು ತಡೆಯಬೇಕು ಎಂಬುದು ರೈತರ ಪ್ರಮುಖ ಬೇಡಿಕೆಗಳಾಗಿವೆ ಎಂದು ತಿಳಿಸಿದರು.

ಇದೇ ವೇಳೆ ಈ ಬೇಡಿಕೆಗಳಿಗೆ ರಾಜ್ಯ ಸರ್ಕಾರ ಸ್ಪಂದಿಸದಿದ್ದರೆ ಅಕ್ಟೋಬರ್ 27ರಂದು ಕರ್ನಾಟಕ ಬಂದ್ ನಡೆಸಲಾಗುವುದು ಎಂದೂ ಎಚ್ಚರಿಕೆ ನೀಡಿದ್ದಾರೆ.ಇದಕ್ಕೂ ಮೊದಲು ಅಕ್ಟೋಬರ್ 17ರಂದು ರಾಜ್ಯದ ಕಬ್ಬು ಬೆಳೆಯುವ ಜಿಲ್ಲೆಗಳ ರೈತರು ತಮ್ಮ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದರು. ಸಕ್ಕರೆಯ ಕನಿಷ್ಠ ಬೆಂಬಲ ಬೆಲೆಯನ್ನು ಪ್ರತಿ ಕೆ.ಜಿ.ಗೆ ರೂ.60ಕ್ಕೆ ಹೆಚ್ಚಿಸಬೇಕು ಎಂಬುದು ರೈತರ ಮೊದಲ ಬೇಡಿಕೆಯಾಗಿದೆ. ಈ ವಿಷಯದಲ್ಲಿ ಸರ್ಕಾರದೊಂದಿಗೆ ಚರ್ಚೆ ನಡೆಸಲು ರೈತರು ಸಿದ್ಧರಿದ್ದಾರೆ ಎಂದು ಹೇಳಿದ್ದಾರೆ.

ಪ್ರತಿ ಟನ್ ಕಬ್ಬಿಗೆ ರೂ.1,000 ಬೆಂಬಲ ಬೆಲೆ

ಇದಲ್ಲದೆ, ಕರ್ನಾಟಕಕ್ಕೆ ತೈಲ ಮಾರುಕಟ್ಟೆ ಕಂಪನಿಗಳಿಂದ ಶೇ.100ರಷ್ಟು ಎಥನಾಲ್ ಹಂಚಿಕೆ ಮಾಡಬೇಕು ಎಂಬುದು ಮತ್ತೊಂದು ಬೇಡಿಕೆಯಾಗಿದೆ. ಕಳೆದ ವರ್ಷ ರಾಜ್ಯಕ್ಕೆ ಶೇ.30ರಿಂದ 40ರಷ್ಟು ಮಾತ್ರ ಹಂಚಿಕೆ ಮಾಡಲಾಗಿತ್ತು. ಇದರಿಂದ ಹಲವು ಎಥನಾಲ್ ಮತ್ತು ಸಕ್ಕರೆ ಕಾರ್ಖಾನೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗದೆ, ಹಣದ ಹರಿವಿನ ಸಮಸ್ಯೆ ಎದುರಿಸಿದ್ದವು. ಪರಿಣಾಮವಾಗಿ ರೈತರಿಗೆ ಹಣ ಪಾವತಿಸುವುದರ ಮೇಲೂ ಪರಿಣಾಮ ಬೀರಿತ್ತು. ಈ ಬೇಡಿಕೆ ಈಡೇರಿದರೆ ಮೆಕ್ಕೆಜೋಳ ಬೆಳೆಗಾರರಿಗೂ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.. ದೇಶೀಯ ಬಳಕೆಯ ಸಕ್ಕರೆ ಮತ್ತು ವಾಣಿಜ್ಯ ಬಳಕೆಯ ಸಕ್ಕರೆಗೆ ಪ್ರತ್ಯೇಕ ಬೆಲೆ ನಿಗದಿಪಡಿಸಬೇಕು ಹಾಗೂ ವಾಣಿಜ್ಯ ಸಕ್ಕರೆಗೆ ಹೆಚ್ಚಿನ ಬೆಲೆ ನೀಡಬೇಕು ಎಂಬುದು ರೈತರ ಮೂರನೇ ಬೇಡಿಕೆಯಾಗಿದೆ. ಇದರಿಂದ ಸಕ್ಕರೆ ಕಾರ್ಖಾನೆಗಳು ಮತ್ತು ರೈತರಿಗೆ ಉತ್ತಮ ಆದಾಯ ದೊರೆಯಲಿದೆ ಎಂಬುದು ಅವರ ಅಭಿಪ್ರಾಯವಾಗಿದೆ. ಇದೇ ವೇಳೆ ರೈತರೊಂದಿಗೆ ಮಾತುಕತೆ ನಡೆಸಿರುವುದಾಗಿ ತಿಳಿಸಿದ ಜಿಲ್ಲಾಧಿಕಾರಿ, ಕೇಂದ್ರ ಸಚಿವರು ಮತ್ತು ಮುಖ್ಯಮಂತ್ರಿಗಳ ಕಚೇರಿಗಳನ್ನೂ ಸಂಪರ್ಕಿಸಲಾಗಿದೆ. ರೈತರ ಹಿತದೃಷ್ಟಿಯಿಂದ ನಿರ್ಧಾರ ಕೈಗೊಳ್ಳುವ ಭರವಸೆಯನ್ನು ಎರಡೂ ಸರ್ಕಾರಗಳು ನೀಡಿವೆ, ಪ್ರತಿಭಟನಾಕಾರರು ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದಾರೆ.

ಉದಯವಾಹಿನಿ ಚಿತ್ರ

> ರೈತರ ಹಿತದೃಷ್ಟಿಯಿಂದ ನಿರ್ಧಾರ ಕೈಗೊಳ್ಳುವುದಾಗಿ ಕೇಂದ್ರ ಹಾಗೂ ರಾಜ್ಯ ಎರಡೂ ಸರ್ಕಾರಗಳು ಭರವಸೆ ನೀಡಿವೆ. ಬೆಳಗಾವಿ, ಬಾಗಲಕೋಟೆ, ವಿಜಯಪುರ, ಹುಬ್ಬಳ್ಳಿ–ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ ರೈತರು ಕಳೆದ ಮೂರು ದಿನಗಳಿಂದ ತಮ್ಮ ಸಮಸ್ಯೆಗಳ ಕುರಿತು ಪ್ರತಿಭಟನೆ ನಡೆಸುತ್ತಿದ್ದಾರೆ.
>
> –ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್

> ಮುಖ್ಯಮಂತ್ರಿ ಅವರೊಂದಿಗಿನ ಸಭೆಯಲ್ಲಿ ರೈತರ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ನಿರೀಕ್ಷೆಯಿದೆ. ಸಭೆಯಲ್ಲಿ ಮೂರು ಪ್ರಮುಖ ಬೇಡಿಕೆಗಳನ್ನು ಮಂಡಿಸಲಾಗುವುದು ಎಂದು ಹೇಳಿದರು.–ಕಾರ್ಯದರ್ಶಿ ಪ್ರೇಮ್ ಚೌಗಲಾ

ರಾಜಕೀಯದ ಧ್ರುವತಾರೆ ಸಿದ್ದರಾಮಯ್ಯ, ನನ್ನ ರಾಜಕೀಯ ಗುರು

• **ಉದಯವಾಹಿನಿ, ಶ್ರವಣಬೆಳಗೊಳ:**

'ಅನ್ನರಾಮಯ್ಯ' ಎಂಬ ಹೆಸರಿನಿಂದಲೂ ಜನಪ್ರಿಯರಾಗಿರುವ ಸಿದ್ದರಾಮಯ್ಯ, ರಾಜ್ಯ ರಾಜಕೀಯ ಕ್ಷೇತ್ರದ ಧ್ರುವತಾರೆ. ಅಂತಹ ಶ್ರೇಷ್ಠ ನಾಯಕರು ನನ್ನ ರಾಜಕೀಯ ಗುರುಗಳು ಎಂದು ಹೇಳಿಕೊಳ್ಳಲು ನನಗೆ ಅಪಾರ ಹೆಮ್ಮೆ ಇದೆ ಎಂದು ಅಬಕಾರಿ ಸಚಿವ ಶಿವಲಿಂಗೇಗೌಡ ಹಾಡಿ ಹೊಗಳಿದ್ದಾರೆ.

ಕಬ್ಬಾಳು ಗ್ರಾಮದಲ್ಲಿ ನಿರ್ಮಾಣಗೊಂಡಿರುವ ದಾಸಶ್ರೇಷ್ಠ ಭಕ್ತ ಕನಕದಾಸರ ಪ್ರತಿಮೆ ಅನಾವರಣ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಶಿವಲಿಂಗೇಗೌಡ, ಶಾಸಕನಾಗಿ ಜನಸೇವೆ ಆರಂಭಿಸಿ, ಇಂದು ಸಚಿವನಾಗಿ ಬೆಳೆಯಲು ಮಾರ್ಗದರ್ಶನ ನೀಡಿ, ನನ್ನ ರಾಜಕೀಯ ಬೆಳವಣಿಗೆಗೆ ಕಾರಣಕರ್ತರಾದ ಸಿದ್ದರಾಮಯ್ಯನವರ ಬಗ್ಗೆ ನನಗೆ ಅಪಾರ ಗೌರವ ಮತ್ತು ಅಭಿಮಾನವಿದೆ. ಅವರ ನಾಯಕತ್ವ, ಮಾರ್ಗದರ್ಶನ ಹಾಗೂ ಜನಪರ ಆಡಳಿತದ ಬದ್ಧತೆ ಸದಾ ನನಗೆ ಪ್ರೇರಣೆಯಾಗಿದೆ ಎಂದರು. ಈ ರಾಜ್ಯದ ಮುಖ್ಯ ನಾಯಕರ ಪಟ್ಟಿಯಲ್ಲಿ ಸಿದ್ದರಾಮಯ್ಯ ಸೇರಿದ್ದಾರೆ.

ಮಾತಿಗೆ ತಕ್ಕಂತೆ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಟ್ಟಿರುವ ನಾಯಕರು ಯಾರದರೂ ಇದ್ದರೆ ಅದು ಸಿದ್ದರಾಮಯ್ಯ. ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಮಾಡಲು ಸಂಪೂರ್ಣ ಸಹಕಾರ ಕೊಟ್ಟಿದ್ದಾರೆ ಎಂದು ಕೊಂಡಾಡಿದರು.ಸಿದ್ದರಾಮಯ್ಯ ಕರ್ನಾಟಕ ರಾಜ್ಯವನ್ನು ಪ್ರಗತಿ ಪಥದತ್ತ ಕೊಂಡೊಯ್ದಿದ್ದಾರೆ. ಅವರು ಹದಿನೇಳು ಬಾರಿ ಬಜೆಟ್ ಮಂಡಿಸಿರುವ ಏಕೈಕ ರಾಜಕಾರಣಿ. ಭಾರತ ದೇಶದ ರಾಜಕಾರಣದಲ್ಲಿ ಯಾರು ಅತಿ ಹೆಚ್ಚು ಬಜೆಟ್ ಮಂಡಿಸಿರುವ ಇತಿಹಾಸವಿಲ್ಲ. ಯಾವುದೇ ದೋಷ, ಕಳಂಕ ಇಲ್ಲದೆ ರಾಜಕೀಯ ಮಾಡಿಕೊಂಡು ಬಂದಿರುವವರು ಯಾರಾದರೂ ಇದ್ದರೆ ಅದು ಸಿದ್ದರಾಮಯ್ಯ ಮಾತ್ರ. ಕರ್ನಾಟಕದ ಇತಿಹಾಸದಲ್ಲಿ ಅವರ ಹೆಸರು ತೆಗೆಯಲು ಸಾಧ್ಯವಿಲ್ಲ ಎಂದರು.

ಉದಯವಾಹಿನಿ ಚಿತ್ರ

ಆನೆ ತರಬೇತಿ ನೀಡಿಯೇ ಆಯ್ಕೆ ಮಾಡಲಾಗಿತ್ತು: ಮಧು ಬಂಗಾರಪ್ಪ

ಉದಯವಾಹಿನಿ ಚಿತ್ರ

• **ಉದಯವಾಹಿನಿ, ಶಿವಮೊಗ್ಗ:**

ದಸರಾ ಮಹೋತ್ಸವದ ಅಂತಿಮ ದಿನವಾದ ಮೊನ್ನೆ ಅಕ್ಟೋಬರ್ 21 ರಂದು ಮಧ್ಯಾಹ್ನ ಶ್ರೀ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯ ಅಂಬಾರಿ ಮೆರವಣಿಗೆಯಲ್ಲಿ ಆಕಸ್ಮಿಕವಾಗಿ ನಡೆದ ಅವಘಡದ ಕುರಿತು, ಸರ್ಕಾರವು ಸಂಪೂರ್ಣ ವರದಿ ಪಡೆದು ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್. ಮಧು ಬಂಗಾರಪ್ಪ ಹೇಳಿದ್ದಾರೆ. ನಿನ್ನೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ದಸರಾ ಉತ್ಸವವು ಅತ್ಯಂತ ಸಂಭ್ರಮ ಹಾಗೂ ಅದ್ದೂರಿಯಾಗೇ ನಡೆದಿದೆ. ಆದರೆ ಅಂತಿಮ ದಿನವಾದ ಅಕ್ಟೋಬರ್ 21ರಂದು ಅಂಬಾರಿ ಹೊತ್ತ 'ಸೋಮಣ್ಣ' ಆನೆಯು ಗಾಬರಿಗೊಂಡು ಓಡಿದ ಕಾರಣ ಅಂಬಾರಿ ಬಿದ್ದು ಅವಘಡ ಸಂಭವಿಸಿದೆ ಎಂದು ವಿವರಿಸಿದರು. ಅದೃಷ್ಟವಶಾತ್ ಈ ಅವಘಡದಲ್ಲಿ ಯಾವುದೇ ಮಾನವ ಪ್ರಾಣಹಾನಿ ಸಂಭವಿಸಿಲ್ಲ. ಆದರೆ, ಇದು ನಮಗೆ ಗಂಭೀರವಾಗಿ ಎಚ್ಚೆತ್ತುಕೊಳ್ಳುವ ಸಂದರ್ಭವನ್ನು ಸೃಷ್ಟಿಸಿದೆ ಎಂದರು. ಕಳೆದ ಕೆಲವು ವರ್ಷಗಳಿಂದ ಅರಣ್ಯದಿಂದ ಆನೆಗಳನ್ನು ಕರೆತಂದು ತರಬೇತಿ ನೀಡಿ ಅಂಬಾರಿಗೆ ಬಳಸಿಕೊಳ್ಳಲಾಗುತ್ತಿದೆ. ಈ ಬಾರಿಯೂ ಯಶಸ್ವಿಯಾಗಿ ತರಬೇತಿ ನೀಡಲಾಗಿತ್ತು. ಸರ್ಕಾರದ ಅಧಿಕೃತ ಅನುಮತಿ ಪಡೆದು, ಅರಣ್ಯ ಇಲಾಖೆಯ ನಿಯಮಾನುಸಾರ ಆನೆಗಳ ಆಯ್ಕೆ ಮತ್ತು ತರಬೇತಿ ನೀಡಲಾಗಿದೆ ಎಂದರು. ಅಧಿಕಾರಿಗಳ ಸಂಪೂರ್ಣ ಒಮ್ಮತ, ಮಾಹಿತಿ ಹಾಗೂ ಆತ್ಮವಿಶ್ವಾಸದಿಂದಲೇ 'ಸೋಮಣ್ಣ' ಆನೆಯೇ ಅಂಬಾರಿ ಹೊರಬೇಕು ಎಂದು ಮೊದಲೇ ನಿರ್ಧರಿಸಲಾಗಿತ್ತೇ ಹೊರತು ಕೊನೆಯ ಕ್ಷಣದ ನಿರ್ಧಾರವಲ್ಲ. ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ತರಬೇತಿ ನೀಡಲಾಗಿತ್ತು. ಸೋಮಣ್ಣ ಆನೆಗೆ ಅಂಬಾರಿ ಹೊರುವ ಸಾಮರ್ಥ್ಯವಿದೆ ಎಂಬ ಕಾರಣಕ್ಕೇ ಈ ತೀರ್ಮಾನ ಕೈಗೊಳ್ಳಲಾಗಿತ್ತು ಎಂದರು.

> ಅಂಬಾರಿ ಸಾಗಿಸುವ ಪ್ರಕ್ರಿಯೆಯಲ್ಲಿ ಡಿಸಿಎಫ್, ಡಿಸಿ, ಎಸ್‌ಪಿ, ಸಿಇಓ, ಎಡಿಸಿ, ಶಾಸಕರು ಹಾಗೂ ಪಾಲಿಕೆ ಆಯುಕ್ತರು ಸೇರಿದಂತೆ ಎಲ್ಲಾ ಹಿರಿಯ ಅಧಿಕಾರಿಗಳು ಮತ್ತು ಸಮಿತಿಯವರು ಸಕ್ರಿಯವಾಗಿ ಭಾಗವಹಿಸಿ ತಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.
>
> – ಮಧು ಬಂಗಾರಪ್ಪ

ಭಾರತೀಯ ಸೇನೆಗೆ ಸೇರಲು ಗ್ರಾಮೀಣ ಯುವಕರಿಗೆ ಉಚಿತ ತರಬೇತಿ

• **ಉದಯವಾಹಿನಿ, ಗದಗ:**

ಸೇನೆಗೆ ಸೇರುವುದು ಅನೇಕ ಯುವಕರ ಕನಸು. ಈ ಕನಸನ್ನು ನನಸಾಗಿಸಲು ಉತ್ತರ ಕರ್ನಾಟಕದ ಗ್ರಾಮೀಣ ಯುವಕರಿಗಾಗಿ ಅನ್ನದಾನೇಶ್ವರ ಮಠ ಹಾಗೂ ವಿಜಯಮಾರ್ಗ ಟ್ರಸ್ಟ್ ವತಿಯಿಂದ ಒಂದು ತಿಂಗಳ ಉಚಿತ ಸೇನಾ ನೇಮಕಾತಿ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಸೆಪ್ಟೆಂಬರ್ ಕೊನೆಯ ವಾರದಿಂದ ಗದಗ ಜಿಲ್ಲೆಯ ಇಟಗಿ ಗ್ರಾಮದಲ್ಲಿ ತರಬೇತಿ ಶಿಬಿರ ನಡೆಯುತ್ತಿದ್ದು, ಗದಗ, ಬಾಗಲಕೋಟೆ, ಕೊಪ್ಪಳ, ವಿಜಯಪುರ ಸೇರಿದಂತೆ ವಿವಿಧ ಜಿಲ್ಲೆಗಳ ಸುಮಾರು 300 ಯುವಕರು ತರಬೇತಿ ಪಡೆಯುತ್ತಿದ್ದಾರೆ.

ಈ ಯುವಕರಿಗೆ ಮಠದ ವತಿಯಿಂದ ಉಚಿತ ವಸತಿ, ಊಟ ಹಾಗೂ ತರಬೇತಿ ವ್ಯವಸ್ಥೆ ಕಲ್ಪಿಸಲಾಗಿದೆ. ವಿಜಯಮಾರ್ಗ ಟ್ರಸ್ಟ್ ನಿವೃತ್ತ ಸೇನಾಧಿಕಾರಿಗಳನ್ನು ಆಹ್ವಾನಿಸಿ ಯುವಕರಿಗೆ ತರಬೇತಿ ನೀಡುತ್ತಿದೆ. ಗ್ರಾಮೀಣ ಯುವಕರಿಗೆ ಸೇನಾ ಸೇವೆಗೆ ಸೇರ್ಪಡೆಯಾಗಲು ಸೂಕ್ತ ವೇದಿಕೆ ಕಲ್ಪಿಸುವುದು ಹಾಗೂ ಭಾರತೀಯ ಸೇನೆ, ಗಡಿ ಭದ್ರತಾ ಪಡೆ , ಅಗ್ನಿವೀರ್ ಸೇರಿದಂತೆ ವಿವಿಧ ರಕ್ಷಣಾ ಸೇವೆಗಳ ಕುರಿತು ಮಾಹಿತಿ ನೀಡುವುದು ಈ ಶಿಬಿರದ ಪ್ರಮುಖ ಉದ್ದೇಶವಾಗಿದೆ. ಸೇನಾ ನೇಮಕಾತಿಗೆ ಅಗತ್ಯವಿರುವ ದೈಹಿಕ ಸಾಮರ್ಥ್ಯವನ್ನು ವೃದ್ಧಿಸುವುದರ ಜತೆಗೆ ಯುವಕರನ್ನು ಮಾನಸಿಕವಾಗಿಯೂ ಸಜ್ಜುಗೊಳಿಸಲು ಶಿಬಿರದಲ್ಲಿ ವಿಶೇಷ ಒತ್ತು ನೀಡಲಾಗುತ್ತಿದೆ. ಪ್ರತಿವರ್ಷ ಅನ್ನದಾನೇಶ್ವರ ಮಠ ಹಾಗೂ ವಿಜಯಮಾರ್ಗ ಟ್ರಸ್ಟ್ ವತಿಯಿಂದ ಕರ್ನಾಟಕದಾದ್ಯಂತ ಉಚಿತ ಸೇನಾ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ನಿವೃತ್ತ ಸೇನಾಧಿಕಾರಿಗಳು ಅರ್ಜಿಗಳನ್ನು ಪರಿಶೀಲಿಸಿ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುತ್ತಾರೆ. ಅದರ ಆಧಾರದ ಮೇಲೆ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುತ್ತದೆ.

ಮೆಕ್ಕಾದಲ್ಲಿ 600ಕ್ಕೂ ಹೆಚ್ಚು ಕನ್ನಡಿಗರು ಕರೆತರದಿದ್ದರೆ ಸುಪ್ರೀಂ ಕೋರ್ಟ್‌ಗೆ ಅರ್ಜಿ,

• **ಉದಯವಾಹಿನಿ, ಚಿಕ್ಕಮಗಳೂರು:**

ಮೆಕ್ಕಾದಲ್ಲಿ ಉಮ್ರಾ ಯಾತ್ರೆಗೆ ತೆರಳಿ ಸಿಲುಕಿರುವ ಕರ್ನಾಟಕದ 600ಕ್ಕೂ ಹೆಚ್ಚು ಯಾತ್ರಿಕರನ್ನು ಅಕ್ಟೋಬರ್ 27ರೊಳಗೆ ವಾಪಸ್ ಕರೆತರದಿದ್ದರೆ ಸುಪ್ರೀಂ ಕೋರ್ಟ್ ನಲ್ಲಿ ಅರ್ಜಿ ಸಲ್ಲಿಸಲಾಗುವುದು ಎಂದು ರಾಜ್ಯ ಸರ್ಕಾರ ವಿಮಾನಯಾನ ಸಂಸ್ಥೆಗಳಿಗೆ ಎಚ್ಚರಿಕೆ ನೀಡಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾತ್ರಿಕರು ಹಿಂದಿರುಗುವ ಪ್ರಯಾಣದ ಟಿಕೆಟ್‌ಗಳಿಗೆ ಹಣ ಪಾವತಿಸಿರುವುದರಿಂದ ಅವರನ್ನು ಸುರಕ್ಷಿತವಾಗಿ ವಾಪಸ್ ಕರೆತರುವ ಜವಾಬ್ದಾರಿ ಇಂಡಿಗೋ, ಆಕಾಶ ಮತ್ತು ಏರ್ ಇಂಡಿಯಾದಂತಹ ವಿಮಾನಯಾನ ಸಂಸ್ಥೆಗಳ ಮೇಲಿದೆ ಎಂದು ಹೇಳಿದರು.

ಸಿಲುಕಿರುವ ಯಾತ್ರಿಕರಿಗೆ ಹಜ್ ಸಮಿತಿಯು ವಸತಿ ಮತ್ತು ಊಟದ ವ್ಯವಸ್ಥೆ ಮಾಡಿದ್ದು, ಅವರು ಅಕ್ಟೋಬರ್ 27ರೊಳಗೆ ವಾಪಸ್ ಆಗುವ ನಿರೀಕ್ಷೆಯಿದೆ. ಯಾತ್ರಿಕರ ಕುಟುಂಬದವರಿಗೆ ನೆರವಾಗಲು 948350 3132 ಸಹಾಯವಾಣಿ ಸಂಖ್ಯೆಯನ್ನು ಕೂಡ ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ

ನೀರಾವರಿ ಶಿಸ್ತು ಪಾಲಿಸಲು ನಿವೃತ್ತ ಕಾರ್ಯದರ್ಶಿ ಸಲಹೆ

ಸಮಸ್ಯೆಗಳು ಒಂದಕ್ಕೊಂದು ಥಳುಕು ಹಾಕಿಕೊಂಡಿವೆ. ಲಭ್ಯ ಇರುವ ನೀರನ್ನು ಬಳಸಿ ದೇಶದ 140 ಕೋಟಿ ಜನರಿಗೆ ಆಹಾರ ಒದಗಿಸಬೇಕು

• **ಉದಯವಾಹಿನಿ, ಧಾರವಾಡ:**

ನೀರಾವರಿಗೆ ಒಂದು ಶಿಸ್ತು ಇದೆ. ಆ ಶಿಸ್ತನ್ನು ಪಾಲಿಸಿದರೆ ನೀರನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಬಹುದು ಎಂದು ಲೋಕೋಪಯೋಗಿ ಇಲಾಖೆ ನಿವೃತ್ತ ಕಾರ್ಯದರ್ಶಿ ಜಿ.ಸಿ. ತಲ್ಲೂರು ಹೇಳಿದರು. ನ್ಯಾಷನಲ್ ಅಲಯನ್ಸ್ ಆಫ್ ಪೀಪಲ್ ಮೂವ್‌ಮೆಂಟ್ (ಎನ್‌ಎಪಿಎಂ), ಸಫಾಕ್ ಕರ್ನಾಟಕ, ಇಕೋ ವಾಚ್,

1 : ದೇಶದಲ್ಲಿ ದೊಡ್ಡ ರೈತರು ಶೇ 8ರಷ್ಟು ಇದ್ದಾರೆ
2 : ದೇಶದಲ್ಲಿ ಅತಿಸಣ್ಣ ರೈತರು ಶೇ 70ರಷ್ಟು ಇದ್ದಾರೆ
3 : ಮನುಷ್ಯ, ಭೂಮಿ, ನೀರು ಹೊಂದಾಣಿಕೆ ಇರಬೇಕು

ಸರ್ವೋದಯ ಸಮಾಜ, ಪೀಪಲ್ಸ್ ಫಸ್ಟ್ ಫೌಂಡೇಷನ್, ಗಾಂಧಿ ಶಾಂತಿ ಪ್ರತಿಷ್ಠಾನ ಹಾಗೂ ಹುಬ್ಬಳ್ಳಿ–ಧಾರವಾಡ ನಾಗರಿಕ ಪರಿಸರ ಸಮಿತಿ ವತಿಯಿಂದ ನಗರದ ಸೇವಾಲಯದಲ್ಲಿ ನಡೆದ 'ಮಲಪ್ರಭಾ –ಮಹದಾಯಿ ನದಿ ಮಾತುಕತೆಗಳು' ಅಂತರರಾಜ್ಯ ಬಹುಪಾಲುದಾರರ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

'ಜಮೀನಿನಲ್ಲಿ ನೀರು ಹರಿಯಬಿಟ್ಟು ಹೋದರೆ ಅದು ಹರಿದು ಮೇಲಿನ ಮಣ್ಣು ತೇಲಿ ಹೋಗುತ್ತದೆ. ಮಣ್ಣಿನ ಸತ್ವ ಕಡಿಮೆಯಾಗುತ್ತದೆ. ಮನುಷ್ಯ, ಭೂಮಿ ಮತ್ತು ನೀರು ಈ ಮೂರರ ನಡುವೆ ಹೊಂದಾಣಿಕೆ ಇರಬೇಕು. 'ನೀತಿ ಮೀರಬಾರದು' ಎಂದು ಸಲಹೆ ನೀಡಿದರು.

'ದೇಶದಲ್ಲಿ ದೊಡ್ಡ ರೈತರು (10 ಹೆಕ್ಟೇರ್‌ಗೂ ಹೆಚ್ಚು ಜಮೀನು ಇರುವವರು) ಶೇ 8ರಷ್ಟು ಇದ್ದಾರೆ. ಅತಿಸಣ್ಣ ರೈತರು (1 ಹೆಕ್ಟೇರ್, ಅದಕ್ಕಿಂತ ಕಡಿಮೆ ಜಮೀನು ಇರುವವರು) ಶೇ 70ರಷ್ಟು ಇದ್ದಾರೆ. ಜಮೀನು ಇಲ್ಲದವರೂ ಇದ್ದಾರೆ. ಭೂಮಿ ಹಂಚಿಕೆ ವ್ಯತಿರಿಕ್ತವಾಗಿದೆ. ಸಮಸ್ಯೆಗಳು ಒಂದಕ್ಕೊಂದು ಥಳುಕು ಹಾಕಿಕೊಂಡಿವೆ. ಲಭ್ಯ ಇರುವ ನೀರನ್ನು ಬಳಸಿ ದೇಶದ 140 ಕೋಟಿ ಜನರಿಗೆ ಆಹಾರ ಒದಗಿಸಬೇಕು' ಎಂದು ವಿವರಿಸಿದರು.

'ಜಲಾನಯನ ಪ್ರದೇಶದ ಹಿತಕ್ಕೆ ನಾವು ಬದ್ಧರಾಗಿರಬೇಕು. ಕರ್ನಾಟಕದಲ್ಲಿ ಏಳು ಜಲಾನಯನ (ಕೃಷ್ಣ, ಕಾವೇರಿ, ತುಂಗಭದ್ರಾ....) ಪ್ರದೇಶಗಳು ಇವೆ. ಈ ಪೈಕಿ ಕೃಷ್ಣಾ ಜಲಾಯನ ಶೇ 60ರಷ್ಟು ಪ್ರದೇಶ ಹೊಂದಿದೆ. ಅಂತರರಾಜ್ಯಗಳ ನದಿ ನೀರು ವಿವಾದ ಕಾನೂನಿನಂತೆ ಕೃಷ್ಣಾ ನದಿ ನೀರನ್ನು ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳಿಗೆ ಹಂಚಿಕೆ ಮಾಡಲಾಗಿದೆ. ಲಭ್ಯ ನೀರನ್ನು ಬಳಸಿಕೊಂಡು ಕೃಷಿ ಮಾಡಬೇಕು' ಎಂದರು.

ಹಂಚಿಕೆಯಾಗಿರುವ ನೀರಿನಲ್ಲಿ ಏನೇನು ಮಾಡಬಹುದು, ಏನು ಮಾಡಲು ಸಾಧ್ಯವಿಲ್ಲ ಎಂದು ದೂರಗಾಮಿ ದೃಷ್ಟಿ ಇಟ್ಟುಕೊಂಡರು ಅದರಂತೆ ಕೃಷಿ, ತೋಟಗಾರಿಕೆ, ರೇಷ್ಮೆ ಬೆಳೆಗಳಿಗೆ ಹೊಂದಿಸಿಕೊಳ್ಳಬೇಕು. ಕರ್ನಾಟಕದಲ್ಲಿ ಬೆಳೆ ಬೆಳೆಯುವ ಕೃಷಿ ಭೂಮಿ 128 ಲಕ್ಷ ಹೆಕ್ಟೇರ್ ಇದೆ.

'ಪರಿಸರಕ್ಕೆ ಪೂರಕವಾಗಿ ಭೌಗೋಳಿಕ ವಾತಾವರಣವನ್ನು ಕಾಪಾಡಿಕೊಳ್ಳಬೇಕು. ಮಲಪ್ರಭಾ ಜಲಾಶಯ ನಿರ್ಮಾಣದಿಂದ ಪಶ್ಚಿಮ ಘಟ್ಟಕ್ಕೆ ಹಾನಿಯಾಗಿಲ್ಲ' ಎಂದು ರೈತ ಮುಖಂಡ ಶಂಕರ ಅಂಬಲಿ ಪ್ರತಿಪಾದಿಸಿದರು.

'ಜಲಾಶಯಕ್ಕೆ ನೀರಿನ ಕೊರತೆ ಇರುವುದರಿಂದ ಮಹದಾಯಿ ನೀರನ್ನು ಸ್ವಲ್ಪ ವರ್ಗಾವಣೆ ಮಾಡಿಕೊಂಡರೆ ಅನುಕೂಲವಾಗುತ್ತದೆ. ತಜ್ಞರು ಸಮಗ್ರವಾಗಿ ಅಧ್ಯಯನ ನಡೆಸಿ ಯೋಜನೆ ಸಿದ್ಧಪಡಿಸಿದ್ದಾರೆ. ಹುಬ್ಬಳ್ಳಿ–ಧಾರವಾಡ ಅವಳಿನಗರಕ್ಕೆ ಮಲಪ್ರಭಾ ಜಲಾಶಯದಿಂದ ನೀರು ಪೂರೈಕೆಯಾಗುತ್ತದೆ' ಎಂದು ಹೇಳಿದರು.

ಉದಯವಾಹಿನಿ ಚಿತ್ರ

> ರಾಜ್ಯಕ್ಕೆ 3.9 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿ ಕೋರ್ಟ್ ಆದೇಶ ಮಾಡಿದೆ. ಇನ್ನೂ 3.66 ಟಿಎಂಸಿ ಅಡಿ ನೀರಿಗಾಗಿ ಬೇಡಿಕೆ ಸಲ್ಲಿಸಲಾಗಿದೆ. ನೀರಿನ ಬವಣೆ ನೀಗಿಸಲು ಮಹದಾಯಿ ಯೋಜನೆ ಅನುಷ್ಠಾನಗೊಳಿಸಬೇಕು.
>
> –ಸುಭಾಷ ಚಂದ್ರಗೌಡ ಪಾಟೀಲ,

> ಹಂಚಿಕೆಯಾಗಿರುವ ಎಲ್ಲಾ ನೀರನ್ನು ಬಳಸಿಕೊಂಡರೂ ರಾಜ್ಯದಲ್ಲಿ ಅರ್ಧದಷ್ಟು ಭೂಮಿ ಮಳೆಯಾಶ್ರಿತವಾಗಿ (ಒಣ ಬೇಸಾಯ) ಉಳಿಯುತ್ತದೆ. ನೀರು ಹೆಚ್ಚು ಬೇಕಾಗುವ ಬೆಳೆ ಬೆಳೆಯುವುದನ್ನು ಬಿಡಬೇಕು. ಕಡಲೆ, ಜೋಳ, ಮೆಕ್ಕೆಜೋಳ, ಗೋಧಿ ಮೊದಲಾದವನ್ನು ಹೆಚ್ಚು ಬೆಳೆಯಬೇಕು' ಎಂದು ತಿಳಿಸಿದರು.
>
> –ಕಾರ್ಯದರ್ಶಿ ಜಿ.ಸಿ. ತಲ್ಲೂರು